ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 23 ಸೋಮವಾರ 2023

ಸಂಪುಟ: 43 | ಸಂಚಿಕೆ: 276 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಹೆಚ್.ಡಿ.ಕೋಟೆ ಬಳಿ ಹುಲಿ ದಾಳಿಗೆ

ಯುವಕ ಬಲಿ

ಡಿ.ಬಿ.ಕುಪ್ಪೆ ಜ.22(ಎಂಟಿವೈ, ಮಂಜು) – ತಿ.ನರಸೀಪುರದಲ್ಲಿ ಚಿರತೆಗೆ ಬಾಲಕ ಬಲಿಯಾದ ಮರು ದಿನವೇ ಹೆಚ್.ಡಿ. ಕೋಟೆಯ ಬಳ್ಳೆಹಾಡಿ ಸಮೀಪವೇ ಆದಿವಾಸಿ ಯುವಕನೊಬ್ಬ ಹುಲಿ ದಾಳಿಗೆ ಬಲಿಯಾಗಿದ್ದು, ಹಾಡಿಯ ನಿವಾಸಿಗಳು ಮೈಸೂರು–ಮಾನಂದವಾಡಿ ರಸ್ತೆಯಲ್ಲಿ ರಸ್ತೆತಡೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು.



ಮಂಜು

ಹೆಚ್.ಡಿ.ಕೋಟೆ ತಾಲೂಕಿನ ಬಳ್ಳೆಹಾಡಿ ನಿವಾಸಿ ಕಾಳ ಅಲಿಯಾಸ್ ಬೆಟ್ಟದ ಹುಲಿ ಹಾಗೂ ಪುಷ್ಪ ದಂಪತಿ ಮಗ ಮಂಜು (18) ಎಂಬಾತನೇ ಹುಲಿ ದಾಳಿಗೆ ಬಲಿಯಾದವನಾಗಿದ್ದಾನೆ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಡುವೆ ಹಾದು ಹೋಗಿರುವ ಮೈಸೂರು–ಹೆಚ್.ಡಿ. ಕೋಟೆ–ಮಾನಂದವಾಡಿ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಇರುವ ಬಳ್ಳೆ ಹಾಡಿಯ ಸಮೀಪವೇ ಹುಲಿ ದಾಳಿ ನಡೆದಿದೆ. ಅಲ್ಲದೆ, ಬಳ್ಳೆಯಲ್ಲಿರುವ ಡಿ.ಬಿ.ಕುಪ್ಪೆ ಆರ್‌ಎಫ್‌ಓ ಕಚೇರಿ ಹಿಂಭಾಗವೇ ಹುಲಿ ದಾಳಿ ಮಾಡಿ ಆದಿವಾಸಿ ಯುವಕನನ್ನು ಬಲಿ ಪಡೆದಿದ್ದು, ಬಳ್ಳೆ ಹಾಡಿ ನಿವಾಸಿಗಳನ್ನು ಆಕ್ರೋಶಕ್ಕೀಡು ಮಾಡಿದೆ.

ಘಟನೆ ವಿವರ: ಬಳ್ಳೆ ಹಾಡಿಯ ಸಮೀಪವೇ ಇರುವ ಬಳ್ಳೆ ಆನೆ ಶಿಬಿರದಲ್ಲಿರುವ ದಸರಾ ಮಹೋತ್ಸವದ ಮಾಜಿ ಕ್ಯಾಪ್ಟನ್ ಅರ್ಜುನ, ದುರ್ಗಾಪರಮೇಶ್ವರಿ ಹಾಗೂ ಕುಮಾರಸ್ವಾಮಿ ಸಾಕಾನೆಯನ್ನು ನೋಡಲು ▶ 6ನೇ ಪುಟಕ್ಕೆ

ಬಳ್ಳೆ ಸಾಕಾನೆ ಶಿಬಿರದ ಬಳಿ ದುರ್ಘಟನೆ



ಬಳ್ಳೆ ಸಾಕಾನೆ ಶಿಬಿರದ ಬಳಿ ಹಾಡಿ ನಿವಾಸಿಗಳು ಹೆಚ್.ಡಿ.ಕೋಟೆ–ಮಾನಂದವಾಡಿ ಮುಖ್ಯ ರಸ್ತೆಗೆ ಕಲ್ಲುಗಳನ್ನು ಅಡ್ಡಲಾಗಿಟ್ಟು ಪ್ರತಿಭಟನೆ ನಡೆಸಿದರು.



ಹುಲಿ ದಾಳಿಯಿಂದ ಮೃತಪಟ್ಟ ಮಂಜು ಪೋಷಕರಿಗೆ ಪ್ರಾಥಮಿಕ ಹಂತದಲ್ಲಿ 2.50 ಲಕ್ಷ ರೂ. ಪರಿಹಾರ ಮೊತ್ತದ ಚೆಕ್ ವಿತರಿಸುತ್ತಿರುವುದು.

ಮರಿಗಳ ರಕ್ಷಣೆಗಾಗಿ ದಾಳಿ ಸಾಧ್ಯತೆ

ಯುವಕನ ಮೇಲೆ ದಾಳಿ ನಡೆಸಿರುವ ಹುಲಿಗೆ 4 ಮರಿಗಳಿದ್ದು, ಆ ಮರಿಗಳಿಗೆ ಏನಾದರೂ ತೊಂದರೆಯಾಗಬಹುದು ಎಂಬ ಆತಂಕದಿಂದ ಯುವಕನ ಮೇಲೆ ದಾಳಿ ನಡೆಸಿರುಬಹುದು ಎಂದು ಅನುಮಾನಿಸಲಾಗಿದೆ. ಅರಣ್ಯ ಇಲಾಖೆಯ ಕ್ವಾರ್ಟಸ್ ಹಿಂಭಾಗದ ರಸ್ತೆಯ ಪೊದೆಯಲ್ಲೇ ಮರಿಗಳೊಂದಿಗೆ ವಿಹರಿಸುತ್ತಿದ್ದ ಹುಲಿ ಯುವಕ ಮಂಜು ಬಂದೊಡನೆ ದಾಳಿ ನಡೆಸಿದೆ. ಆತನನ್ನು ರಸ್ತೆಯಿಂದ ಪಕ್ಕಕ್ಕೆ ಎಳೆದುಕೊಂಡು ಹೋಗಿ ಮರಿಗಳೊಂದಿಗೆ ಕಾಡಿನತ್ತ ತೆರಳಿದೆ. ಹುಲಿ ದಾಳಿ ನಡೆಸಿ ಎಳೆದೊಯ್ಯುತ್ತಿದ್ದ ದೃಶ್ಯ ಕಂಡು ಯುವಕನೊಬ್ಬ ಜಾಗೃತಗೊಂಡು ಸಮೀಪದಲ್ಲೇ ಇದ್ದ ಸಿಬ್ಬಂದಿಗೆ ತಿಳಿಸಿದ್ದಾನೆ.

ಚಿರತೆ ದಾಳಿ: ಬಾಲಕನ ರುಂಡವಿಲ್ಲದ ಶವ ಪತ್ತೆ

- ಘಟನಾ ಸ್ಥಳದಿಂದ 1 ಕಿ.ಮೀ. ದೂರದಲ್ಲಿ ಜಮೀನೊಂದರ ಪೊದೆಯಲ್ಲಿ ಪತ್ತೆ
- ಕಳೆದ ರಾತ್ರಿಯೇ 5 ಲಕ್ಷ ರೂ. ಪರಿಹಾರದ ಚೆಕ್ ವಿತರಣೆ
- ಸ್ಥಳಕ್ಕೆ ಶಾಸಕ ಅಶ್ವಿನ್‌ಕುಮಾರ್, ಮೈಸೂರು ಜಿಲ್ಲಾಧಿಕಾರಿ ಡಾ.ರಾಜೇಂದ್ರ, ಸಿಸಿಫ್ ಡಾ. ಮಾಲತಿ ಪ್ರಿಯ ಖುದ್ದು ಭೇಟಿ
- ಮುಗಿಲು ಮುಟ್ಟಿದ ಪೋಷಕರ ಆಕ್ರಂದನ

ತಿ.ನರಸೀಪುರ, ಜ.22(ಎಂಟಿವೈ)–ಚಿರತೆ ದಾಳಿ ನಡೆಸಿ ಹೊತ್ತೊಯ್ದಿದ್ದ 11 ವರ್ಷದ ಬಾಲಕನ ರುಂಡವಿಲ್ಲದ ಮೃತದೇಹ ಪತ್ತೆಯಾಗಿದ್ದು, ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು.



ಜಯಂತ್

ತಿ.ನರಸೀಪುರ ತಾಲೂಕಿನ ಹೊರಳಹಳ್ಳಿ ಗ್ರಾಮದ ನಿವಾಸಿ ದಶಕಂಠ ಎಂಬುವರ ಪುತ್ರ ಜಯಂತ್ ಶನಿವಾರ ರಾತ್ರಿ 8.30ರಲ್ಲಿ ಅಂಗಡಿಗೆ ತೆರಳಿದ್ದಾಗ ನಿಗೂಢವಾಗಿ ಕಾಣೆಯಾಗಿದ್ದ. ಗ್ರಾಮದ ಮುಖ್ಯ ರಸ್ತೆಯಲ್ಲಿ ರಕ್ತದ ಕಲೆ ಚೆಲ್ಲಿದ್ದರಿಂದ 11 ವರ್ಷದ ಬಾಲಕ ಜಯಂತ್‌ನನ್ನು ಚಿರತೆ ಹೊತ್ತೊಯ್ದಿರಬಹುದು ಎಂದು ಶಂಕಿಸಲಾಗಿತ್ತು. ಇಂದು ಬೆಳಗ್ಗೆ ಶೋಧನಾ ಕಾರ್ಯ ಕೈಗೊಂಡ ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಗ್ರಾಮಸ್ಥರಿಗೆ ಘಟನಾ ಸ್ಥಳದಿಂದ 1 ಕಿ.ಮೀ. ಅಂತರದಲ್ಲಿ ಪೊದೆಯೊಂದರಲ್ಲಿ ಬಾಲಕನ ಮೃತದೇಹ ಪತ್ತೆಯಾಗಿದೆ. ಚಿರತೆ ದಾಳಿ ವೇಳೆ ಬಾಲಕ ಜಯಂತ್‌ನ ಕುತ್ತಿಗೆಗೆ ಬಲವಾಗಿ ಕಚ್ಚಿದ್ದರಿಂದ ಆತನ ರುಂಡ ಬೇರ್ಪಟ್ಟಿದ್ದು, ಅದನ್ನು ಚಿರತೆ ಕೊಂಡೊಯ್ದಿರಬಹುದು ಎಂದು ಶಂಕಿಸಲಾಗಿದೆ.

ಮುಗಿಲು ಮುಟ್ಟಿದ ಆಕ್ರೋಶ: ಪೊದೆಯೊಂದರಲ್ಲಿ ಬಾಲಕ ಜಯಂತ್ ಮೃತದೇಹ ಪತ್ತೆಯಾಗುತ್ತಿದ್ದಂತೆ ಪೋಷಕರು ಹಾಗೂ ಗ್ರಾಮಸ್ಥರಲ್ಲಿ ಆಕ್ರೋಶ ಮುಗಿಲು ಮುಟ್ಟಿತು. ಈ ವೇಳೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಈ ವೇಳೆ ಅರಣ್ಯ ಅಧಿಕಾರಿಗಳು ಯಾವುದೇ ಪ್ರತಿಕ್ರಿಯೆ ನೀಡಲು ಸಾಧ್ಯವಾಗದೇ ಸಮಾಧಾನ ಮಾಡುವ ಪ್ರಯತ್ನ ಮಾಡಿದರು. ಆದರೂ ಮೃತ ಬಾಲಕನ ತಂದೆ ದಶಕಂಠ ಅಧಿಕಾರಿಗಳ ನಿರ್ಲಕ್ಷ್ಯತನದಿಂದಾಗಿ ▶ 6ನೇ ಪುಟಕ್ಕೆ

ತಿ.ನರಸೀಪುರದಲ್ಲಿ ರಸ್ತೆ ತಡೆ, ಅಧಿಕಾರಿಗಳ ವಿರುದ್ಧ ಆಕ್ರೋಶ



ತಿ.ನರಸೀಪುರ, ಜ.22– ತಾಲೂಕಿನಲ್ಲಿ ಮನುಷ್ಯರ ಮೇಲೆ ದಾಳಿ ನಡೆಸಿ ಬಲಿ ಪಡೆಯುತ್ತಿರುವ ನರಭಕ್ಷಕ ಚಿರತೆ ಸೆರೆಹಿಡಿಯಲು ಅರಣ್ಯ ಇಲಾಖೆ ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ಆರೋಪಿಸಿ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಸಾರ್ವಜನಿಕರು ಭಾನುವಾರ ಪಟ್ಟಣದಲ್ಲಿ ರಸ್ತೆ ತಡೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಕಪಿಲಾ ನದಿ ಸೇತುವೆ ಮೇಲೆ ಜಮಾಯಿಸಿದ ನೂರಾರು ಪ್ರತಿಭಟನಾಕಾರರು ರಸ್ತೆಗೆ ಅಡ್ಡಲಾಗಿ ಟ್ರ್ಯಾಕ್ಟರ್ ನಿಲ್ಲಿಸಿ ರಸ್ತೆ ಸಂಚಾರಕ್ಕೆ ಅಡ್ಡಿಪಡಿಸಿದರು. ಪರಿಣಾಮ ನೂರಾರು ವಾಹನಗಳು ಕಿಮೀಗಟ್ಟಲೆ ನಿಂತಲ್ಲೇ ನಿಂತಿದ್ದರಿಂದ ಸಾರ್ವಜನಿಕ ಓಡಾಟಕ್ಕೆ ತೀವ್ರ ತೊಂದರೆಯಾಯಿತು. ವಿವಿಧ ಗ್ರಾಮಗಳಿಂದ ಪಟ್ಟಣಕ್ಕೆ ಆಗಮಿಸಿದ್ದ ಸಾವಿರಾರು ಪ್ರಯಾಣಿಕರು ಕಾಲ್ನಡಿಗೆಯಲ್ಲಿ ಪಟ್ಟಣ ಸೇರುವ ಪರಿಸ್ಥಿತಿ ನಿರ್ಮಾಣವಾಯಿತು.

ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಪಿ.ಸುಬ್ರಹ್ಮಣ್ಯ, ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೆಹುಂಡಿ ಮಹೇಶ್ ನೇತೃತ್ವದಲ್ಲಿ ಪ್ರತಿಭಟನಾನಿರತರು ನರಹಂತಕ ▶ 6ನೇ ಪುಟಕ್ಕೆ

ಚಿರತೆಗೆ ಕಂಡಲ್ಲಿ ಗುಂಡು: ಡಿಸಿ ಆದೇಶ

ತಿ.ನರಸೀಪುರ: ಮನುಷ್ಯರ ಮೇಲೆ ದಾಳಿ ನಡೆಸಿ ಬಲಿ ಪಡೆಯುತ್ತಿರುವ ಚಿರತೆಗಳನ್ನು ಕಂಡಲ್ಲಿ ಗುಂಡಿಕ್ಕಲು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಆದೇಶ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ರಾಜೇಂದ್ರ ತಿಳಿಸಿದರು.

ತಾಲೂಕಿನ ಹೊರಳಹಳ್ಳಿಯಲ್ಲಿ ಚಿರತೆ ದಾಳಿಗೆ ಬಾಲಕ ಸಾವನ್ನಪ್ಪಿದ ಹಿನ್ನಲೆಯಲ್ಲಿ ಆಕ್ರೋಶಗೊಂಡ ರೈತರು ಪಟ್ಟಣದ ಕಪಿಲಾ ಸೇತುವೆ ಮೇಲೆ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸುತ್ತಿದ್ದ ಸ್ಥಳಕ್ಕೆ ಆಗಮಿಸಿದ ಮಾತನಾಡಿದ ಅವರು, ತಾಲೂಕಿನಲ್ಲಿ ಚಿರತೆ ದಾಳಿಯಿಂದ ನಾಲ್ವರು ಸಾವನ್ನಪ್ಪಿರುವ ಬಗ್ಗೆ ವಿಷಾದವಿದೆ. ನಿಮ್ಮ ನೋವು ▶ 6ನೇ ಪುಟಕ್ಕೆ

ಚಿರತೆ ಸೆರೆಗೆ ವಿಶೇಷ ಟಾಸ್ಕ್‌ಫೋರ್ಸ್: ಸಿಎಂ

ಸುತ್ತೂರು, ಜ.22(ಎಂಟಿವೈ)– ತಿ.ನರಸೀಪುರದಲ್ಲಿ 11 ವರ್ಷದ ಬಲಿ ಪಡೆದ ಚಿರತೆ ಸೆರೆಗೆ ವಿಶೇಷ ಟಾಸ್ಕ್‌ಫೋರ್ಸ್ ರಚಿಸುವಂತೆ ಸೂಚಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಸುತ್ತೂರಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ತಿ.ನರಸೀಪುರ ವ್ಯಾಪ್ತಿಯಲ್ಲಿ ಚಿರತೆ ಪದೇ ಪದೇ ದಾಳಿ ಮಾಡಿ ಜನರನ್ನು ಬಲಿ ಪಡೆಯುತ್ತಿರುವ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದೇನೆ. 4 ತಿಂಗಳಲ್ಲಿ ನಾಲ್ವರನ್ನು ಬಲಿ ಪಡೆದಿರುವುದು ಬೇಸರದ ಸಂಗತಿ. ಚಿರತೆ ದಾಳಿ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದೇನೆ. ಶನಿವಾರ ಸಹ ▶ 8ನೇ ಪುಟಕ್ಕೆ

ಫೆಬ್ರವರಿಯಲ್ಲಿ ಮೋದಿ 2 ಬಾರಿ ರಾಜ್ಯಕ್ಕೆ ಭೇಟಿ

ಬೆಂಗಳೂರು: ಕರ್ನಾಟಕ ವಿಧಾನಸಭೆ ಚುನಾವಣೆಗೆ ದಿನ ಸನ್ನಿಹಿತವಾಗುತ್ತಿದ್ದಂತೆ ಕೇಂದ್ರ ನಾಯಕರ ಭೇಟಿ ಹೆಚ್ಚಾಗುತ್ತಿದೆ. ಈಗಾಗಲೇ ಜನವರಿ ತಿಂಗಳಲ್ಲಿ 2 ಬಾರಿ ರಾಜ್ಯ ಪ್ರವಾಸ ಮಾಡಿರುವ ಪ್ರಧಾನಿ ಮೋದಿಯವರ ಕರ್ನಾಟಕ ಯಾತ್ರೆ ಫೆಬ್ರವರಿಯಲ್ಲಿಯೂ ಮುಂದುವರಿಯಲಿದೆ. ಫೆ6ರಂದು ಪ್ರಧಾನಿ ಮೋದಿಯವರು ವಿವಿಧ ▶ 8ನೇ ಪುಟಕ್ಕೆ



ಧರ್ಮ, ಜನಜೀವನ ಬೆರೆತಾಗ ಸುಸಂಸ್ಕೃತ ಸಮಾಜ ಸಾಧ್ಯ

ಸುತ್ತೂರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ನಂಜನಗೂಡು,ಜ.22(ರಂಗಸ್ವಾಮಿ)–ಜಾತ್ರೆಗಳು ನಾಡಿನ ಸಂಸ್ಕೃತಿ ಪ್ರತೀಕ. ಧರ್ಮ ಮತ್ತು ಜನಜೀವನ ಎರಡೂ ಬೆರೆತಾಗ ಸುಸಂಸ್ಕೃತ ಸಮಾಜ ನಿರ್ಮಾಣ ಸಾಧ್ಯ. ದೇಶದಲ್ಲಿ ಮಠಮಾನ್ಯಗಳು ಜ್ಞಾನದ ಮೂಲಕ ಜಾತಿಯ ವಿಷಬೀಜ ಮತ್ತು ದಾಸೋಹದ ಮೂಲಕ ಜಾತಿಯನ್ನು ಹೊಡೆ ದೋಡಿಸಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಶ್ರೀಕ್ಷೇತ್ರ ಸುತ್ತೂರಿನಲ್ಲಿ ಆದಿ ಜಗದ್ಗುರು ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಭಾನುವಾರ ನಡೆದ ಭಜನಾ ಮೇಳ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ನಮ್ಮ ಹಿರಿಯರು ಜಾತಿ, ಧರ್ಮ, ವಯಸ್ಸಿನ ಬೇಧವಿಲ್ಲದೆ ಎಲ್ಲಾ ವರ್ಗದ ಜನರೂ ಸಹ ಒಂದೆಡೆ ಸೇರಲಿ, ಆ ಮೂಲಕ ಎಲ್ಲರಲ್ಲೂ ಸಮಾನತೆಯ ಭಾವ ಮೂಡಲಿ ಎಂಬ ಸದುದ್ದೇಶದಿಂದ ಜಾತ್ರೆ ಮತ್ತು ಉತ್ಸವಗಳ ಪರಂಪರೆ ಮಾಡಿದ್ದಾರೆ. ಮನುಷ್ಯ ಆಸ್ತಿ ಅಂತಸ್ತಿನಿಂದ ದೊಡ್ಡವನಾಗುವುದಿಲ್ಲ. ನಮ್ಮ ನಡೆ ನುಡಿಯಿಂದ ದೊಡ್ಡವನಾಗುತ್ತಾನೆ. ನಮ್ಮ ನಡವಳಿಕೆಯಿಂದ ಆಚಾರ ವಿಚಾರ ಮೂಡುತ್ತದೆ. ಸಂಸ್ಕಾರದಿಂದ ಸಂಸ್ಕೃತಿ ಬರುತ್ತದೆ.



ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಭಾನುವಾರ ನಡೆದ ಭಜನಾ ಮೇಳ ಸಮಾರೋಪ ಸಮಾರಂಭದಲ್ಲಿ ಸಿಎಂ ಬಸವರಾಜ ಬೊಮ್ಮಾಯಿ ಮಾತನಾಡಿದರು.

ಎಲ್ಲ ಇದ್ದರೂ ಸಹ ತ್ಯಾಗ ಮಾಡುವುದೇ ಸಂಸ್ಕೃತಿ, ನಾನು ಎಂಬ ಅಹಂಭಾವ ತೊರೆದು ಭಕ್ತಿ ಭಾವದಿಂದ ನಮಸ್ಕರಿಸುವುದು ನಮ್ಮ ಪರಂಪರೆ. ಇದನ್ನು ನಮ್ಮ ಮುಂದಿನ ಪೀಳಿಗೆಗೆ ಹೇಳಿಕೊಡಬೇಕಿದೆ ಎಂದರು.

ಯಾವ ಸಮಾಜದಲ್ಲಿ ಶಿಕ್ಷಣವಿರುತ್ತದೆ ಆ ಸಮಾಜ ಪ್ರಗತಿಪರ ಸ್ವಾವಲಂಬನೆ ಸಮಾಜವಾಗುತ್ತದೆ. ದೇಶದಲ್ಲಿ ಸರ್ಕಾರಗಳು ಇಲ್ಲದ ಸಂದರ್ಭಗಳಲ್ಲಿ ಮಠಮಾನ್ಯಗಳು ಹಸಿವು ಇದ್ದಾಗ ಅನ್ನ ನೀಡಿ, ಆಶ್ರಯವಿಲ್ಲದವರಿಗೆ ಆಶ್ರಯ ನೀಡಿ, ಶಿಕ್ಷಣ ನೀಡಿ ಸಮಾಜದಲ್ಲಿ ಸಂಸ್ಕಾರ ಬೆಳೆಸುತ್ತಿರುವ ದೊಡ್ಡ ಚರಿತ್ರೆ ಇದೆ. ಸಂತ ಶ್ರೇಷ್ಠರು ತತ್ವಜ್ಞಾನಿಗಳು ನಮ್ಮ ಪರಂಪರೆ ಶ್ರೀಮಂತಗೊಳಿಸಿದ್ದಾರೆ. ಸುತ್ತೂರು ಮಠ ಸಮುದಾಯಕ್ಕೆ ಬೇಕಾಗಿರುವ ಕೃಷಿ ಮೇಳ, ವಿಚಾರ ಸಂಕಿರಣ, ದೇಸಿ ಆಟಗಳಿಗೆ ಉತ್ತೇಜನ ನೀಡುವ ಮೂಲಕ ಜಾತ್ರೆಯನ್ನು ಅರ್ಥಪೂರ್ಣಗೊಳಿಸಿದೆ ಎಂದರು.

ನನಗೆ ಯಾವುದರ ಮೇಲೆ ನಂಬಿಕೆ ಇದೆಯೋ ಅದೇ ಧರ್ಮ. ರಾಮ ಇದ್ದಾರೆ ಎಂದರೆ ಇದ್ದಾನೆ. ಇಲ್ಲ ಎಂದರೆ ಅದು ಅವರ ನಂಬಿಕೆ, ಆ ಬಗ್ಗೆ ನಾವು ಮಾತನಾಡಲು ಹೋಗುವುದಿಲ್ಲ. ಆದರೆ ಸಮಾಜದಲ್ಲಿ ಕೆಲವರು ನಮ್ಮ ನಂಬಿಕೆಗಳನ್ನು ಕೀಳುಮಟ್ಟದಲ್ಲಿ ಹೇಸಿಗೆ ಬರುವ ರೀತಿ ಮಾತನಾಡುವ ಮೂಲಕ ನಮ್ಮ ಪರಂಪರೆ, ನಮ್ಮ ನಂಬಿಕೆ, ಆದರ್ಶಗಳ ಬಗ್ಗೆ ಗೊಂದಲ ಮೂಡಿಸಿ ನಾವು ನಂಬಿರುವ ಆದರ್ಶಗಳನ್ನು ಬುಡಮೇಲು ಮಾಡುತ್ತಿದ್ದಾರೆ. ಅವರು ನಮ್ಮ ಭಾವನೆಗಳಿಗೆ ಧಕ್ಕೆಯಾಗುತ್ತದೆ. ನಮ್ಮ ಮನಸ್ಸು ಘಾಸಿಗೊಳ್ಳುತ್ತದೆ ಎಂಬ ಚಿಂತನೆ ಮಾಡುವುದಿಲ್ಲ. ನನ್ನ ನಂಬಿಕೆಯನ್ನು ▶ 8ನೇ ಪುಟಕ್ಕೆ

ಮತ್ತೆ ಪ್ರತಿಭಟನೆಗೆ ಮುಂದಾದ ಸಾರಿಗೆ ನೌಕರರು

ನಾಳೆ ಬಸ್ ಸಂಚಾರದಲ್ಲಿ ವ್ಯತ್ಯಯ

ಬೆಂಗಳೂರು,ಜ.22–ವೇತನ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಸರ್ಕಾರದ ವಿರುದ್ಧ ಮಂಗಳವಾರ ಸಾರಿಗೆ ನೌಕರರು ಬೃಹತ್ ಧರಣಿ ಸತ್ಯಾಗ್ರಹ ಹಮ್ಮಿಕೊಂಡಿದ್ದು, ರಾಜ್ಯಾದ್ಯಂತ ಒಂದು ದಿನ ಬಸ್ ಸಂಚಾರ ವ್ಯತ್ಯಯ ಸಾಧ್ಯತೆಯಿದೆ.



6 ವರ್ಷಗಳು ಕಳೆದರೂ ಸಾರಿಗೆ ನೌಕರರಿಗೆ ಸರ್ಕಾರ ವೇತನ ಹೆಚ್ಚಳ ಮಾಡಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರದ ವಿರುದ್ಧ ರಾಜ್ಯ ಸಾರಿಗೆ ನೌಕರರು ಮತ್ತೆ ಸಿಡಿದಿದ್ದಾರೆ. ಜತೆಗೆ ಪುನಃ ಬೀದಿಗಿಳಿದು ಪ್ರತಿಭಟನೆ ನಡೆಸಲು ಸಾರಿಗೆ ನೌಕರರು ಸಿದ್ಧರಾಗಿದ್ದು, ಜನವರಿ 24ರಂದು ಸಾರಿಗೆ ನೌಕರರು ಸರ್ಕಾರದ ಗಮನ ಸೆಳೆಯಲು ಬೃಹತ್ ಧರಣಿ ಸತ್ಯಾಗ್ರಹ ನಡೆಸಲಿದ್ದಾರೆ. ಹೀಗಾಗಿ ಮಂಗಳವಾರ ರಾಜ್ಯಾದ್ಯಂತ ಬಸ್ ಸಂಚಾರ ವ್ಯತ್ಯಯ ಸಾಧ್ಯತೆಯಿದೆ.

ಪ್ರತಿಭಟನೆಗೆ ಕೆಎಸ್‌ಆರ್‌ಟಿಸಿ ಸ್ಟಾಫ್ ಹಾಗೂ ವರ್ಕರ್ಸ್ ಫೆಡರೇಷನ್, ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾ ಮಂಡಳಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಫೆಡರೇಷನ್, ಕೆ.ಎಸ್.ಆರ್.ಟಿ.ಸಿ ಹಾಗೂ ಬಿ.ಎಂ.ಟಿ.ಸಿ ಯುನೈಟೆಡ್ ಎಂಪ್ಲಾಯೀಸ್ ಯೂನಿಯನ್, ಕೆ.ಎಸ್.ಆರ್.ಟಿ.ಸಿ ಹಾಗೂ ಎಸ್‌ಟಿ ಎಂಪ್ಲಾಯೀಸ್ ಯೂನಿಯನ್, ಕ.ರಾ.ರ.ಸಾ ಸಂಸ್ಥೆ ಪ.ಜಾ/ ಪ.ಪಂಗಳ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘಗಳು ಬೆಂಬಲವನ್ನು ನೀಡಲಿದೆ. ರಾಜ್ಯ ಸಾರಿಗೆ ನೌಕರರ ಮುಖಂಡ ಅನಂತಸುಬ್ಬರಾವ್ ನೇತೃತ್ವದಲ್ಲಿ ಧರಣಿ ಸತ್ಯಾಗ್ರಹ ನಡೆಯಲಿದೆ. 4 ನಿಗಮದ ವಿಭಾಗೀಯ ಕಚೇರಿ ಮುಂದೆ ಧರಣಿ ಹಾಗೂ ಬಿಎಂಟಿಸಿ ▶ 8ನೇ ಪುಟಕ್ಕೆ

ಪ್ರಸ್ತುತ ಸಾಹಿತ್ಯ ಕೋಮುವಾದ, ಜಾತೀಯತೆ ಸೋಂಕಿಗೆ ಸಿಲುಕಿದೆ

4ನೇ ಮೈಸೂರು ಲಿಟರರಿ ಫೆಸ್ಟ್ ಉದ್ಘಾಟಿಸಿ ಭಾರತೀಯ ಸೇನಾ ನಿವೃತ್ತ ಕ್ಯಾಪ್ಟನ್ ಜಿ.ಆರ್.ಗೋಪಿನಾಥ್ ಬೇಸರ

ಮೈಸೂರು, ಜ.22(ಪಿಎಂ)– ಹಿಂದಿನ ನಮ್ಮ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳು ಅಡಕವಾಗಿದ್ದರೆ, ಪ್ರಸ್ತುತದಲ್ಲಿ ಕೋಮುವಾದ, ಜಾತೀಯತೆ ಎಂಬ ಸೋಂಕಿಗೆ ಸಿಲುಕಿ ಬಳಲುವಂತಾಗಿದೆ ಎಂದು ಉದ್ಯಮಿಗಳು, ರೈತರು, ಅಂಕಣಕಾರರೂ ಆದ ಭಾರತೀಯ ಸೇನಾ ನಿವೃತ್ತ ಕ್ಯಾಪ್ಟನ್ ಜಿ.ಆರ್.ಗೋಪಿನಾಥ್ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಮೈಸೂರು ಲಿಟರರಿ ಅಸೋಸಿಯೇಷನ್ (ಎಂಎಲ್‌ಎ) ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಆಂಗ್ಲ ಸಾಹಿತ್ಯದ ಗೋಷ್ಠಿ–ಸಂವಾದದ '4ನೇ ಮೈಸೂರು ಲಿಟರರಿ ಫೆಸ್ಟ್–2023' ಅನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂತಹ ಸೋಂಕುಗಳಿಗೆ ಸಿಲುಕಿ ನಮ್ಮ ಸಾಹಿತ್ಯ ಇಂದು ವಿಭಜನೆಯಾಗುತ್ತಿದ್ದು, ಈ ಸೋಂಕುಗಳಿಂದ ಮುಕ್ತವಾಗದಿದ್ದರೆ ಅದನ್ನು ಶ್ರೇಷ್ಠ ಸಾಹಿತ್ಯ ಎಂದು ಕರೆಯಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದರು.

ವೇದ, ಪುರಾಣಗಳಲ್ಲಿ ಜಾತಿಗಳನ್ನು ಪ್ರಸ್ತಾಪಿಸಿಲ್ಲ. ಆದಿಕವಿ ಪಂಪ, 'ಮನುಷ್ಯ ಜಾತಿ ತಾನೊಂದೇ ವಲಂ' ಎಂದು ಸಾರಿದ್ದರೆ, ಸಂತ ಭಕ್ತ ಕನಕದಾಸರು, 'ಕುಲ ಕುಲವೆಂದು ಹೊಡೆದಾಡದಿರಿ' ಎಂಬ ಸಂದೇಶ ನೀಡಿದ್ದಾರೆ. ಪ್ರಸ್ತುತ ಮತ್ತು ಹಿಂದಿನ ನಮ್ಮ ಸಾಹಿತ್ಯದಲ್ಲಿ ಭಾರೀ ವ್ಯತ್ಯಾಸ ಉಂಟಾಗಿದ್ದು, ಈ ಹಿಂದಿನ ಸಾಹಿತ್ಯದಲ್ಲಿ ಮಾನವೀಯತೆ, ಸೌಹಾರ್ದತೆಗೆ ಒತ್ತು ನೀಡಲಾಗಿದೆ ಎಂದರು.





ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಎಂಎಲ್‌ಎ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ 4ನೇ ಮೈಸೂರು ಲಿಟರರಿ ಫೆಸ್ಟ್ ಅನ್ನು ಅಂಕಣಕಾರರೂ, ಭಾರತೀಯ ಸೇನಾ ನಿವೃತ್ತ ಕ್ಯಾಪ್ಟನ್ ಜಿ.ಆರ್.ಗೋಪಿನಾಥ್ (ಎಡದಿಂದ 5ನೇಯವರು) ಉದ್ಘಾಟಿಸಿದರು. (ಎಡದಿಂದ,) ಎಂಎಲ್‌ಎ ಕಾರ್ಯದರ್ಶಿ ರೆಜಿನಾಲ್ಡ್ ವೆಸ್ಲಿ, ಕಾರ್ಯಕಾರಿ ಸಮಿತಿ ಸದಸ್ಯ ಪ್ರೊ.ಎಸ್. ದ್ವಾರಕಿ, ಉಪಾಧ್ಯಕ್ಷ ಪ್ರೊ.ಬಿ.ಎನ್.ಬಾಲಾಜಿ, ಅಧ್ಯಕ್ಷ ಡಾ.ಕೆ.ಸಿ.ಬೆಳ್ಳಿಯಪ್ಪ, ಕಾರ್ಯಕಾರಿ ಸಮಿತಿ ಸದಸ್ಯರಾದ ಕೆ.ಸಿ.ಹರಿದಾಸ್, ಪ್ರೊ.ನಿರ್ಮಲಾ ಚಂದ್ರಪ್ರಕಾಶ್, ಮೈಸೂರು ವಿವಿ ನಿವೃತ್ತ ಕುಲಸಚಿವ ಮೊಣ್ಣಪ್ಪ ಚಿತ್ರದಲ್ಲಿದ್ದಾರೆ. ಬಲಚಿತ್ರದಲ್ಲಿ ಮೈಸೂರು ಲಿಟರರಿ ಫೆಸ್ಟ್‌ನಲ್ಲಿ ಪಾಲ್ಗೊಂಡಿದ್ದ ಗಣ್ಯರನ್ನು ಕಾಣಬಹುದು. ನಿರ್ದೇಶಕರೂ ಆದ ನಟ ಪ್ರಕಾಶ್ ಬೆಳವಾಡಿ, ಅವರ ಪತ್ನಿ ಚಂದ್ರಿಕಾ ಬೆಳವಾಡಿ, ಮೈಸೂರು ಬುಕ್ ಕ್ಲಬ್ ಸಂಸ್ಥಾಪಕಿ ಶುಭಾ ಸಂಜಯ್ ಅರಸ್, ಶಿಕ್ಷಣ ತಜ್ಞ ಡಾ.ಅಭಿಮನ್ಯು ಆಚಾರ್ಯ, ಲೇಖಕ ಪ್ರೊ.ಹೆಚ್.ಎಸ್.ಶಿವಣ್ಣ, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರು' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ (ಕೆಬಿಜಿ), ವಕೀಲರೂ ಆದ ಆಮ್ ಆದ್ಮಿ ಪಕ್ಷದ ನಾಯಕ ಬ್ರಿಜೇಶ್ ಕಾಳಪ್ಪ ಇನ್ನಿತರರು ಚಿತ್ರದಲ್ಲಿದ್ದಾರೆ.

ಮಾಸ್ತಿ ವೆಂಕಟೇಶ ಅಯ್ಯಂಗಾರ್, ಡಿ.ವಿ.ಗುಂಡಪ್ಪ ಕುವೆಂಪು ಎಂದೇ ಖ್ಯಾತನಾಮರಾದ ಕೆ.ವಿ.ಪುಟ್ಟಪ್ಪ ಮೊದಲಾದ ನಮ್ಮ ಹಿಂದಿನ ದಿಗ್ಗಜರು ತಮ್ಮ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿದ್ದಾರೆ. ಅಂದು ಬಹುತೇಕ ತತ್ವಜ್ಞಾನಿಗಳು ನಾಸ್ತಿಕರಾದರೂ ಮಾನವೀಯತೆಯಲ್ಲಿ ಅಪಾರವಾದ ನಂಬಿಕೆ ಹೊಂದಿದ್ದರು. ಹಾಗಾಗಿಯೇ ಅವರ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳು ಮೇಳೈಸಿವೆ ಎಂದರು.

ಮಾಸ್ತಿ ವೆಂಕಟೇಶ ಅಯ್ಯಂಗಾರ್, ಪು.ತಿ.ನರಸಿಂಹಾಚಾರ್, ಡಿ.ಎಲ್.ನರಸಿಂಹಾಚಾರ್, ಬಿ.ಎಂ. ಶ್ರೀಕಂಠಯ್ಯ ಮತ್ತು ತೀ.ನಂ.ಶ್ರೀಕಂಠಯ್ಯ ಮೊದಲಾದ ಸಾಹಿತಿಗಳು ಹಲವು ವಿಧದಲ್ಲಿ ಸಂಪ್ರದಾಯಸ್ಥರಾಗಿದ್ದರೂ (ಮಡಿವಂತಿಕೆ) ಅದಕ್ಕೂ ಮೀರಿದ ಮಾನವೀಯತೆ ಅವರಲ್ಲಿ ಅಡಕವಾಗಿತ್ತು. ಈ ಹಿನ್ನೆಲೆಯಲ್ಲಿ ಅವರ ಸಾಹಿತ್ಯದಲ್ಲಿ ಮನುಷ್ಯತ್ವ ಮೆರೆದಾಡಿದೆ. ಕುವೆಂಪು ಅವರು ▶ 3ನೇ ಪುಟಕ್ಕೆ

ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಪ್ರಯುಕ್ತ

ನಾಳೆ ಮೈಸೂರು ರೈಲ್ವೆ ಮ್ಯೂಸಿಯಂಗೆ ಹೆಣ್ಣು ಮಕ್ಕಳೊಂದಿಗೆ ಒಬ್ಬರು ಪೋಷಕರಿಗೆ ಉಚಿತ ಪ್ರವೇಶ

ಮೈಸೂರು, ಜ.22(ಆರ್‌ಕೆಬಿ)– ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಪ್ರಯುಕ್ತ ಜ.24ರಂದು ಮೈಸೂರಿನ ರೈಲ್ವೆ ಮ್ಯೂಸಿಯಂಗೆ ಹೆಣ್ಣು ಮಕ್ಕಳೊಂದಿಗೆ ಒಬ್ಬರು ಪೋಷಕರಿಗೆ ಉಚಿತ ಪ್ರವೇಶ ನೀಡಲಾಗುತ್ತದೆ. ಮೈಸೂರಿನ ರೈಲ್ವೆ ನಿಲ್ದಾಣದ ಹಿಂಭಾಗದಲ್ಲಿರುವ ರೈಲ್ವೆ ಮ್ಯೂಸಿಯಂನಲ್ಲಿ ಮಂಗಳವಾರದ ರಜೆಯನ್ನು ಅಂದು ರದ್ದುಪಡಿಸಿ, ಹೆಣ್ಣು ಮಕ್ಕಳ ದಿನಾಚರಣೆಯ ಪ್ರಯುಕ್ತ ಉಚಿತ ಪ್ರವೇಶ ನೀಡಲಾಗುತ್ತಿದೆ. ರಾಷ್ಟ್ರೀಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಆಚರಿಸುತ್ತಿರುವ ಹೆಣ್ಣು ಮಕ್ಕಳ ದಿನಾಚರಣೆ ಹಿನ್ನೆಲೆಯಲ್ಲಿ ಆ ದಿನ ಹೆಣ್ಣು ಮಕ್ಕಳನ್ನು ಸಮಾಜದಲ್ಲಿ ಗೌರವ ಮತ್ತು ಪ್ರಗತಿಯತ್ತ ಕೊಂಡೊಯ್ಯುವ ಜೊತೆಗೆ, ಸಮಾಜದಲ್ಲಿ ಹೆಣ್ಣು ಮಕ್ಕಳಿಗೆ ಇರುವ ಅಸಮಾನತೆಯನ್ನು ಹೋಗಲಾಡಿಸುವ ಪ್ರಯತ್ನ ಇದಾಗಿದೆ.

ರೈಲ್ವೆ ಮ್ಯೂಸಿಯಂಗೆ ಬೆಳಗ್ಗೆ 10 ಗಂಟೆಯಿಂದ ಸಂಜೆ 5.30ರವರೆಗೆ ಪ್ರವೇಶ ನೀಡಲಾಗುವುದು. ಆದರೆ ಮ್ಯೂಸಿಯಂ



ಒಳಗೆ ಆಹಾರ ಪದಾರ್ಥಗಳನ್ನು ತೆಗೆದುಕೊಂಡು ಹೋಗುವಂತಿಲ್ಲ. ವೃತ್ತಿಪರ/ಡಿಎಸ್‌ಎಲ್‌ಆರ್ ಬಳಸುವ ಫೋಟೋಗ್ರಾಫರ್‌ಗಳು ನಿಗದಿತ ಶುಲ್ಕವನ್ನು ಪಾವತಿ ಮಾಡುವ ಮೂಲಕ ಮ್ಯೂಸಿಯಂ ಪ್ರವೇಶಿಸಲು ಅನುಮತಿ ನೀಡಲಾಗುತ್ತದೆ. ಸಾರ್ವಜನಿಕರು ಇದರ ಪ್ರಯೋಜನ ಪಡೆದುಕೊಳ್ಳುವಂತೆ ನೈರುತ್ಯ ರೈಲ್ವೆ ಅಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀಶೈಲದಲ್ಲಿ ಗಣಪತಿ ಸಚ್ಚಿದಾನಂದ ಶ್ರೀಗಳಿಂದ ಅತಿರುದ್ರ ಯಾಗ

ಮೈಸೂರು,ಜ.22–ಮೈಸೂರಿನ ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಆಂಧ್ರ ಪ್ರದೇಶದ 12 ಜ್ಯೋತಿರ್ಲಿಂಗಗಳಲ್ಲಿ ಒಂದಾದ ಶ್ರೀಶೈಲ ಮಲ್ಲಿಕಾರ್ಜುನನ ಸನ್ನಿಧಿಯಲ್ಲಿ ಅತಿರುದ್ರ ಯಾಗ ಆರಂಭಿಸಿದ್ದಾರೆ. ಶ್ರೀಶೈಲದಲ್ಲಿರುವ ತೆಲುಗು ವಿಶ್ವವಿದ್ಯಾನಿಲಯದ ಮೈದಾನದಲ್ಲಿ ಜ.17ರಂದು ಶ್ರೀಶೈಲದ ಜಗದ್ಗುರು ಶ್ರೀಚನ್ನಸಿದ್ದರಾಮ ಪಂಡಿತಾರಾಧ್ಯ ಮಹಾಸ್ವಾಮೀಜಿಯವರ ಅನುಗ್ರಹದೊಂದಿಗೆ 11 ದಿನಗಳ ಅತಿರುದ್ರ ಯಾಗ ಆರಂಭಗೊಂಡಿದ್ದು, ಜ.27ಕ್ಕೆ ಮುಕ್ತಾಯಗೊಳ್ಳಲಿದೆ. ಶ್ರೀಶೈಲದಲ್ಲಿ ನಡೆಯುತ್ತಿರುವ ಮೊದಲ ಅತಿರುದ್ರಯಾಗ ಇದಾಗಿದ್ದು, ಈ ಹಿಂದೆ ಶ್ರೀಗಳ ಮಾರ್ಗದರ್ಶನದಲ್ಲಿ ವಾರಣಾಸಿ ಕ್ಷೇತ್ರದಲ್ಲಿ ನಡೆದಿತ್ತು.

ಇತ್ತೀಚೆಗಷ್ಟೆ ಮೈಸೂರಿನಲ್ಲಿ 80ನೇ ವರ್ಧಂತಿ ಆಚರಿಸಿಕೊಂಡಿದ್ದ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿಗಳು, ಇದೀಗ ಸಹಸ್ರ ಚಂದ್ರಮಾನ ದರ್ಶನವಾದ ಹಿನ್ನೆಲೆಯಲ್ಲಿ ತಮಗೆ ಗುರು ದೀಕ್ಷೆ ನೀಡಿದ ಶ್ರೀಶೈಲದಲ್ಲಿ 'ಅತಿರುದ್ರ' ಯಾಗ ಮಾಡುತ್ತಿದ್ದಾರೆ. ಈವರೆಗೆ ಶ್ರೀಗಳ



ನೇತೃತ್ವದಲ್ಲಿ ನಾಲ್ಕು ಬಾರಿ 'ಅತಿರುದ್ರ ಯಾಗ' ನಡೆದಿದ್ದು, ಇದರಲ್ಲಿ ಎರಡು ಬಾರಿ ತಮಗೆ ಪ್ರಿಯವಾದ ಮೈಸೂರಿನ ಅವಧೂತ ದತ್ತ ಪೀಠದಲ್ಲೆ ನಡೆಸಿದ್ದರು.

ಮೌನಿ ಅಮಾವಾಸ್ಯೆಯಾದ ಶನಿವಾರ ನಡೆದ 5ನೇ ದಿನದ 'ಅತಿರುದ್ರ ಯಾಗ'ದಲ್ಲಿ ಆಗಮ ಪಂಡಿತರ ವೇದೋದ್ಘೋಷದ ನಡುವೆ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ಯಜ್ಞಕ್ಕೆ ಪೂರ್ಣಾಹುತಿ ನೀಡಿದರು. ನಂತರ ಗುರುವಂದನ ಕಾರ್ಯಕ್ರಮದಲ್ಲಿ ಶ್ರೀಗಳು ಭಕ್ತಾದಿಗಳಿಗೆ ಆಶೀರ್ವಚನ ನೀಡಿದರು.

ಅತಿರುದ್ರ ಯಾಗದಲ್ಲಿ ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ, ತಮಿಳುನಾಡು ಮತ್ತು ಮಹಾರಾಷ್ಟ್ರದ ಸಹಸ್ರಾರು ಭಕ್ತರು ಭಾಗವಹಿಸಿದ್ದು, ನಿತ್ಯ ಸಂಜೆ ಗಣಪತಿ ಸಚ್ಚಿದಾನಂದ ಶ್ರೀಗಳು ಪ್ರವಚನ ನೀಡುತ್ತಿದ್ದಾರೆ. ಶುಕ್ರವಾರ ಸಂಜೆ ನಡೆದ ಪ್ರವಚನದಲ್ಲಿ ಗಣಪತಿ ಸಚ್ಚಿದಾನಂದ ಶ್ರೀಗಳು ಶಿವ ಕೈಲಾಸದಿಂದ ಶ್ರೀಶೈಲ ಬಯಸಿ ಬಂದ ಬಗ್ಗೆ ಸ್ಕಂದ ಪುರಾಣದಲ್ಲಿ ವೇದವ್ಯಾಸರು ಉಲ್ಲೇಖಿಸಿರುವ ಅಂಶವನ್ನು ವಿವರಿಸಿದರು.

ಬಹುಮಾನ ವಿಜೇತ ಶ್ವಾನಗಳಿವು



ಮೈಸೂರು,ಜ.22(ಜಿಎ)–ಮೈಸೂರಿನ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಆವರಣದಲ್ಲಿ ಭಾನುವಾರ ಕೆನೈನ್ ಕ್ಲಬ್ ಆಫ್ ಮೈಸೂರು ಸಂಸ್ಥೆ ಆಯೋಜಿಸಿದ್ದ 9ನೇ ಮತ್ತು 10ನೇ ಆವೃತ್ತಿಯ ಅಖಿಲ ಭಾರತ ಶ್ವಾನ ಪ್ರದರ್ಶನದಲ್ಲಿ ಬಹುಮಾನ ವಿತರಿಸಲಾಯಿತು.

9ನೇ ಆವೃತ್ತಿಯ ಚಾಂಪಿಯನ್ ಶೀಫ್‌ನ ಮೊದಲ ಬಹುಮಾನವನ್ನು ಲ್ಯಾಬ್ರಡಾರ್ ರಿಟ್ರೀವರ್ ಪಡೆದುಕೊಂಡರೆ, 10ನೇ ಆವೃತ್ತಿಯ ಚಾಂಪಿಯನ್ ಶೀಫ್‌ನ ಮೊದಲ ಬಹುಮಾನವನ್ನು ಬಾಕ್ಸರ್ ತನ್ನದಾಗಿಸಿಕೊಂಡಿತ್ತು. ಹಾಗೇ ಡಾಬರ್‌ಮನ್ ಬೆಸ್ಟ್ ಪಪ್ಪಿಯಾಗಿ ಬಹುಮಾನ ಗಳಿಸಿತು. ಅತ್ಯುತ್ತಮ ನಾಯಿ ನಿರ್ವಾಹಕರಾಗಿ 9ನೇ ಆವೃತ್ತಿಯಲ್ಲಿ ಮೈಸೂರಿನ ಸೂರ್ಯಕೃಷ್ಣ ಮತ್ತು 10ನೇ ಆವೃತ್ತಿಯಲ್ಲಿ ತಮಿಳು ಸೆಲ್ವ ಪಡೆದುಕೊಂಡರು. ಈ ವೇಳೆ ಉದ್ಯಮಿ ಮಹೇಶ್ ಶೆಣೈ, ಕೆನೈನ್ ಕ್ಲಬ್ ಆಫ್ ಮೈಸೂರು ಅಧ್ಯಕ್ಷ ಬಿ.ಪಿ.ಮಂಜುನಾಥ್, ಉಪಾಧ್ಯಕ್ಷರಾದ ಡಾ.ಜಯರಾಮಯ್ಯ, ಕಾರ್ಯದರ್ಶಿ ಡಾ.ಸಂಜೀವ್‌ಮೂರ್ತಿ, ಪದಾಧಿಕಾರಿಗಳಾದ ವಿನೋದ್ ಕುಮಾರ್, ತೇಜಸ್ವಿ ಎಲ್.ಎಸ್.ಸಂದೀಪ್ ಇನ್ನಿತರರು ಉಪಸ್ಥಿತರಿದ್ದರು.

ಶಾಸಕರಿಂದ ಸರ್ಕಾರದ ಸಾಧನೆಗಳ ಕರಪತ್ರ ವಿತರಣೆ



ಮೈಸೂರು, ಜ.22(ಆರ್‌ಕೆಬಿ)– ಚಾಮರಾಜ ವಿಧಾನಸಭಾ ಕ್ಷೇತ್ರದ 21ನೇ ವಾರ್ಡ್ ಗಂಗೋತ್ರಿಯಲ್ಲಿ ಶಾಸಕ ಎಲ್.ನಾಗೇಂದ್ರ ಅವರು ಬೂತ್ ವಿಜಯ ಸಂಕಲ್ಪ ಅಭಿಯಾನದಡಿ ಮನೆ ಮನೆಗೆ ಭೇಟಿ ನೀಡಿ, ಬಿಜೆಪಿ ಸದಸ್ಯತ್ವ ಅಭಿಯಾನ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಾಧನೆಗಳ ಕರಪತ್ರಗಳನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯರಾದ ವೇದಾವತಿ ಶಿವಶಂಕರ್, ಚಿಕ್ಕವೆಂಕಟು, ವಿಜಯ ಸಂಕಲ್ಪ ಅಭಿಯಾನದ ನಗರ ಸದಸ್ಯ ಶ್ರೀನಿವಾಸ್, ಕ್ಷೇತ್ರದ ಅಧ್ಯಕ್ಷ ಸೋಮಶೇಖರ ರಾಜು, ಪ್ರಧಾನ ಕಾರ್ಯದರ್ಶಿ ರಮೇಶ್, ಪುನೀತ್, ಬಿಎಲ್‌ಎ 1 ದಿನೇಶ್ ಗೌಡ, ಮುಖಂಡರಾದ ಗುರುದತ್ತ, ರಂಗಪ್ಪ, ಶಿವಲಿಂಗೇಗೌಡ, ಜಗದೀಶ್, ಶಿವಕುಮಾರ್, ಮೀನಾಕ್ಷಿ, ಮೀನಮ್ಮ ಜಯಲಕ್ಷ್ಮಿ, ರವಿ, ಗೌತಮ್ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಗಂಗಾಮತಸ್ಥರ ಸಮುದಾಯ ಭವನದಲ್ಲಿ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಆಚರಿಸಿಲಾಯಿತು. ಸುವರ್ಣ ಬೆಳಕು ಫೌಂಡೇಷನ್ ಅಧ್ಯಕ್ಷ ಮಹೇಶ್ ಅಂಬಿಗರ ಚೌಡಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಮುಖಂಡರಾದ ಗೋಪಣ್ಣ, ಅಶ್ವಥ್, ದಾಸಪ್ಪ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ವಾರ್ಡ್ ನಂ.46ರಲ್ಲಿ ಕಾರ್ಪೋರೇಟರ್ ಲಕ್ಷ್ಮಿ ಕಿರಣ್ ಮಾದೇಗೌಡ ನೇತೃತ್ವದಲ್ಲಿ ವಿಜಯ ಸಂಕಲ್ಪ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮುಖಂಡ ಎನ್.ಅರುಣ್‌ಕುಮಾರ್ ಗೌಡ, ಮಾಜಿ ಜಿಲ್ಲಾಧ್ಯಕ್ಷ ಎಸ್.ಡಿ.ಮಹೇಂದ್ರ, ಕಿರಣ್ ಮಾದೇಗೌಡ, ವಾರ್ಡ್ ಅಧ್ಯಕ್ಷ ಬಸವಣ್ಣ, ರಾಚಪ್ಪಾಜಿ, ಲೋಹಿತ್, ಬಸವನಿಂಗಪ್ಪ, ಗಿರೀಶ್ ಇನ್ನಿತರರಿದ್ದರು.

ಶಿಷ್ಯ ವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು,ಜ.22–2022–23ನೇ ಸಾಲಿನ ಮುಖ್ಯಮಂತ್ರಿ ಮೀನುಗಾರರ ವಿದ್ಯಾನಿಧಿ ಯೋಜನೆಯನ್ನು ಮೀನುಗಾರರ, ಮೀನು ಕೃಷಿಕರ ಮಕ್ಕಳಿಗೂ ಸಹ ವಿಸ್ತರಿಸಿ ಆದೇಶಿಸಿದ್ದು, ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. 8ರಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ one intitilemnt basis ಮುಖಾಂತರ ವಿದ್ಯಾರ್ಥಿ ವೇತನವನ್ನು ಪಾವತಿ ಮಾಡಲಾಗುವುದು. ಪಿಯುಸಿ ಮತ್ತು ತದನಂತರದ ಕೋರ್ಸ್‌ಗಳಲ್ಲಿ ಓದುತ್ತಿರುವ ಅರ್ಹ ವಿದ್ಯಾರ್ಥಿಗಳು ಸ್ಟೇಟ್ ಸ್ಕಾಲರ್ ಶಿಪ್ ಪೋರ್ಟಲ್‌ನಲ್ಲಿ ನೋಂದಾಯಿಸಿ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ಮೈಸೂರು ಮೀನುಗಾರಿಕೆ ಸಹಾಯಕ ನಿರ್ದೇಶಕರು ಮೊ.–9448500695, ನಂಜನಗೂಡು–9731357199, ಟಿ.ನರಸೀಪುರ–9448273093, ಹುಣಸೂರು– 9902203684, ಪಿರಿಯಾಪಟ್ಟಣ–7019596308, ಹೆಚ್.ಡಿ.ಕೋಟೆ–9448502697, ಕೆ.ಆರ್.ನಗರ–7829028415 ಸಂಪರ್ಕಿಸಬಹುದಾಗಿದೆ.

ನಿಧನ



ಎಸ್.ಸಿದ್ದಪ್ಪ

ಮೈಸೂರು,ಜ.22–ಮೈಸೂರಿನ ಸರಸ್ವತಿಪುರಂ ನಿವಾಸಿ ಎಸ್.ಸಿದ್ದಪ್ಪ (52)ನವರು ಭಾನುವಾರ ಬೆಳಗ್ಗೆ ಅನಾರೋಗ್ಯದಿಂದ ನಿಧನರಾದರು. ದಿವಂಗತು ಪತ್ನಿ ನಾಗರತ್ನ, ಅಣ್ಣ–ತಮ್ಮಂದಿರು, ಅಕ್ಕ–ತಂಗಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಭಾನುವಾರ ಸಂಜೆ ಕೆ.ಜಿ.ಕೊಪ್ಪಲಿನ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಿನಲ್ಲಿ ಶ್ವಾನಗಳ ವೈಯ್ಯಾರ

● ಗಮನ ಸೆಳೆದ ವಿವಿಧ ಬಗೆಯ ಶ್ವಾನಗಳು ● 34 ತಳಿಯ 434 ಶ್ವಾನಗಳು ಪ್ರದರ್ಶನದಲ್ಲಿ ಭಾಗಿ

ಮೈಸೂರು,ಜ.22(ಎಂಟಿವೈ)– ಮೈಸೂರಿನ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಆವರಣದಲ್ಲಿ ಭಾನುವಾರ ಕೆನೈನ್ ಕ್ಲಬ್ ಆಫ್ ಮೈಸೂರು ಸಂಸ್ಥೆ ಆಯೋಜಿಸಿದ್ದ ಅಖಿಲ ಭಾರತ ಶ್ವಾನ ಪ್ರದರ್ಶನದಲ್ಲಿ ವಿವಿಧ ರಾಜ್ಯಗಳಿಂದ ಆಗಮಿಸಿದ್ದ ವಿವಿಧ ತಳಿಗಳ ಮುದ್ದಾದ ಶ್ವಾನಗಳು ದರ್ಬಾರ್ ನಡೆಸಿ, ನೋಡುಗರ ಮನಸೂರೆಗೊಂಡವು.

ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಒಡಿಸ್ಸಾ ಸೇರಿದಂತೆ ವಿವಿಧೆಡೆಗಳಿಂದ ಆಗಮಿಸಿದ್ದ ಮುದ್ದು ಶ್ವಾನಗಳು ಮೈದಾನವನ್ನು ಕಳೆಕಟ್ಟುವಂತೆ ಮಾಡಿದವು. 'ಶ್ವಾನ ಪ್ರದರ್ಶನ'ದಲ್ಲಿ ಸುಮಾರು 34 ತಳಿಯ 434ಕ್ಕೂ ಹೆಚ್ಚು ಶ್ವಾನಗಳು ತಮ್ಮ ಚಾಕಚಕ್ಯತೆ ಪ್ರದರ್ಶಿಸಿದರೆ, ಮಾಲೀಕರೊಂದಿಗೆ ಬಂದಿದ್ದ ನೂರಾರು ಶ್ವಾನಗಳು ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ಓಡಾಡಿ ನೆರೆದಿದ್ದ ಅಪಾರ ಸಂಖ್ಯೆಯ ಪ್ರಾಣಿ ಪ್ರಿಯರ ಮನ ಗೆದ್ದವು. ಡಾಗ್ ಶೋದಲ್ಲಿ ಶ್ವಾನಗಳು ತಮ್ಮ ಬುದ್ಧಿವಂತಿಕೆಯನ್ನು ಪ್ರದರ್ಶಿಸಿ ಸೈ ಎನಿಸಿಕೊಂಡವು.

ಕಳೆದ ಕೆಲ ವರ್ಷಗಳಿಂದ ಕೆನೈನ್ ಕ್ಲಬ್ ಆಫ್ ಮೈಸೂರು ಸಂಸ್ಥೆ ಮೈಸೂರಿನಲ್ಲಿ ಶ್ವಾನ ಪ್ರದರ್ಶನ ಏರ್ಪಡಿಸುತ್ತಾ ಬಂದಿದೆ. ಆದರೆ, ಕೊರೊನಾ ಹಿನ್ನೆಲೆಯಲ್ಲಿ ಕಳೆದ 3 ವರ್ಷದಿಂದ ಕೆನೈನ್ ಕ್ಲಬ್ ಆಫ್ ಮೈಸೂರು ಸಂಸ್ಥೆ ಶ್ವಾನ ಪ್ರದರ್ಶನ ಆಯೋಜಿಸಿರಲಿಲ್ಲ. 3 ವರ್ಷದ ಬಳಿಕ ನಡೆದ ಶ್ವಾನ ಪ್ರದರ್ಶನಕ್ಕೆ ಉತ್ತಮವಾದ ಪ್ರತಿಕ್ರಿಯೆ ವ್ಯಕ್ತವಾಯಿತು. ಈ ಹಿಂದೆ ನಡೆದ ಪ್ರದರ್ಶನದಲ್ಲಿ 220 ಶ್ವಾನಗಳು ಪಾಲ್ಗೊಂಡಿದ್ದವು. ಈ ಬಾರಿ 2 ಪಟ್ಟು ಶ್ವಾನಗಳ ಸಂಖ್ಯೆ ಹೆಚ್ಚಾಗಿದೆ. ಇದರಿಂದ ಮೈಸೂರಲ್ಲಿ ನಡೆದ 9 ಮತ್ತು 10ನೇ ಅಖಿಲ ಭಾರತ ಶ್ವಾನ ಪ್ರದರ್ಶನ ನಿರೀಕ್ಷೆಗೂ ಮೀರಿದ ಯಶಸ್ಸು ಕಂಡಿದೆ.





ವರ್ಷದಿಂದ ವರ್ಷಕ್ಕೆ ಜನಪ್ರಿಯತೆ ಹೆಚ್ಚಿಸಿಕೊಳ್ಳುತ್ತಿರುವ ಈ ಶ್ವಾನ ಪ್ರದರ್ಶನದಲ್ಲಿ 3 ಕೆಜಿ ತೂಕದ ಮಿನಿಯೇಚರ್ ಪಿಂಚರ್ ತಳಿಯ ಶ್ವಾನದಿಂದ ಹಿಡಿದು 130 ಕೆಜಿ ತೂಕದ ಸೆಂಟ್ ಬರ್ನಾಡ್, ಗ್ರೇಟ್ ಡೇನ್ ಇನ್ನಿತರ ತಳಿಗಳ ಶ್ವಾನಗಳು ಪಾಲ್ಗೊಂಡಿದ್ದವು. ಅಲ್ಲದೆ 20 ಸಾವಿರ ರೂ ಬೆಲೆಬಾಳುವ ಶ್ವಾನದಿಂದ ಲಕ್ಷಾಂತರ ರೂ ಬೆಲೆಬಾಳುವ ಶ್ವಾನಗಳು ಆಕರ್ಷಣೀಯ ಕೇಂದ್ರ ಬಿಂದುವಾಗಿದ್ದವು.

ಪ್ರದರ್ಶನದಲ್ಲಿ ವಿವಿಧ ವಿಭಾಗಗಳಲ್ಲಿ ಕಾರ್ವನ್ ಹೌಂಡ್, ಮುಧೋಳ್, ರಾಜಪಾಳ್ಯಂ, ವಿಪೆಟ್, ಪಗ್, ಶಿಜು ಟುಜ್ಸ್, ಇಂಗ್ಲಿಷ್ ಕುಕರ್ ಸ್ಪಾನಿಲ್, ಗೋಲ್ಡನ್ ರಿಟ್ರೀವರ್, ಲ್ಯಾಬ್ರಡಾರ್ ರಿಟ್ರೀವರ್, ಬೀಗಲ್, ಅಕಿಟ, ಚೌಚೌ, ಪಮೆರಿಯನ್, ಸೈಬೀರಿಯನ್ ಹಸ್ಕಿ, ಡಾಶ್‌ಹೌಂಡ್ ಮಿನಿಯೇಚರ್, ಡಾಶ್‌ಹೌಂಡ್ ಸ್ಟಾಂಡರ್ಡ್, ಬುಲ್ ಟೆರಿರ್, ಬಾಕ್ಸರ್, ಬುಲ್ಡಾಗ್, ಡಾಬರ್ ಮನ್, ಗ್ರೇಟ್‌ಡೇನ್, ರಾಟ್‌ವೀಲರ್, ಸೇಂಟ್ ಬರ್ನಾಡ್, ಜರ್ಮನ್ ಶೆಫರ್ಡ್ ಇನ್ನಿತರ ತಳಿಗಳ ಶ್ವಾನಗಳು 3 ರಿಂಗ್‌ನಲ್ಲಿ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದವು. ತೀರ್ಪುಗಾರರಾಗಿ ಚೆನ್ನೈನಿಂದ ಸಿ.ವಿಸುದರ್ಶನ್, ಬೆಂಗಳೂರಿನ ಟಿ.ಪ್ರೀತಮ್, ಯಶೋಧರ ಹೇಮಚಂದ್ರ ಕಾರ್ಯನಿರ್ವಹಿಸಿದರು. ವಿವಿಧ ಟಾಸ್ಕ್ ನೀಡಿ, ಶ್ವಾನಗಳ ಚಾಕಚಕ್ಯತೆ, ಬುದ್ಧಿವಂತಿಕೆ, ನಡೆದಾಡುವ ಶೈಲಿ, ಕೂದಲು, ನಿರ್ವಹಣೆ, ದೇಹದ ಶೇಪ್, ಮಾಲೀಕನ ಆಜ್ಞೆ ಪಾಲಿಸುವುದು ಸೇರಿದಂತೆ ವಿವಿಧ ಪರೀಕ್ಷೆ ನಡೆಸಿ, ಬೆಸ್ಟ್ ಶ್ವಾನಗಳ ಆಯ್ಕೆ ಮಾಡಲಾಯಿತು.







ಬಿಸಿಲಿನ ಬೇಗೆ: ಮುದ್ದು ಮುದ್ದಾದ ಶ್ವಾನಗಳು ಬಿಸಿಲಿನ ಬೇಗೆಗೆ ಬಳಲಿದವು. ಪ್ರದರ್ಶನಕ್ಕೆ ಬಂದಿದ್ದ ವಿದೇಶಿ ತಳಿಗಳ ಶ್ವಾನಗಳು ಬಸವಳಿದವು. ಶ್ವಾನಗಳನ್ನು ಬಿಸಿಲಿನಿಂದ ರಕ್ಷಿಸಲು ಶ್ವಾನಗಳ ಮಾಲೀಕರು ಹರಸಾಹಸ ಮಾಡಿದರು. ನೆರೆ ರಾಜ್ಯ ಸೇರಿದಂತೆ ವಿವಿಧೆಡೆಗಳಿಂದ ಬಂದಿದ್ದ ಶ್ವಾನಗಳ ಮಾಲೀಕರು ತಮ್ಮ ವಾಹನಗಳಲ್ಲಿ ಎಸಿ ಆನ್ ಮಾಡಿ ಬಿಸಿಲಿನಿಂದ ತಮ್ಮ ಮುದ್ದಿನ ಶ್ವಾನಗಳನ್ನು ರಕ್ಷಿಸಿದರು. ಕೆಲವರು ಮೈಗೆ ನೀರನ್ನು ಸಿಂಪಡಿಸಿದರೆ, ಮತ್ತೆ ಕೆಲವರು ಮಂಜುಗಡ್ಡೆಯನ್ನು ಬಟ್ಟೆಯಲ್ಲಿ ಸುತ್ತಿ ಶ್ವಾನಗಳ ಮೈಗೆ ಸವರುತ್ತಿದ್ದರು.

ಚಾಲನೆ: ಇದಕ್ಕೂ ಮುನ್ನ ಬೆಳಗ್ಗೆ ನಡೆದ ಶ್ವಾನ ಪ್ರದರ್ಶನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ವಾಸು, ಮೈಲ್ಯಾಕ್ ಅಧ್ಯಕ್ಷ ಆರ್.ರಘು ಕೌಟಿಲ್ಯ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಕೆನೈನ್ ಕ್ಲಬ್ ಆಫ್ ಮೈಸೂರು ಅಧ್ಯಕ್ಷ ಬಿ.ಪಿ.ಮಂಜುನಾಥ್, ಉಪಾಧ್ಯಕ್ಷರಾದ ಡಾ.ಜಯರಾಮಯ್ಯ, ಕಾರ್ಯದರ್ಶಿ ಡಾ.ಸಂಜೀವ್‌ಮೂರ್ತಿ, ಪದಾಧಿಕಾರಿಗಳಾದ ವಿನೋದ್‌ಕುಮಾರ್, ತೇಜಸ್ವಿ ಎಲ್.ಎಸ್.ಸಂದೀಪ್ ಇನ್ನಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.1.2023 ಸೋಮವಾರ, ಮಳೆ ನಕ್ಷತ್ರ: ಉತ್ತರಾಷಾಢ, 11.01.2023ರಿಂದ 23.01.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಧನಿಷ್ಠ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಉಸಿರಾಟದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ ಮತ್ತು ಹೈಪೋಥೈರಾಯ್ಡಿಸಮ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30ರಿಂದ.

■ **ಕರ್ನಾಟಕ ರಾಜ್ಯ ಕಾಯಕ ಸಮಾಜಗಳ ಒಕ್ಕೂಟ (ಬೆಂಗಳೂರು) :** ರಾಜ್ಯ ಪ್ರತಿನಿಧಿಗಳ ಪರಿಷತ್ತು ವಾರ್ಷಿಕ ಮಹಾ ಅಧಿವೇಶನ, ಹೊಂಗಿರಣ ಕೃತಿ ಲೋಕಾರ್ಪಣೆ, ದಿವ್ಯಸಾನಿಧ್ಯ: ಅರೆಮಾದನಹಳ್ಳಿ ಮಹಾಸಂಸ್ಥಾನ ಮಠದ ಶ್ರೀ ಶಿವಸುಜ್ಞಾನ ಮಹಾಸ್ವಾಮಿಗಳು, ಮೈಸೂರಿನ ಉರಿಲಿಂಗ ಪೆದ್ದಿಮಠದ ಪೀಠಾಧ್ಯಕ್ಷ ಶ್ರೀ ಜ್ಞಾನ ಪ್ರಕಾಶ್ ಸ್ವಾಮೀಜಿ, ಚಿತ್ರದುರ್ಗದ ಶ್ರೀ ವೀರ ಮಡಿವಾಳ ಬಸವ ಮಾಚಿದೇವ ಸ್ವಾಮೀಜಿ, ಸ್ಥಳ: ಇನ್ಸಿಟ್ಯೂಟ್ ಆಫ್ ಎಂಜಿನಿಯರಿಂಗ್ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಶರಣ ಸಾಹಿತ್ಯ ಪರಿಷತ್ತು :** ದತ್ತಿ ಕಾರ್ಯಕ್ರಮ, ವಿದ್ಯಾರ್ಥಿಗಳಿಗೆ ಶರಣರ ವೇಷಭೂಷಣ ಮತ್ತು ಭಾಷಣ ಸ್ಪರ್ಧೆ, ಸ್ಥಳ: ಸುಪ್ರೀಂ ಪಬ್ಲಿಕ್ ಶಾಲೆ, ಕನಕದಾಸನಗರ, ಬೆಳಗ್ಗೆ 10.30ಕ್ಕೆ.

■ **ವಿದ್ಯಾವರ್ಧಕ ಸಂಘ :** 2022–23ನೇ ಸಾಲಿನ ಎಂ.ಕಾಂ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಪ್ರವೇಶ ಕಾರ್ಯಕ್ರಮ, ಸ್ಥಳ: ಶ್ರೀ ಪಿ.ಎಂ. ಚಿಕ್ಕಬೋರಯ್ಯ ಹಾಲ್, ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ ಸಮಿತಿ (ಟ್ರಸ್ಟ್) :** ದೇವಸ್ಥಾನದ ಹಿಂಭಾಗದಲ್ಲಿರುವ ಪಾರಂಪರಿಕ ಕಟ್ಟಡದ ಜೀರ್ಣೋದ್ಧಾರಕ್ಕೆ ಗುದ್ದಲಿ ಪೂಜೆ, ಗುದ್ದಲಿ ಪೂಜೆ: ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಮುಖ್ಯ ಅತಿಥಿಗಳು: ಶಾಸಕ ಎಸ್.ಎ. ರಾಮದಾಸ್, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಬೆಳಗ್ಗೆ 11 ಗಂಟೆಗೆ.

■ **ನೃಪತುಂಗ ಕನ್ನಡ ಶಾಲೆ, ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆ :** ಪರೀಕ್ಷೆಯನ್ನು ಎದುರಿಸುವುದು ಹೇಗೆ? ಕುರಿತು 10ನೇ ತರಗತಿ ವಿದ್ಯಾರ್ಥಿಗಳ ಕಾರ್ಯಾಗಾರ, ಸ್ಥಳ: ಶಾಲೆಯ ಆವರಣ, ರಾಮಕೃಷ್ಣನಗರ, ಬೆಳಗ್ಗೆ 11 ಗಂಟೆಗೆ.

■ **ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ, ಜಿಲ್ಲಾಡಳಿತ, ನೆಹರು ಯುವ ಕೇಂದ್ರ ಸಂಘಟನೆ, ಮೈಸೂರು ವಿಶ್ವವಿದ್ಯಾನಿಲಯ :** 14ನೇ ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮ, ಸ್ಥಳ: ಲಲಿತ ಕಲಾ ಕಾಲೇಜು ಸಭಾಂಗಣ, ಮಾನಸ ಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ :** ನೇತಾಜಿ ಸುಭಾಷ್‌ಚಂದ್ರ ಬೋಸ್‌ರವರ 125ನೇ ಜನ್ಮದಿನಾಚರಣೆ ಪ್ರಯುಕ್ತ ವಿಶೇಷ ಉಪನ್ಯಾಸ ಮತ್ತು ಪ್ರಬಂಧ ಸ್ಪರ್ಧೆ ಕಾರ್ಯಕ್ರಮ, ಉದ್ಘಾಟನೆ ಮತ್ತು ವಿಶೇಷ ಉಪನ್ಯಾಸ: ಲೇಖಕರು, ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಕೇಂದ್ರ (ವಿಯೆಟ್ನಾಂ)ದ ನಿಕಟಪೂರ್ವ ಅಧ್ಯಕ್ಷ ಡಾ. ಜಿ.ಟಿ. ಹರೀಶ, ಸ್ಥಳ: ಕಾವೇರಿ ಸಭಾಂಗಣ, ಮುಕ್ತ ವಿವಿ, ಬೆಳಗ್ಗೆ 11.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಡಿಪಾರ್ಟ್‌ಮೆಂಟ್ ಆಫ್ ಸ್ಟಡೀಸ್ ಇನ್ ಇಂಗ್ಲಿಷ್ :** ಸಾಹಿತ್ಯ ಕ್ಲಬ್ ಕುರಿತು ವಿಶೇಷ ಉಪನ್ಯಾಸ, ಸ್ಥಳ: ಸೀನಿಯರ್ ಎಂಎ ಹಾಲ್, ಕಾಲೇಜು ಆವರಣ, ಬೆಳಗ್ಗೆ 11.30ಕ್ಕೆ.

■ **ಆಲ್ ಇಂಡಿಯಾ ಡೆಮಾಕ್ರಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಓ), ಮೈಸೂರು ಜಿಲ್ಲಾ ಸಮಿತಿ :** ನೇತಾಜಿ ಸುಭಾಷ್‌ಚಂದ್ರ ಬೋಸ್‌ರವರ 125ನೇ ಜನ್ಮದಿನೋತ್ಸವದ ಅಂಗವಾಗಿ ವಿದ್ಯಾರ್ಥಿಗಳ ಜಾಥಾ, ಸ್ಥಳ: ರಾಮಸ್ವಾಮಿ ಸರ್ಕಲ್, ಬೆಳಗ್ಗೆ 11.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ: ಜಿ.ಹೆಚ್. ಹನ್ನೆರಡು ಮಠ, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ನೃತ್ಯ ಶಿಲ್ಪ ಯಾತ್ರೆ: ಲೇಖನ ಮತ್ತು ಪ್ರಸ್ತುತಿ– ಡಾ.ಬಿ.ಎನ್. ಮನೋರಮ, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ನಿತಿನ್ ರಾಜಾರಾಂ ಶಾಸ್ತ್ರಿ, ಸದಾಶಿವ ಪಾಟೀಲ್, ವ್ಯಾಖ್ಯಾನ– ಮೊರಬದ ಮಲ್ಲಿಕಾರ್ಜುನ, 7.25 ಭಾವಗೀತೆ: ಎಂ.ಕೆ. ಜಯಶ್ರೀ, 8.30 ಬದುಕು ಅಕ್ಷಯವಾಗಲಿ ಪ್ರಾಯೋಜಿತ ಕಾರ್ಯಕ್ರಮ, 9.00 ನೆನಪಿನಂಗಳ: ವಿವಿಧ ಕ್ಷೇತ್ರಗಳಲ್ಲಿ ಸೇವೆಗೈದ ಬಿ.ಎಂ. ಶಿವರಾಮಯ್ಯ ಅವರೊಂದಿಗೆ ಹೂಗೊಪ್ಪಲು ಕೃಷ್ಣಮೂರ್ತಿ ಅವರು ನಡೆಸಿದ್ದ ಸಂವಾದ, 10.00 ಲಯ ಸಂಭ್ರಮ: 'ಪುರಂದರ ನಮನ', ಪ್ರಸ್ತುತಿ– ಹೆಚ್.ಎಲ್. ಶಿವಶಂಕರ ಸ್ವಾಮಿ.

ಮಧ್ಯಾಹ್ನ: 12.30 ದೇವರನಾಮ– ಹೇಮಂತ್, ರಾಜೇಶ್ವರಿ ಪಂಡಿತ್, 1.20 ಭಾವಗೀತೆ– ಲಕ್ಷ್ಮೀ ನಾಗರಾಜ್, 3.00 ಗೀತಾ ವೈ ಪುಟ್ಟಿ– ಹಾಡುಗಾರಿಕೆ.

ಸಂಜೆ: 4.00 ಮಹಿಳಾರಂಗ: ಕಾಂಗರೂ ಕೇರ್ ಮಹಿಳೆ ಮತ್ತು ಮಕ್ಕಳ ಆಸ್ಪತ್ರೆ ಡಾಕ್ಟರ್ ಸಮಯ: ನೇರ ಫೋನ್ ಇನ್ ಕಾರ್ಯಕ್ರಮ, ಪ್ರಸ್ತುತಿ– ಎಂ.ಎಸ್. ಭಾರತಿ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ: 'ಕಿಸಾನ್ ವಾಣಿ': ಸಾಂದ್ರ ಬೇಸಾಯ ಹಾಗೂ ಸಮಗ್ರ ಕೃಷಿ ಪದ್ಧತಿಯ ಅನುಭವಗಳನ್ನು ಕುರಿತು ಎನ್.ಎಚ್. ವಿರೂಪಾಕ್ಷಮೂರ್ತಿ ಮತ್ತು ಶಾರದಾ ಅವರೊಂದಿಗೆ ಸಂದರ್ಶನ.

ರಾತ್ರಿ: 9.30 ಹಳ್ಳಿಹಾಡು: ಭಾಗವಹಿಸುವವರು ಬೆಕ್ಕಳಲೆಯ ಜಯಲಕ್ಷ್ಮಮ್ಮ ಮತ್ತು ತಂಡ.

■ **ರಾಷ್ಟ್ರಭಾರತಿ ಚಾರಿಟಬಲ್ ಟ್ರಸ್ಟ್ :** ಪರಾಕ್ರಮ್ ದಿವಸ್ ಪ್ರಯುಕ್ತ ರಕ್ತದಾನ ಶಿಬಿರ, ಸ್ಥಳ: ಮಾಧವ ಕೃಪ, ಲಕ್ಷ್ಮೀಪುರಂ, ಮಧ್ಯಾಹ್ನ 2 ಗಂಟೆಗೆ.

■ **ಸಮರ್ಪಣಾ (ಶ್ರೀಮತಿ ರಾಧಮ್ಮ ಸ್ಮಾರಕ ಟ್ರಸ್ಟ್) :** ಸಂಗೀತೋತ್ಸವ ಹಾಗೂ ಸಮರ್ಪಣಾ ಸಂಗೀತಶ್ರೀ ಪ್ರಶಸ್ತಿ ಪ್ರದಾನ ಮತ್ತು ಬಹುಮಾನ ವಿತರಣಾ ಸಮಾರಂಭ, ಸ್ಥಳ: ನಾದಬ್ರಹ್ಮ ಸಂಗೀತ ಮಹಾಸಭಾ, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಸಂಗೀತ ಕಾರ್ಯಕ್ರಮ, ಗಾಯನ: ವಿ। ರಾಜಗೋಪಾಲ ಭಾಗವತರ್, ಪಿಟೀಲು: ವಿ। ಸಿ.ವಿ. ಶೃತಿ, ಮೃದಂಗ: ವಿ। ಪಿ.ಎಸ್. ಶ್ರೀಧರ್, ಮೋರ್ಸಿಂಗ್: ವಿ.ವಿ.ಎಸ್. ರಮೇಶ್, ಸ್ಥಳ: ಶ್ರೀ ರಾಮ ಮಂದಿರ, ಜಯನಗರ, ಸಂಜೆ 6 ಗಂಟೆಗೆ.

ಸುತ್ತೂರು ಜಾತ್ರಾ ಮಹೋತ್ಸವ

ಕರ್ತೃ ಗದ್ದುಗೆಯಲ್ಲಿ ಪೂಜಾ ಉತ್ಸವ

ಬೆಳಗ್ಗೆ 4ಕ್ಕೆ ಮಹಾರುದ್ರಾಭಿಷೇಕ, ಭಾಗ್ಯೋದಯ ಪೂಜೆ, ಮಹಾ ಮಂಗಳಾರತಿ, ಬೆಳಗ್ಗೆ 6.30ಕ್ಕೆ ಮಲ್ಲರಾಜಯ್ಯನಹುಂಡಿ, ಸ್ನೇಹ ಸೌಹಾರ್ದ ಶಾಂತಿ ಪಥಸಂಚಲನ, ಷಟ್‌ಸ್ಥಲ ಧ್ವಜಾರೋಹಣ: ಕೆಂಗೇರಿ ಶ್ರೀ ಬಂಡೆ ಮಠದ ಶ್ರೀ ಸಚ್ಚಿದಾನಂದ ಸ್ವಾಮಿಗಳು, ಧರ್ಮ ಸಂದೇಶ: ಚಿಕ್ಕಮಗಳೂರು ಜಿಲ್ಲೆ ಶ್ರೀ ಕರಡಿ ಗವಿ ಮಠದ ಶ್ರೀ ಶಿವಶಂಕರ ಶಿವಯೋಗಿ ಸ್ವಾಮಿಗಳು, ಬೆಳಗ್ಗೆ 10.30ಕ್ಕೆ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಉತ್ಸವ ಮೂರ್ತಿಗೆ ಮಹಾರುದ್ರಾಭಿಷೇಕ (ಕಪಿಲಾ ನದಿ ತೀರ) ಅಷ್ಟೋತ್ತರ ಕುಂಭೋತ್ಸವ, ಬೆಳಗ್ಗೆ 11.45ಕ್ಕೆ ಅನ್ನಬ್ರಹ್ಮೋತ್ಸವ, ಮಹಾ ಮಂಗಳಾರತಿ, ಸಂಜೆ 4ಕ್ಕೆ ಮಹಾರುದ್ರಾಭಿಷೇಕ, ಸಂಜೆ 6.15ಕ್ಕೆ ಉತ್ಸವ ಮೂರ್ತಿಯನ್ನು ಕರ್ತೃ ಗದ್ದುಗೆಯಿಂದ ಶ್ರೀ ಮಠಕ್ಕೆ ಬಿಜಯಂಗೈಸುವುದು.

ಕೃಷಿ ಮೇಳ ಮತ್ತು ವಸ್ತುಪ್ರದರ್ಶನ: ಸಮಾರೋಪ (ಬೆಳಗ್ಗೆ 10.30ಕ್ಕೆ)

ಸಮ್ಮುಖ: ತುಮಕೂರು ಶ್ರೀ ಸಿದ್ದಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಕೊಪ್ಪಳದ ಶ್ರೀ ಗವಿ ಸಿದ್ದೇಶ್ವರ ಮಠದ ಶ್ರೀ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು, ಅಧ್ಯಕ್ಷತೆ: ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ, ಸಮಾರೋಪ ಭಾಷಣ: ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್, ಬಹುಮಾನ ವಿತರಣೆ: ಕೃಷಿ ಮೇಳ–ಗಣಿ, ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ ಆಚಾರ್ ಹಾಲಪ್ಪ ಬಸಪ್ಪ, ಶೈಕ್ಷಣಿಕ ಮತ್ತು ಭೂ ವಿಜ್ಞಾನ–ಮಾಜಿ ಸಚಿವ ಎಂ.ಬಿ. ಪಾಟೀಲ್, ವಸ್ತುಪ್ರದರ್ಶನ– ಮಾಜಿ ಸಚಿವ ಸಿ.ಟಿ. ರವಿ, ಮುಖ್ಯ ಅತಿಥಿಗಳು: ಶಾಸಕರುಗಳಾದ ಜಿ.ಟಿ. ದೇವೇಗೌಡ, ಅಡಗೂರು ಎಚ್. ವಿಶ್ವನಾಥ್, ಕುಮಾರ್ ಬಂಗಾರಪ್ಪ, ಅನಿಲ್‌ಕುಮಾರ್ ಚಿಕ್ಕಮಾದು, ಎಲ್. ನಾಗೇಂದ್ರ, ಈಟಿವಿ ಮುಖ್ಯ ನಿರ್ಮಾಪಕ ಅರ್ಮಿನೇನಿ ಹರಿಕೃಷ್ಣ, ಸಾಂಸ್ಕೃತಿಕ ತಿರುಳು, ಗದ್ದುಗೆ, ಬೆಳಗ್ಗೆ 7.30ಕ್ಕೆ

ಮೈಸೂರು ಮಿತ್ರ

ಒಂದನೇ ಪುಟದಿಂದ

ಜಾತೀಯತೆ ಸೋಂಕಿಗೆ ಸಿಲುಕಿದೆ

'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯ ಬರೆಯಲು 14 ವರ್ಷಗಳನ್ನು ತೆಗೆದುಕೊಂಡರು. ಆದರೆ ಒಬ್ಬ ಸಾಮಾನ್ಯ ವ್ಯಕ್ತಿ ಇದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವೇ? ಎಂಬ ಚರ್ಚೆ ಆರಂಭವಾದ ಹಿನ್ನೆಲೆಯಲ್ಲಿ ಅವರು ಅದರ ಗದ್ಯವನ್ನೂ ರಚಿಸಿದರು ಎಂದರು.

ಕನ್ನಡದ ಸಣ್ಣ ಕಥೆಗಳ ಪಿತಾಮಹಾ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸಮಾಜದಲ್ಲಿ ಸಂಪ್ರದಾಯದ ಹೆಸರಿನಲ್ಲಿ ನಡೆಯುವ ಅನಾಚಾರಗಳನ್ನು ಅವರು ತಮ್ಮ ಸಣ್ಣಕಥೆಗಳಲ್ಲಿ ಟೀಕಿಸಿದ್ದಾರೆ. ಆ ಮೂಲಕ ಸಮಾಜದಲ್ಲಿರುವ ಅಂಕು-ಡೊಂಕುಗಳನ್ನು ಚಿತ್ರಿಸಿ, ಮಾನವೀಯ ಮೌಲ್ಯದ ಮಹತ್ವದ ಬಗ್ಗೆ ಒತ್ತಿ ಹೇಳಿದ್ದಾರೆ. ಕಟ್ಟಾ ಮಡಿವಂತಿಕೆ ಪಾಲಿಸುವ ವ್ಯಕ್ತಿ, ಅನ್ಯಧರ್ಮೀಯ ಮಹಿಳೆಯೊಂದಿಗೆ ಒಂದೇ ಮನೆಯಲ್ಲಿ ವಾಸಿಸಿದರೂ ತನ್ನ ಆಹಾರ ಮಾತ್ರ ತಾನೇ ತಯಾರು ಮಾಡಿಕೊಳ್ಳುವ ಡೋಂಗಿತನದ ಬಗ್ಗೆಯೂ ಟೀಕಿಸಿದ್ದಾರೆ ಎಂದರು.

ಭಾರತದ ಮಾಜಿ ರಾಷ್ಟ್ರಪತಿ ಸರ್ವಪಲ್ಲಿ ರಾಧಾಕೃಷ್ಣನ್ ಮಹಾನ್ ತತ್ವಜ್ಞಾನಿ. ಅವರು ಬರೆದ 'ದಿ ಪ್ರಿನ್ಸಿಪಾಲ್ ಉಪನಿಷದ್' ಕೃತಿಯು ಸುಮಾರು ಸಾವಿರ ಪುಟಗಳನ್ನು ಹೊಂದಿದೆ. ಇದರಲ್ಲಿ ಕುರಾನ್, ಬೈಬಲ್, ಗಣಿತಶಾಸ್ತ್ರಜ್ಞ ಉಮರ್ ಖಯ್ಯಾಮ್ ಮತ್ತು ತತ್ವಶಾಸ್ತ್ರಜ್ಞರೂ ಆದ ಗಣಿತಶಾಸ್ತ್ರಜ್ಞ ಬರ್ಟ್ರಾಂಡ್ ರಸೆಲ್ ಅವರ ಉಲ್ಲೇಖಗಳನ್ನು ನೀಡಿದ್ದಾರೆ. ಇದರಲ್ಲಿ ಮಾನವೀಕತೆ ಮತ್ತು ಏಕತೆಯ ಮೇಲಿನ ರಾಧಾಕೃಷ್ಣನ್ ಪ್ರೀತಿಯು ಹೆಚ್ಚಿನ ಮಟ್ಟದಲ್ಲಿ ವಿವರಿಸಲ್ಪಟ್ಟಿದೆ ಎಂದು ಹೇಳಿದರು.

ಕುವೆಂಪು ಅವರ 'ವಿಶ್ವಮಾನವ' ಮತ್ತು 'ಮನುಜಪಥ' ಅಥವಾ ಡಿ.ವಿ.ಗುಂಡಪ್ಪ ಅವರ 'ಮಂಕುತಿಮ್ಮನ ಕಗ್ಗ' ಅತ್ಯಂತ ಜನಪ್ರಿಯಗೊಂಡಿವೆ. ಕಾರಣ ಅವುಗಳಲ್ಲಿರುವ ಜೀವನ ಮೌಲ್ಯಗಳಾಗಿವೆ. ನಮ್ಮ ಈ ಹಿಂದಿನ ಸಾಹಿತ್ಯದ ದಿಗ್ಗಜರು ಮಾನವೀಯತೆಯಲ್ಲಿ ಬಲವಾದ ನಂಬಿಕೆ ಹೊಂದಿದ್ದರು. ಅಲ್ಲದೆ, ಮಾನವೀಯ ಮೌಲ್ಯಗಳೇ ಅವರ ಸಾಹಿತ್ಯದ ಸಾರವಾಗಿತ್ತು. ಅಂತೆಯೇ ಇಂದಿನ ಸರ್ಕಾರ ಸಮಾಜದಲ್ಲಿ ಸೌಹಾರ್ದತೆ ಕಾಪಾಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ರಾಜೀವ್‌ಗಾಂಧಿ ಕೇಂದ್ರ ವಿವಿ ವಿಶ್ರಾಂತ ಕುಲಪತಿಗಳೂ ಆದ ಮೈಸೂರು ಲಿಟರರಿ ಅಸೋಸಿಯೇಷನ್ ಅಧ್ಯಕ್ಷ ಡಾ.ಕೆ.ಸಿ.ಬೆಳ್ಳಿಯಪ್ಪ ಮಾತನಾಡಿ, ಭಾನುವಾರವಾದರೂ ಇಂದಿನ ನಮ್ಮ ಕಾರ್ಯಕ್ರಮಕ್ಕೆ ಇಡೀ ಸಭಾಂಗಣ ಶೇ.80ರಷ್ಟು ಭರ್ತಿಯಾಗಿದೆ. ಇದು ರಜೆ ದಿನದಲ್ಲಿ ನಿಜಕ್ಕೂ ಉತ್ತಮ ಹಾಜರಾತಿ ಎಂದು ಹರ್ಷ ವ್ಯಕ್ತಪಡಿಸಿದರು.


ಇಂಗ್ಲಿಷ್ ಭಾಷಾ ಅಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಆಂಗ್ಲ ಸಾಹಿತ್ಯದ ಆಸಕ್ತರು ಒಗ್ಗೂಡಿ 2016ರಲ್ಲಿ ಲಿಟರರಿ ಅಸೋಸಿಯೇಷನ್ ಅಸ್ತಿತ್ವಕ್ಕೆ ತರಲಾಯಿತು. ಪ್ರಸ್ತುತ 260 ಸದಸ್ಯರು ಅಸೋಸಿಯೇಷನ್‌ನಲ್ಲಿದ್ದಾರೆ. 2017ರಲ್ಲಿ ಮೊದಲ ಲಿಟರರಿ ಫೆಸ್ಟ್ ನಡೆಯಿತು. ನಂತರದಲ್ಲಿ 2018 ಮತ್ತು 2019ರಲ್ಲಿಯೂ ಫೆಸ್ಟ್ ಯಶಸ್ವಿಯಾಗಿ ನಡೆಯಿತು. ಆದರೆ ಕೋವಿಡ್ ಕಾರಣಕ್ಕೆ 2020, 2021 ಮತ್ತು 2022ರಲ್ಲಿ ಆಯೋಜನೆ ಸಾಧ್ಯವಾಗಲಿಲ್ಲ. ಇದೀಗ 4ನೇ ಉತ್ಸವ ನಡೆಯುತ್ತಿದೆ ಎಂದು ಹೇಳಿದರು.

ಖ್ಯಾತ ನರಶಾಸ್ತ್ರ ತಜ್ಞೆ ಮತ್ತು ಲೇಖಕಿ ಡಾ.ದೀಪ್ತಿ ನವರತ್ನ ತಮ್ಮ ಕೃತಿ 'ದಿ ಮೇವರಿಕ್ ಮಹಾರಾಜ (ಜಯಚಾಮರಾಜ ಒಡೆಯರ್ ಕುರಿತ ಪುಸ್ತಕ)' ಕುರಿತು ಮಾತನಾಡಿದರು. ಬಳಿಕ ಖ್ಯಾತ ನಿರ್ದೇಶಕರೂ ಆದ ನಟ ಪ್ರಕಾಶ್ ಬೆಳವಾಡಿ 'ನಾಟಕ ರಚನೆ' ಕುರಿತು ವಿಚಾರ ಮಂಡಿಸಿದರು. ಮಧ್ಯಾಹ್ನದ ಗೋಷ್ಠಿಗಳಲ್ಲಿ 'ಭಾರತೀಯ ಕಾವ್ಯ ಹಾಗೂ ಕಾವ್ಯ ಮೀಮಾಂಸೆಯಲ್ಲಿ ಭಕ್ತಿ ಮತ್ತು ಸಿದ್ಧ ಆಯಾಮಗಳು' ವಿಷಯ ಕುರಿತು ಖ್ಯಾತ ಕವಿಗಳೂ ಆದ ನಾಟಕಕಾರ ಹೆಚ್.ಎಸ್.ಶಿವಪ್ರಕಾಶ್, 'ಶಿಕ್ಷಣದಲ್ಲಿ ನಾಟಕ ಮತ್ತು ನಾಟಕದಲ್ಲಿ ಶಿಕ್ಷಣ' ವಿಷಯ ಕುರಿತು ಖ್ಯಾತ ನಟರೂ ಆದ ಶಿಕ್ಷಣ ತಜ್ಞ ಡಾ.ಅಭಿಮನ್ಯು ಆಚಾರ್ಯ ಮಾತನಾಡಿದರು.

ಅಸೋಸಿಯೇಷನ್ ಉಪಾಧ್ಯಕ್ಷೆ ಪ್ರೊ.ಎ.ಎನ್.ಪಾಲಾಜ್, ಕಾರ್ಯದರ್ಶಿ ರೆಜಿನಾಲ್ಡ್ ವೆಸ್ಲಿ ವೇದಿಕೆಯಲ್ಲಿದ್ದರು. 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ (ಕೆಬಿಜಿ), ಆಮ್ ಆದ್ಮಿ ಪಕ್ಷದ ನಾಯಕ ಬ್ರಿಜೇಶ್ ಕಾಳಪ್ಪ, ಕೃಷಿ ವಿಜ್ಞಾನಿ ಡಾ.ವಸಂತಕುಮಾರ್ ತಿಮಕಾಪುರ, ಮೈಸೂರು ವಿವಿ ಪ್ರಸಾರಾಂಗದ ನಿವೃತ್ತ ನಿರ್ದೇಶಕ ಪ್ರೊ.ಸಿ.ನಾಗಣ್ಣ, ಮೈಸೂರು ಬುಕ್ ಕ್ಲಬ್ ಸಂಸ್ಥಾಪಕ ಶುಭಾ ಸಂಜಯ್ ಅರಸ್, ಪ್ರಾಧ್ಯಾಪಕ ಪ್ರೊ.ಅನಿತಾ ವಿಮ್ಲ ಬ್ರಾಗ್ಸ್ ಸೇರಿದಂತೆ ಅನೇಕ ಸಾಹಿತ್ಯಾಸಕ್ತರು ಸಭೆಯಲ್ಲಿ ಹಾಜರಿದ್ದರು. ಮೈಸೂರು, ಮಂಡ್ಯ, ಕೊಡಗು, ಹಾಸನ ಮೊದಲಾದ ಜಿಲ್ಲೆಗಳ ಇಂಗ್ಲಿಷ್ ಸಾಹಿತ್ಯದ ಅಧ್ಯಾಪಕರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಸಿದ್ಧ ಪರಂಪರೆ ಸೃಜನಶೀಲ ಸಂಸ್ಕೃತಿಯನ್ನೊಳಗೊಂಡಿದೆ

ಚಿಂತಕ ಪ್ರೊ.ಹೆಚ್.ಎಸ್.ಶಿವಪ್ರಕಾಶ್



ಮೈಸೂರು, ಜ.22(ಎಂಕೆ)– ಭಕ್ತಿ ಮತ್ತು ಸಿದ್ಧ ಪರಂಪರೆ ಸೃಜನಶೀಲ ಸಂಸ್ಕೃತಿಯನ್ನೊಳಗೊಂಡಿದೆ ಎಂದು ಹಿರಿಯ ಲೇಖಕ, ಚಿಂತಕ ಪ್ರೊ.ಹೆಚ್.ಎಸ್.ಶಿವಪ್ರಕಾಶ್ ತಿಳಿಸಿದರು.

ಮಹಾರಾಜ ಕಾಲೇಜು ಶತಮಾನೋತ್ಸವ ಸಭಾಂಗಣದಲ್ಲಿ ಆಯೋಜಿಸಿರುವ 'ಮೈಸೂರು ಲಿಟರರಿ ಫೆಸ್ಟ್–2023'ನಲ್ಲಿ 'ಭಕ್ತಿ ಮತ್ತು ಸಿದ್ಧ–ಭಾರತೀಯ ಕಾವ್ಯ ಮತ್ತು ಕಾವ್ಯದ ಆಯಾಮಗಳು' ಕುರಿತು ಮಾತನಾಡಿದ ಅವರು, ಭಕ್ತಿ ಮತ್ತು ಸಿದ್ಧ ಪರಂಪರೆ ಕ್ರಾಂತಿಯೂ ಅಲ್ಲ. ಸುಧಾರಣೆಯೂ ಅಲ್ಲ. ಬದಲಿಗೆ ಜನರ ಮನ ಪರಿವರ್ತನೆ ಮೂಲಕ ಪರೋಕ್ಷವಾಗಿ ಸಮಾಜದ ಪರಿವರ್ತನೆಗೆ ಸಹಕರಿಸಿದ ಸೃಜನಶೀಲ ಸಂಸ್ಕೃತಿಯಾಗಿದೆ ಎಂದು ಹೇಳಿದರು.

2ನೇ ಸಹಸ್ರಮಾನದ ಮಧ್ಯ ಭಾಗದಿಂದ ಭಾರತೀಯ ಸಾಹಿತ್ಯ–ಸಂಸ್ಕೃತಿಯನ್ನು ಭಕ್ತಿ ಮತ್ತು ಸಿದ್ಧ ಪರಂಪರೆ ಶ್ರೀಮಂತಗೊಳಿಸಿದೆ. ಅಲ್ಲದೆ ಈ ಎರಡು ಪರಂಪರೆಗಳು ಅನಿರ್ಬಂಧಿತವಾದವು. ಭಕ್ತಿ, ಸಂತ ಮತ್ತು ಸಿದ್ಧ ಪರಂಪರೆ ಸೃಜಿಸಿದ ಕಾವ್ಯ ಪ್ರಕಾರಗಳು ಮತ್ತು ಅದರಲ್ಲಿ ಅಂತರ್ಗತವಾದ ಕಾವ್ಯ ಮೀಮಾಂಸೆ ಅಭಿಜಾತವಾದ ಸಂಸ್ಕೃತ ಮತ್ತು ತಮಿಳು ಪರಂಪರೆಗಿಂತ ಭಿನ್ನವಾಗಿದ್ದವು ಎಂದರು.

ಹೊಸ ರೀತಿಯ ಭಾಷಾಂತರವನ್ನು ಅಳವಡಿಸಿಕೊಂಡ ಭಕ್ತ ಕವಿಗಳು ಕೃತಿಯ ಮೂಲದಲ್ಲಿರುವುದನ್ನು ತಮಗೆ ಬೇಕಾದಂತೆ ರಚನೆ ಮಾಡಿದರು. ಕನ್ನಡದ ಹರಿದಾಸರು ದೇವಸ್ಥಾನಗಳಿಗೆ ಹೋಗುತ್ತಿದ್ದರು. ಗೀತೆಗಳನ್ನು ರಚಿಸಿ ಹಾಡುತ್ತಿದ್ದರು. ಆದರೆ ವಚನಕಾರರು ದೇವಸ್ಥಾನಗಳ ಬಗ್ಗೆ ಮಾತನಾಡಲಿಲ್ಲ. ಬದಲಿಗೆ ದೇಹವೇ ದೇಗುಲ ಎಂದು ತಿಳಿಸಿದ ಅವರು, ದೇಶದ ಸಾಹಿತ್ಯ–ಸಂಸ್ಕೃತಿಗೆ ಭಕ್ತಿ ಮತ್ತು ಸಿದ್ಧ ಪರಂಪರೆ ಕೊಡುಗೆಯನ್ನು ಸವಿವರವಾಗಿ ತಿಳಿಸಿಕೊಟ್ಟರು.

ಜಯಚಾಮರಾಜ ಒಡೆಯರ್ ಜ್ಞಾನದ ಭೋಗಿ

ಲೇಖಕಿ ಡಾ.ದೀಪ್ತಿ ನವರತ್ನ



ಮೈಸೂರು, ಜ.22(ಪಿಎಂ)– ಅಂದಿನ ಮೈಸೂರು ಸಂಸ್ಥಾನದ ಮಹಾರಾಜ ಜಯ ಚಾಮರಾಜ ಒಡೆಯರ್ ಜ್ಞಾನದ ಭೋಗಿ ಯಾಗಿದ್ದರು ಎಂದು ನರಶಾಸ್ತ್ರಜ್ಞೆ ಮತ್ತು ಲೇಖಕಿ ಡಾ.ದೀಪ್ತಿ ನವರತ್ನ ಸ್ಮರಿಸಿದರು.


ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಭಾನುವಾರ ನಡೆದ '4ನೇ ಮೈಸೂರು ಲಿಟರರಿ ಫೆಸ್ಟ್'ನಲ್ಲಿ ತಮ್ಮ ಕೃತಿ 'ದಿ ಮೇವರಿಕ್ ಮಹಾರಾಜ (ಜಯಚಾಮರಾಜ ಒಡೆಯರ್ ಕುರಿತ ಪುಸ್ತಕ)' ಕುರಿತು ಅವರು ಮಾತನಾಡಿದರು.

ಜಯಚಾಮರಾಜ ಒಡೆಯರ್ ಸಂಗೀತ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ಬಗ್ಗೆ ಕನ್ನಡದಲ್ಲಿ ಸಾಕಷ್ಟು ಮಾಹಿತಿ ಇದ್ದರೂ ಆಂಗ್ಲ ಸಾಹಿತ್ಯದಲ್ಲಿ ಅಸ್ಪಷ್ಟ ಮಾಹಿತಿ ಇತ್ತು. ಅವರ ಸಮಗ್ರ ವ್ಯಕ್ತಿತ್ವ ಇಂಗ್ಲಿಷ್‌ನಲ್ಲಿ ಇರಲಿಲ್ಲ. ಈ ಕೊರತೆ ನೀಗಿಸುವ ಮೂಲಕ ಅವರ ಮೇರು ವ್ಯಕ್ತಿತ್ವವನ್ನು ವಿಶ್ವ ಮಟ್ಟದಲ್ಲಿ ಪರಿಚಯಿಸುವ ಪ್ರಯತ್ನವೇ ನನ್ನ ಈ 'ದಿ ಮೇವರಿಕ್ ಮಹಾರಾಜ' ಪುಸ್ತಕವಾಗಿದೆ ಎಂದರು.

ಜಯಚಾಮರಾಜ ಒಡೆಯರ್ ಬಗ್ಗೆ ಒಂದು ವಿಸ್ತಾರವಾದ ಅಧ್ಯಯನ ಮಾಡಿ ಕೃತಿ ರಚನೆ ಮಾಡಿದ್ದೇನೆ. ಮಹಾರಾಜರು ಧರ್ಮದಲ್ಲಿ ಅಪಾರ ನಂಬಿಕೆ ಹೊಂದಿದ್ದರು. ಹಾಗಾಗಿ ಅವರು ಅರಸರಾಗಿದ್ದರೂ ಅರಸೊತ್ತಿಗೆ ತ್ಯಜಿಸಲು ಹಿಂದೇಟು ಹಾಕಲಿಲ್ಲ. ನಾನೊಮ್ಮೆ ಅರಮನೆಗೆ ಭೇಟಿ ನೀಡಿದ್ದೆ. ಆಗ ಅರಮನೆಯಿಂದ ವಾಪಸ್ಸು ಆಗಬೇಕಾದರೆ ಹಿಂತಿರುಗಿ ನೋಡಿದೆ. ಮಹಾರಾಜರು ಹೇಗೆ ಇಂತಹ ವೈಭವದ ಜೀವನ ತ್ಯಜಿಸುವಷ್ಟು ಉದಾರತೆ ಮೆರೆದರು ಎಂದು ಅನ್ನಿಸಿತು ಎಂದು ಹೇಳಿದರು.

ರಂಗಭೂಮಿ ಮೇಲೂ ತಂತ್ರಜ್ಞಾನದ ಅದ್ಭುತ ಪರಿಣಾಮ

ಖ್ಯಾತ ನಿರ್ದೇಶಕರೂ ಆದ ನಟ ಪ್ರಕಾಶ್ ಬೆಳವಾಡಿ



ಮೈಸೂರು, ಜ.22(ಪಿಎಂ)– ತಂತ್ರಜ್ಞಾನದ ಪರಿಣಾಮದಿಂದ ನಮ್ಮ ಸುತ್ತಲೂ ವ್ಯಾಪಕ ಬದಲಾವಣೆಯಾಗಿದ್ದು, ಅಂತೆಯೇ ರಂಗಭೂಮಿಯಲ್ಲಿಯೂ ತಂತ್ರಜ್ಞಾನವು ಅದ್ಭುತ ಪರಿಣಾಮ ಉಂಟು ಮಾಡಿದೆ ಎಂದು ಖ್ಯಾತ ನಿರ್ದೇಶಕರೂ ಆದ ನಟ ಪ್ರಕಾಶ್ ಬೆಳವಾಡಿ ಹೇಳಿದರು.

ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ '4ನೇ ಮೈಸೂರು ಲಿಟರರಿ ಫೆಸ್ಟ್'ನಲ್ಲಿ 'ನಾಟಕ ರಚನೆ' ಕುರಿತು ಮಾತನಾಡಿದ ಅವರು, ರಂಗಭೂಮಿಯಲ್ಲಿ ವೇದಿಕೆ ವಿನ್ಯಾಸದಿಂದ ಬೆಳಕಿನ ವಿನ್ಯಾಸದವರೆಗೆ ತಂತ್ರಜ್ಞಾನ ಮಹತ್ತರ ಬದಲಾವಣೆ ತಂದಿದೆ. ನಾಟಕದ ರಚನೆ, ಪರಿಕಲ್ಪನೆ ಮತ್ತು ವೇದಿಕೆಯಲ್ಲಿ ಜಾಗದ ನಿರ್ವಹಣೆ ಮತ್ತು ಸಮಯ ನಿರ್ವಹಣೆಯಲ್ಲಿಯೂ ಸುಧಾರಣೆಯಾಗಿದೆ ಎಂದು ತಿಳಿಸಿದರು.

ತಂತ್ರಜ್ಞಾನದಿಂದ ಸಿನಿಮಾ ಕ್ಷೇತ್ರವು ವ್ಯಾಪಕ ಬದಲಾವಣೆ ಕಂಡಿದೆ. ಸಿನಿಮಾದಲ್ಲಿ ಸನ್ನಿವೇಶದ ಸ್ಥಳ ಮತ್ತು ಸಮಯ ಬದಲಾವಣೆ ಆದಂತೆ ಅದು ಮತ್ತೊಂದು ದೃಶ್ಯಾವಳಿ ಆಗಲಿದೆ ಎಂದರು. ಆಸ್ಟ್ರೇಲಿಯಾದಲ್ಲಿ ಇತ್ತೀಚೆಗೆ ತಮ್ಮ ರಂಗಭೂಮಿ ಚಟುವಟಿಕೆಗಳ ಬಗ್ಗೆ ಉಲ್ಲೇಖಿಸಿದ ಅವರು, ಸುತ್ತುವ ವೇದಿಕೆ ನಿರ್ಮಿಸಿ ದೃಶ್ಯಗಳ ಬದಲಾವಣೆ ಮಾಡುವ ತಂತ್ರಗಾರಿಕೆ ಬಗ್ಗೆ ವಿವರಿಸಿ, ಅದರಿಂದ ಹೊಸಸಾಧ್ಯತೆ ಉಂಟಾಗಿರುವುದನ್ನು ಹೇಳಿದರು. 5ಜಿ ತಂತ್ರಜ್ಞಾನವು ಹೊಲೋಗ್ರಫಿ ಅಭಿಯಾನಕ್ಕೆ ನಾಂದಿ ಹಾಡಿದೆ. ಭಾರತದಲ್ಲಿ 6 ಸಾವಿರ ಹಳ್ಳಿಗಳಿದ್ದು, ಅಲ್ಲಿನ ವಿವಿಧ ಸಮುದಾಯದವರಲ್ಲಿ ಅವರದೇ ಆದ ಪ್ರದರ್ಶಕ ಕಲೆಗಳ ಸಂಸ್ಕೃತಿ ಇವೆ ಎಂದರು.

ಪಠ್ಯಕ್ರಮಗಳಲ್ಲಿ ನಾಟಕಾಭಿನಯ ಕಲಿಕೆಗೆ ಅವಕಾಶ ನೀಡಬೇಕು

ನಟ ಅಭಿಮನ್ಯು ಆಚಾರ್ಯ ಅಭಿಮತ

ಮೈಸೂರು, ಜ.22(ಎಂಕೆ)– ವಿದ್ಯಾರ್ಥಿಗಳನ್ನು ಸಾಧಕರನ್ನಾಗಿಸಲು ಶಾಲಾ–ಕಾಲೇಜು ಪಠ್ಯಕ್ರಮಗಳಲ್ಲಿ ನಾಟಕಾಭಿನಯ ಕಲಿಕೆಗೆ ಅವಕಾಶ ನೀಡಬೇಕು ಎಂದು ನಟ, ಶಿಕ್ಷಣ ತಜ್ಞ ಅಭಿಮನ್ಯು ಆಚಾರ್ಯ ಹೇಳಿದರು.



'ಮೈಸೂರು ಲಿಟರರಿ ಫೆಸ್ಟ್–2023'ನಲ್ಲಿ 'ಶಿಕ್ಷಣದಲ್ಲಿ ನಾಟಕ ಮತ್ತು ನಾಟಕದಲ್ಲಿ ಶಿಕ್ಷಣ' ಕುರಿತು ಮಾತನಾಡಿದ ಅವರು, ಪಠ್ಯ–ಪುಸ್ತಕಗಳನ್ನು, ನಾಟಕಗಳನ್ನು ಸೇರಿಸಬೇಕು. ವಿದ್ಯಾರ್ಥಿಗಳು ಓದಿನ ಜೊತೆಗೆ ಅಭಿನಯ ದಲ್ಲಿ ತೊಡಗಿಕೊಳ್ಳುವುದರಿಂದ ಅವರಲ್ಲಿ ಕಲಿಯುವ ಆಸಕ್ತಿ ಹೆಚ್ಚಾಗುತ್ತದೆ ಎಂದರು.

ಪ್ರಾಥಮಿಕ ಹಂತದಿಂದ ಪದವಿ ಶಿಕ್ಷಣದವರೆಗಿನ ಎಲ್ಲಾ ಹಂತಗಳಲ್ಲಿಯೂ ವಿದ್ಯಾರ್ಥಿಗಳಿಗೆ ನಾಟಕಾಭಿನಯಕ್ಕೆ ಅವಕಾಶ ಮಾಡಿಕೊಡಬೇಕು. ನಾಟಕ ಅಭ್ಯಾಸದಿಂದ ಏಕಾಗ್ರತೆ ಹೆಚ್ಚುವುದರ ಜೊತೆಗೆ ಸಂಘಟನಾ ಕೌಶಲ್ಯತೆ ವೃದ್ಧಿಯಾಗುತ್ತದೆ. ನಾಟಕ ಮಕ್ಕಳನ್ನು ಬಾವಿಯೊಳಗಿನ ಕಪ್ಪೆಗಳನ್ನಾಗಿ ಮಾಡದೆ ಸಾಧಕರನ್ನಾಗಿ ರೂಪಿಸುತ್ತದೆ ಎಂಬುದನ್ನು ಹಲವಾರು ದೃಶ್ಯಾವಳಿಯ ಪ್ರದರ್ಶನದ ಮೂಲಕ ಅರ್ಥವತ್ತಾಗಿ ತಿಳಿಸಿಕೊಟ್ಟರು.

ನಾಟಕಕಾರರ ಬೋಧನೆಯಲ್ಲಿ ಹಲವಾರು ತಂತ್ರಗಳಿರುತ್ತವೆ. ವಿಶೇಷಚೇತನ ವಿದ್ಯಾರ್ಥಿಗಳಿಗೂ ಅಭಿನಯದ ಮೂಲಕವೇ ಕಲಿಸುವಂತಹ ಚಾಕಚಕ್ಯತೆ ನಾಟಕ ಅಭ್ಯಾಸದಿಂದ ದೊರೆಯುತ್ತದೆ. ಯುವಕರಿಗೆ ಕಾದಂಬರಿ ಆಕರ್ಷಣೆಯಾಗುವಷ್ಟು ಪಾಠ–ಪ್ರವಚನ ಆಕರ್ಷಣೆಯಾಗುವುದಿಲ್ಲ. ಆದ್ದರಿಂದ ಸುಂದರ ಕಾದಂಬರಿಗಳು, ನಾಟಕಗಳ ಮೂಲಕವೇ ಮೌಲ್ಯಧಾರಿತ ಶಿಕ್ಷಣ ನೀಡುವುದು ಅವಶ್ಯವಾಗಿದೆ ಎಂದರಲ್ಲದೆ ತಮ್ಮ ಅಭಿನಯದ ಚಿತ್ರಗಳ ಒಂದೆರಡು ಡೈಲಾಗ್‌ಗಳನ್ನು ಪ್ರಸ್ತುತಪಡಿಸಿ ನೆರೆದಿದ್ದವರ ಗಮನ ಸೆಳೆದರು.

ಬೆಂಗಳೂರಿನಲ್ಲಿ ಮತ್ತೊಂದು ಮೆಟ್ರೋ ಅಪಘಾತ

ಕಾರಿನ ಮೇಲೆ ಬಿದ್ದ ಮೆಟ್ರೋ ಬ್ಯಾರಿಕೇಡ್, ಪ್ರಯಾಣಿಕರು ಪಾರು



ಬೆಂಗಳೂರು, ಜ.22– ಮೆಟ್ರೋ ಪಿಲ್ಲರ್ ಕುಸಿದು ತಾಯಿ–ಮಗು ಸಾವನ್ನಪ್ಪಿರುವ ಘಟನೆ ಹಸಿರಾಗಿರುವಂತೆಯೇ ಇತ್ತ ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಮತ್ತೊಂದು ಮೆಟ್ರೋ ಅಪಘಾತ ಸಂಭವಿಸಿದ್ದು, ಕಾರಿನ ಮೇಲೆ ಮೆಟ್ರೋ ಬ್ಯಾರಿಕೇಡ್ ಬಿದ್ದಿದೆ.

ಬೆಂಗಳೂರಿನ ದೊಡ್ಡನೆಕ್ಕುಂದಿ ಜಂಕ್ಷನ್‌ನಲ್ಲಿ ಮೆಟ್ರೋ ನಿರ್ಮಾಣ ಕಾಮಗಾರಿ ಸ್ಥಳದಲ್ಲಿ ನಿಲ್ಲಿಸಿದ್ದ ಬ್ಯಾರಿಕೇಡ್ ಕಾರಿನ ಮೇಲೆ ಬಿದ್ದಿದ್ದು, ಕಾರಿನಲ್ಲಿದ್ದ ಪ್ರಯಾಣಿಕರು ಕೂದಲೆಳೆ ಅಂತರದಲ್ಲಿ ಅಪಾಯದಿಂದ ಪಾರಾಗಿದ್ದಾರೆ.

ದೊಡ್ಡನೆಕ್ಕುಂದಿಯಿಂದ ಮಹದೇವಪುರ ಕಡೆಗೆ ಹೋಗುವ ಮುಖ್ಯರಸ್ತೆಯಲ್ಲಿ ಈ ಅವಘಡ ಸಂಭವಿಸಿದ್ದು, ಇಬ್ಬರು ಸ್ಥಳೀಯ ನಿವಾಸಿಗಳು ತಮ್ಮ ಹುಂಡೈ ಐ–10 ಕಾರಿನಲ್ಲಿ ಹೊರಟಿದ್ದರು. ಕಾರು ಚಲಿಸುತ್ತಿದ್ದ ಸಂದರ್ಭದಲ್ಲೇ ಬ್ಯಾರಿಕೇಡ್ ಬಿದ್ದಿತ್ತು. ಸ್ವಲ್ಪದರಲ್ಲೇ ಕಾರು ಮುಂದಕ್ಕೆ ಚಲಿಸಿದ್ದರಿಂದ, ಕಾರು ಭಾಗಶಃ ಜಖಂಗೊಂಡಿದೆ. ಕಾರಿನ ಮುಂದಿನ ಸೀಟಿನಲ್ಲಿ ಕುಳಿತಿದ್ದವರಿಗೆ ಅದೃಷ್ಟವಶಾತ್ ಯಾವುದೇ ಗಾಯಗಳಾಗಿಲ್ಲ. ಈ ಬಗ್ಗೆ ಮಾಹಿತಿ ನೀಡಿರುವ ಸಂಚಾರ ಪೊಲೀಸರು, ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಹೋಗಿ ಪರಿಶೀಲಿಸಲಾಯಿತು. ಕಾರಿನ ಮಾಲೀಕರು ನೀಡುವ ದೂರು ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ರೈಲಿನಲ್ಲಿ ಸಿಲಿಂಡರ್ ಇಟ್ಟುಕೊಂಡು ಅಡುಗೆ ಮಾಡುತ್ತಿದ್ದ ವ್ಯಕ್ತಿಯ ಬಂಧನ!

ನಾಗ್ಪುರ್: ಪುಣೆ–ಹೌರಾ ಆಜಾದ್ ಹಿಂದ್ ಎಕ್ಸ್‌ಪ್ರೆಸ್‌ನ ಪ್ಯಾಂಟ್ರಿ ಕಾರ್ ಮ್ಯಾನೇಜರ್‌ನನ್ನು ಎಲ್‌ಪಿಜಿ ಸಿಲಿಂಡರ್ ಬಳಸಿ ಅಡುಗೆ ಮಾಡಿದ್ದಕ್ಕಾಗಿ ಬಂಧಿಸಲಾಗಿದೆ ಎಂದು ನಾಗಪುರ ಆರ್‌ಪಿಎಫ್ (ರೈಲ್ವೆ ಪೊಲೀಸ್ ಫೋರ್ಸ್) ಅಧಿಕಾರಿಯೊಬ್ಬರು ಶನಿವಾರ ಮಾಹಿತಿ ನೀಡಿದ್ದಾರೆ. ಶುಕ್ರವಾರ ರೈಲ್ವೇ ರಕ್ಷಣಾ ಪಡೆ ತಂಡ ಪ್ಯಾಂಟ್ರಿ ಕಾರಿನಲ್ಲಿ ಎಲ್‌ಪಿಜಿ ಸಿಲಿಂಡರ್ ಬಳಸಿ ಅಡುಗೆ ಮಾಡುತ್ತಿರುವುದನ್ನು ಗಮನಿಸಿದೆ ಈ ಪ್ರಕರಣದಲ್ಲಿ ಎರಡು ಎಲ್‌ಪಿಜಿ ಸಿಲಿಂಡರ್‌ಗಳನ್ನು ಆರ್‌ಪಿಎಫ್ ಸಿಬ್ಬಂದಿ ವಶಪಡಿಸಿಕೊಂಡಿದ್ದಾರೆ. ಆರೋಪಿ ಮಧ್ಯಪ್ರದೇಶದ ನಿವಾಸಿಯಾಗಿದ್ದು, ರೈಲ್ವೆ ಕಾಯ್ದೆಯಡಿಯಲ್ಲಿ ಬಂಧಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಅಂದಹಾಗೆ ರೈಲಿನಲ್ಲಿ ಯಾವುದೇ ರೀತಿಯ ಸ್ಫೋಟಕ ವಸ್ತುಗಳನ್ನು ಸಾಗಿಸುವಂತಿಲ್ಲ ಈ ನಿಯಮವನ್ನು ಎಷ್ಟರ ಮಟ್ಟಿಗೆ ಪಾಲಿಸುತ್ತಾರೆ ಎಂದರೆ ವಾಹನಗಳನ್ನು ಅಥವಾ ಬೈಕ್‌ಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಾಟ ಮಾಡುವಾಗ ಇಂಧನ ಟ್ಯಾಂಕ್‌ನಲ್ಲಿ ಒಂದೇ ಒಂದು ಹನಿ ಪೆಟ್ರೋಲ್/ಡಿಸೇಲ್ ಕೂಡ ಇರದಂತೆ ನೋಡಿಕೊಳ್ಳಲಾಗುತ್ತದೆ. ಇದನ್ನು ಖಾತ್ರಿ ಪಡಿಸಲಿಕ್ಕಾಗಿ ಎಂದೇ ಓರ್ವ ಸಿಬ್ಬಂದಿ ಇರುತ್ತಾರೆ.

ಯಾವುದೇ ಅಹಿತಕರ ಘಟನೆಯನ್ನು ತಪ್ಪಿಸಲು ಮೇಲ್/ಎಕ್ಸ್‌ಪ್ರೆಸ್ ರೈಲುಗಳಿಗೆ ಜೋಡಿಸಲಾದ ಎಲ್ಲಾ ಪ್ಯಾಂಟ್ರಿ ಕಾರ್‌ಗಳಲ್ಲಿ ಅಡುಗೆ ಮಾಡಲು ಎಲ್‌ಪಿಜಿ ಸಿಲಿಂಡರ್‌ಗಳನ್ನು ಬಳಸುವುದನ್ನು ನಿಲ್ಲಿಸುವಂತೆ ಭಾರತೀಯ ರೈಲ್ವೆ ಕ್ಯಾಟರಿಂಗ್ ಮತ್ತು ಟೂರಿಸಂ ಕಾರ್ಪೊರೇಷನ್ (ಐಆರ್‌ಸಿಟಿಸಿ) ಈಗಾಗಲೇ ವಲಯ ರೈಲ್ವೇಗಳಿಗೆ ಕೇಳಿಕೊಂಡಿದೆ

ಚಾಮರಾಜ ಕ್ಷೇತ್ರದಲ್ಲಿ ಎಎಪಿ ಬೈಕ್ ರ್ಯಾಲಿ



ಮೈಸೂರು, ಜ.22– ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಆಮ್ ಆದ್ಮಿ ಪಾರ್ಟಿ(ಎಎಪಿ) ವತಿಯಿಂದ ಬೈಕ್ ರ್ಯಾಲಿ ನಡೆಸಿ, ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಲಾಯಿತು.

ನಗರದ ಹೆಬ್ಬಾಳಿನಲ್ಲಿರುವ ಪಕ್ಷದ ಕಚೇರಿ ಎದುರು ಎಎಪಿ ಜಿಲ್ಲಾಧ್ಯಕ್ಷೆ ಮಾಲವಿಕ ಗುಬ್ಬಿವಾಣಿ ಬೈಕ್ ರ್ಯಾಲಿಗೆ ಚಾಲನೆ ನೀಡಿದರು. ಮುಂಬರುವ ಚುನಾವಣೆಯಲ್ಲಿ ಎಎಪಿ ಬೆಂಬಲಿಸುವಂತೆ ಬೈಕ್ ರ್ಯಾಲಿ ಮೂಲಕ ಸಾರ್ವಜನಿಕರಲ್ಲಿ ಮನವಿ ಮಾಡಲಾಯಿತು.

ಬಳಿಕ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಎಎಪಿ ಜಿಲ್ಲಾಧ್ಯಕ್ಷೆ ಮಾಲವಿಕ ಗುಬ್ಬಿವಾಣಿ, ಚಾಮರಾಜ ಕ್ಷೇತ್ರಾದಾದ್ಯಂತ ಆಮ್ ಆದ್ಮಿ ಪಾರ್ಟಿಗೆ ಉತ್ತಮ ಜನಬೆಂಬಲ ವ್ಯಕ್ತವಾಗುತ್ತಿದೆ. ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲ್ ಅವರ ಅಭಿವೃದ್ಧಿ ಕಾರ್ಯಗಳು ಹಾಗೂ ಆಮ್ ಆದ್ಮಿ ಪಾರ್ಟಿಯ ತತ್ತ್ವ ಸಿದ್ಧಾಂತಗಳು ನಮಗೆ ಶ್ರೀರಕ್ಷೆಯಾಗಲಿದೆ ಎಂದರು.

ಎಲ್ಲ ಪಕ್ಷಗಳಿಗೂ ಅವಕಾಶ ನೀಡಿ, ಅವುಗಳ ಆಡಳಿತ ವೈಫಲ್ಯವನ್ನು ನೋಡಿರುವ ಜನರು ಈ ಬಾರಿ ಆಮ್ ಆದ್ಮಿ ಪಾರ್ಟಿಗೆ ಅವಕಾಶ ನೀಡಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಮಾಲವಿಕ ಗುಬ್ಬಿವಾಣಿ, ಚುನಾವಣೆಗೆ ಕೆಲವೇ ತಿಂಗಳುಗಳು ಬಾಕಿಯಿದ್ದು, ಕ್ಷೇತ್ರದ ಅಭಿವೃದ್ಧಿಗಾಗಿ ಹಾಗೂ ರಾಜ್ಯದಲ್ಲಿ ಜನಪರ ಆಡಳಿತವನ್ನು ತರಲು ನಾವೆಲ್ಲರೂ ಹೆಚ್ಚಿನ ಸಮಯವನ್ನು ಪ್ರಚಾರಕ್ಕೆ ವಿನಿಯೋಗಿಸಬೇಕು ಎಂದು ಕಾರ್ಯಕರ್ತರಿಗೆ ಸೂಚಿಸಿದರು. ಎಎಪಿಯ ಜಿಲ್ಲಾ ವೀಕ್ಷಕ ರಂಗಯ್ಯ, ಮುಖಂಡರಾದ ಉಷಾ ಸಂಪತ್ ಕುಮಾರ್, ಶಿವಕುಮಾರ್, ಹರ್ಷ, ದೀಪಕ್, ವಿಶ್ವನಾಥ್ ಕುಲಕರ್ಣಿ, ಟಿ.ಎಂ.ನಾಗರಾಜ್, ಮುಜಾಹಿದ್ ಖಾನ್ ಮತ್ತಿತರ ನಾಯಕರು, ಕಾರ್ಯಕರ್ತರು, ಬೆಂಬಲಿಗರು ಉಪಸ್ಥಿತರಿದ್ದರು.

ಸಿದ್ದರಾಮಯ್ಯರ ತೇಜೋವಧೆ ಆರ್‌ಎಸ್‌ಎಸ್ ಕುತಂತ್ರ

ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷರ ಆಕ್ರೋಶ




ಮೈಸೂರು, ಜ.22(ಎಸ್‌ಬಿಡಿ)– ಆರ್‌ಎಸ್‌ಎಸ್ ಕುತಂತ್ರದಿಂದ ಕೋಲಾರದಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯನವರ ವಿರುದ್ಧ ಅಪಪ್ರಚಾರ ನಡೆಸಲಾಗುತ್ತಿದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಆರೋಪಿಸಿದ್ದಾರೆ.

ಕೋಲಾರದಲ್ಲಿ ಸ್ಪರ್ಧಿಸುವುದಾಗಿ ಸಿದ್ದರಾಮಯ್ಯನವರು ಘೋಷಿಸಿದ ಬೆನ್ನಲ್ಲೇ ಅವರನ್ನು ಮಣಿಸುವ ಪ್ರಯತ್ನ ಆರಂಭವಾಗಿದೆ. ಅದರ ಭಾಗವಾಗಿ ದಲಿತ ಮುಖಂಡರು ಎಂದು ಹೇಳಿಕೊಳ್ಳುವ ಆರ್‌ಎಸ್‌ಎಸ್ ಪ್ರಚೋದಿತರು, ದಲಿತ ನಾಯಕರ ವಿರುದ್ಧ ಸಿದ್ದರಾಮಯ್ಯನವರು ಒಳಸಂಚು ಮಾಡಿದ್ದರು ಎಂದು ಸುಳ್ಳು ಪ್ರಚಾರ ಮಾಡಿ ಕರಪತ್ರಗಳನ್ನು ಹಂಚಿದ್ದಾರೆ. ಹಿಂದುಳಿದ ವರ್ಗಗಳ ನಾಯಕನನ್ನು ಈ ರೀತಿ ತೇಜೋವಧೆ ಮಾಡುವುದು ಒಳ್ಳೆಯದಲ್ಲ. ದಲಿತ ಮುಖಂಡರು ಎಂದು ಹೇಳಿಕೊಂಡವರು ಬಿಡುಗಡೆ ಮಾಡಿರುವ ಕರ ಪತ್ರದಲ್ಲಿ ಯಾವುದೇ ವಾಸ್ತವ ಅಂಶಗಳಿಲ್ಲ. ಇದು ಆರ್‌ಎಸ್‌ಎಸ್ ಕುತಂತ್ರವಲ್ಲದೆ ಮತ್ತೇನು ಅಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ರಾಜ್ಯಕ್ಕೆ ನೀಡಿದ ಕೊಡುಗೆ ಅಪಾರವಾಗಿದೆ. ಅಧಿಕಾರ ವಹಿಸಿಕೊಂಡ ದಿನದಂದೇ ದಲಿತರ ಸಾಲ ಮನ್ನಾ ಮಾಡಿದ್ದಾರೆ. ಎಸ್‌ಸಿಪಿ–ಟಿಎಸ್‌ಪಿ ಯೋಜನೆ ಜಾರಿಗೆ ತಂದು ಸಾವಿರಾರು ಕೋಟಿ ರೂ. ಮೀಸಲಿಟ್ಟಿದ್ದಾರೆ. ದೇವದಾಸಿಯರಿಗೆ ಸಹಾಯ ಧನ, ದಲಿತ ಸಹಕಾರ ಸಂಘಗಳಿಗೆ ಷೇರು ಬಂಡವಾಳದಲ್ಲಿ ಶೇ.50 ರಷ್ಟು ಸಹಾಯಧನ ಕಲ್ಪಿಸಿದರು. ದಲಿತ ವಿದ್ಯಾರ್ಥಿಗಳಿಗೆ 2 ಲಕ್ಷ ರೂ.ವರೆಗೆ ಪ್ರೋತ್ಸಾಹ ಧನ, ಪರಿಶಿಷ್ಟ ಜಾತಿ ಮಕ್ಕಳು ಬೇರೆ ಜಾತಿಯವರನ್ನು ವಿವಾಹವಾದವರಿಗೆ 3ರಿಂದ 5 ಲಕ್ಷ ರೂ.ವರೆಗೆ ಸಹಾಯ ಧನ ಹೆಚ್ಚಿಸಿದ್ದಾರೆ. ದಲಿತ ಸಮುದಾಯದ ಗುತ್ತಿಗೆದಾರರಿಗೆ ಮೀಸಲಾತಿ, ಸಮುದಾಯ ಭವನಗಳ ನಿರ್ಮಾಣ, ಉನ್ನತ ವ್ಯಾಸಂಗಕ್ಕೆ ಆದ್ಯತೆ ಸೇರಿದಂತೆ ಹಲವು ಮಹತ್ವದ ಕೊಡುಗೆಗಳನ್ನು ದಲಿತರಿಗಾಗಿ ನೀಡಿದ್ದಾರೆ.

ಮುಖ್ಯವಾಗಿ ಉದ್ಯೋಗ ಬಡ್ತಿಗೆ ಹೊಸ ಮೀಸಲಾತಿ ಜಾರಿಗೆ ತಂದಾಗ ನೂರಾರು ದಲಿತರು ಹಾಗೂ ಹಿಂದುಳಿದ ವರ್ಗದ ಜನರೂ ಇದರ ಪ್ರಯೋಜನ ಪಡೆದುಕೊಂಡರು. ಮೈತ್ರಿ ಸರ್ಕಾರದ ರಚನೆ ಆದಾಗಲೂ ದಲಿತ ನಾಯಕರಾದ ಡಾ.ಜಿ.ಪರಮೇಶ್ವರ್ ಅವರೇ ಉಪ ಮುಖ್ಯಮಂತ್ರಿ ಆಗಿದ್ದರು. ಇವೆಲ್ಲವೂ ಸಿದ್ದರಾಮಯ್ಯ ಅವರ ದಲಿತಪರ ಕಾಳಜಿಯನ್ನು ತೋರಿಸುತ್ತದೆ. ಬಹುಶಃ ದಲಿತ ಮುಖ್ಯಮಂತ್ರಿಯಿದ್ದರೂ ದಲಿತರಿಗೆ ಇಷ್ಟೊಂದು ಕಾರ್ಯಕ್ರಮ ನೀಡಲಾಗುತ್ತಿರಲಿಲ್ಲ ಎಂಬುದಾಗಿ ದಲಿತ ಸಚಿವರೆ ಹೇಳಿದ್ದು ನಾಡಿನ ಜನತೆಗೆ ತಿಳಿದಿದೆ. ದಲಿತ ಸಮುದಾಯ ಸಿದ್ದರಾಮಯ್ಯ ಅವರ ಪರವಾಗಿದೆ. ಇದನ್ನು ಸಹಿಸದ ಕೆಲ ಕಿಡಿಗೇಡಿಗಳು ಸಿದ್ದರಾಮಯ್ಯ ಅವರ ವಿರುದ್ಧ ವೈಯಕ್ತಿಕ ತೇಜೋವಧೆಗೆ ಮುಂದಾಗಿದ್ದಾರೆ. ಎತ್ತಿ ಕಟ್ಟುವವವರಿಗೆ ಜನರೇ ತಕ್ಕ ಪಾಠ ಕಲಿಸಲಿದ್ದಾರೆ. ಸಿದ್ದರಾಮಯ್ಯ ಅವರು ಮತ್ತೆ ಸಿಎಂ ಆಗುವುದು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನೇಮಕ



ಮೈಸೂರು, ಜ.22– ಶರಣ ಸಾಹಿತ್ಯ ಪರಿಷತ್ತಿನ ವರುಣಾ ಹೋಬಳಿ ಅಧ್ಯಕ್ಷರಾಗಿ ದೇವಲಾಪುರ ಎಲ್.ಮಹೇಶ್ ಅವರನ್ನು ನೇಮಕ ಮಾಡಲಾಗಿದೆ ಎಂದು ಪರಿಷತ್ತಿನ ತಾಲೂಕು ಅಧ್ಯಕ್ಷ ಚಿಕ್ಕಹಳ್ಳಿ ದೇವರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಬ್ದುಲ್ ಸಮದ್ ನಿಧನ

ಮೈಸೂರು, ಜ.22– ಮೈಸೂರಿನ ಮಂಡಿ ಮೊಹಲ್ಲಾ, ಸುಲ್ತಾನ್ ಪಾರ್ಕ್ ರಸ್ತೆ ನಿವಾಸಿ, ಫಾರೂಖಿಯ ಬಾಲಕರ ಪ್ರೌಢಶಾಲೆ ನಿವೃತ್ತ ಅಟೆಂಡರ್ ಅಬ್ದುಲ್ ಸಮದ್(85) ಅವರು ಭಾನುವಾರ ನಿಧನರಾದರು.



ಮೃತರು ಪತ್ನಿ, ಮೂವರು ಪುತ್ರರು, ನಾಲ್ವರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಅಸರ್ ಪ್ರಾರ್ಥನೆಯ ನಂತರ ಇಂದು ಸಂಜೆ 5 ಗಂಟೆಗೆ ಮಂಡಿ ಮೊಹಲ್ಲಾ, ಮಿಷನ್ ಆಸ್ಪತ್ರೆ ರಸ್ತೆಯ ಮಸೀದಿ ಈದಿಗಾದಲ್ಲಿ ನಮಾಜ್–ಎ–ಜನಾಜ಼ ಬಳಿಕ ಟಿಪ್ಪು ಸರ್ಕಲ್ ಹಿಂಭಾಗದ ಮುಸ್ಲಿಮರ ರುದ್ರಭೂಮಿ ಗೇಟ್ ನಂ.4ರಲ್ಲಿ ಮೃತರ ಅಂತ್ಯಸಂಸ್ಕಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಾಸಕ ತನ್ವೀರ್ ಸೇಠ್, ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಶೌಕತ್ ಅಲಿ, ಆರ್‌ಎಂಇಟಿ ಕಾರ್ಯದರ್ಶಿ ತಾಜ್ ಮೊಹಮ್ಮದ್ ಖಾನ್, ಡಿಸಿಸಿ ಸದಸ್ಯ ರದೀವುಲ್ಲಾ ಖಾನ್, ಮಜೀದ್ ಅಹಮದ್, ಮಿರ್ಜಾ ಜಂಷೀದ್ ಬೇಗ್ ಅಶ್ರಫಿ, ಅಬ್ದುಲ್ ಸಮದ್ ಸಾಹೆಬ್, ಕ್ವಾಜಾ ಮೊಹಮ್ಮದ್ ಸೇರಿದಂತೆ ಅನೇಕ ಮುಖಂಡರು, ಫಾರೂಖಿಯ ಬಾಲಕರ ಪ್ರೌಢಶಾಲೆಯ ಬೋಧಕ–ಬೋಧಕೇತರ ಸಿಬ್ಬಂದಿ ಅಬ್ದುಲ್ ಸಮದ್ ಸಾಹೆಬ್ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

'ಕೊಟ್ಟ ಮಾತಿನಂತೆ ನಡೆದುಕೊಳ್ಳದಿದ್ದರೆ ರಾಜಕೀಯ ನಿವೃತ್ತಿ, ಹಿಟ್ಲರ್‌ನಂತೆ ಮೆರೆಯುವ ಮೋದಿಗೆ ಜನ ಬುದ್ಧಿ ಕಲಿಸುತ್ತಾರೆ'

ಹಾಸನ, ಜ.22– ವಿಧಾನಸಭೆ ಚುನಾವಣೆ ಹತ್ತಿರವಾಗುತ್ತಿದ್ದಂತೆ ರಾಜಕೀಯ ನಾಯಕರ ಮಾತುಗಳು ಪುಂಖಾನುಪುಂಖವಾಗಿ ಹೊರ ಬರುತ್ತಿವೆ. ಕಾಂಗ್ರೆಸ್ ಪ್ರಜಾಧ್ವನಿ ಬಸ್ ಯಾತ್ರೆ ಪ್ರಚಾರ ಭರಾಟೆ ಜೋರಾಗಿದೆ.



ಇಂದು ಜೆಡಿಎಸ್ ನ ಭದ್ರ ಕೋಟೆ ಹಾಸನದಲ್ಲಿ ಪ್ರಚಾರ ನಡೆಸಿದ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಸಂಪ್ರದಾಯದಂತೆ ಮತ್ತೆ ಪ್ರಧಾನಿ ನರೇಂದ್ರ ಮೋದಿ ಮೇಲೆ ವಾಗ್ದಾಳಿ ಮುಂದುವರಿಸಿದ್ದಾರೆ. ಮತ್ತೊಮ್ಮೆ ತಮ್ಮ ರಾಜಕೀಯ ನಿವೃತ್ತಿ ಬಗ್ಗೆಯೂ ಮಾತನಾಡಿದ್ದಾರೆ.

ಇಂದು ಹಾಸನದಲ್ಲಿ ನಡೆದ ಪ್ರಜಾಧ್ವನಿ ಸಮಾವೇಶದಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ ಮಾತನಾಡಿ, ಕಾಂಗ್ರೆಸ್ ಈ ಬಾರಿ ಅಧಿಕಾರಕ್ಕೆ ಬಂದು ಜನತೆಗೆ ನೀಡಿದ ಆಶ್ವಾಸನೆಯಂತೆ ನಡೆದುಕೊಳ್ಳದಿದ್ದರೆ ರಾಜಕೀಯ ನಿವೃತ್ತಿ ಪಡೆಯುವುದಾಗಿ ಘೋಷಿಸಿದ್ದಾರೆ.

ಹಾಸನದ 7 ವಿಧಾನಸಭಾ ಕ್ಷೇತ್ರಗಳಲ್ಲಿ 5 ಕ್ಷೇತ್ರಗಳನ್ನಾದರೂ ಕಾಂಗ್ರೆಸ್ ಗೆಲ್ಲಲೇಬೇಕು. ನಾನು ಮುಖ್ಯಮಂತ್ರಿ ಆಗಿದ್ದಾಗ ಉಚಿತವಾಗಿ 7 ಕೆಜಿ ಅಕ್ಕಿ ಕೊಡುತ್ತಿದ್ದೆ. ಈಗ ಬಿಜೆಪಿಯವರು ಕೇವಲ 5 ಕೆಜಿ ಅಕ್ಕಿ ಕೊಡುತ್ತಿದ್ದಾರೆ. ನಾವು ಅಧಿಕಾರಕ್ಕೆ ಬಂದರೆ ಉಚಿತವಾಗಿ 10 ಕೆಜಿ ಅಕ್ಕಿ ಕೊಡುತ್ತೇವೆ. ಕುಟುಂಬದ ಹಿರಿಯ ಮಹಿಳೆಗೆ ತಿಂಗಳಿಗೆ 2 ಸಾವಿರ ನೀಡುತ್ತೇವೆ. ಉಚಿತವಾಗಿ ತಿಂಗಳಿಗೆ 200 ಯೂನಿಟ್ ವಿದ್ಯುತ್ ಕೊಡುತ್ತೇವೆ. ನಾವು ಕೊಟ್ಟ ಮಾತಿನಂತೆ ನಡೆಯುತ್ತೇವೆ ಕೊಟ್ಟ ಭರವಸೆ ಈಡೇರಿಸದಿದ್ದರೆ ರಾಜಕೀಯ ನಿವೃತ್ತಿ ಪಡೆಯುತ್ತೇನೆ ಎಂದು ಹೇಳಿದರು.

ಪ್ರಧಾನಿ ಮೋದಿ ಹಿಟ್ಲರ್: ಉಡುಪಿಯಲ್ಲಿ ಕಾಂಗ್ರೆಸ್ ಪ್ರಜಾಧ್ವನಿ ಸಮಾವೇಶ ನಡೆಯುತ್ತಿದ್ದು, ನಗರದ ಮಿಷನ್ ಕಂಪೌಂಡ್‌ನಲ್ಲಿ ನಡೆದ ಸಮಾವೇಶದಲ್ಲಿ ಮಾತನಾಡಿದ ಸಿದ್ದರಾಮಯ್ಯ ಅಲ್ಲಿ ಕೂಡ ಬಿಜೆಪಿ ವಿರುದ್ಧ ವಾಗ್ದಾಳಿ ಮುಂದುವರಿಸಿದರು. ಪ್ರಧಾನಿ ನರೇಂದ್ರ ಮೋದಿಯನ್ನು ಸಿದ್ದರಾಮಯ್ಯ ಸರ್ವಾಧಿಕಾರಿಗೆ ಹೋಲಿಸಿದರು. ಹಿಟ್ಲರ್ ಸ್ವಲ್ಪ ದಿನ ಮೆರೆದ ಆಮೇಲೆ ಏನಾಯ್ತು? ಮುಸಲೋನಿಯ ಕಥೆ ಏನಾಯ್ತು? ಫ್ರ್ಯಾಂಕೋ ಏನಾದ, ಅದೇ ರೀತಿ ಪ್ರಧಾನಿ ಮೋದಿ ಸಹ ಸ್ವಲ್ಪ ದಿನ ಮೆರೆಯುತ್ತಾರೆ, ಆಮೇಲೆ ಅಧಿಕಾರದಿಂದ ಇಳಿಲೇಬೇಕು. ಜನ ಬುದ್ಧಿ ಕಲಿಸುತ್ತಾರೆ ಎಂದು ಟೀಕೆ ಮಾಡಿದ್ದಾರೆ ಅಲ್ಲದೆ ಮೋದಿ ದೇಶದ ಪ್ರಧಾನಿಯಾಗಿ ಅವರು ರಾಜ್ಯಕ್ಕೆ ಬರಬಹುದು. ಆದರೆ ಬಿಜೆಪಿಯನ್ನು ಅಧಿಕಾರಕ್ಕೆ ತರುತ್ತೇನೆ ಎಂದು ಬಂದರೆ ಅಸಾಧ್ಯ. ಕರ್ನಾಟಕಕ್ಕೆ 100 ಬಾರಿ ಬಂದರೂ ಬಿಜೆಪಿ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ, ರಾಜ್ಯದ ಜನಕ್ಕೆ ಬಿಜೆಪಿ ಮೇಲೆ ಭ್ರಮನಿರಸನವಾಗಿದೆ ಎಂದು ಕಟುವಾದ ಶಬ್ದಗಳಲ್ಲಿ ಟೀಕೆ ಮಾಡಿದ್ದಾರೆ.

ಹಗುರ ಪದ ಬಳಕೆ ಮಾಡಿ ಟೀಕಿಸುವುದು ಸಿದ್ದರಾಮಯ್ಯಗೆ ಶೋಭೆ ತರುವುದಿಲ್ಲ

ಸುತ್ತೂರು, ಜ.22(ಎಂಟಿವೈ)– ಟೀಕೆ ಮಾಡುವೇಳೆ ಹಗುರ ಪದ ಬಳಕೆ ಮಾಡುವುದು ಮಾಜಿ ಸಿಎಂ ಸಿದ್ದರಾಮಯ್ಯ ಅವರಿಗೆ ಶೋಭೆ ತರುವುದಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿರುಗೇಟು ನೀಡಿದ್ದಾರೆ.



ಸುತ್ತೂರಿನ ಹೆಲಿಪ್ಯಾಡ್‌ನಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ದೊಡ್ಡ ಸ್ಥಾನದಲ್ಲಿ ಇರುವವರು ಬೇರೆಯವರ ನಂಬಿಕೆಗಳ ಬಗ್ಗೆ ಕೀಳುಮಟ್ಟದಲ್ಲಿ ಮಾತನಾಡುವುದು ಯಾವ ಧರ್ಮ. ಇದು ಸಂಸ್ಕೃತಿ ಇಲ್ಲದ ದೊಡ್ಡವರ ಸಣ್ಣತನ. ತ್ಯಾಗದಿಂದ ದೊಡ್ಡವರಾಗುವುದು ಸಂಸ್ಕೃತಿ. ಸಿದ್ದರಾಮಯ್ಯ ಪದೇ ಪದೆ ಆ ರೀತಿ ಮಾತನಾಡಿದರೆ ಏನು ಮಾಡಲು ಸಾಧ್ಯ? ಈ ಹಿಂದೆ ಹರಿಪ್ರಸಾದ್ ಮಾತನಾಡಿದ್ದರು. ಇನ್ನು ಮುಂದೆ ಈ ರೀತಿಯ ಮಾತುಗಳಿಗೆ ಪ್ರತಿಕ್ರಿಯೆ ನೀಡಬಾರದು ಎಂದುಕೊಂಡಿದ್ದೇನೆ ಎಂದು ಅಸಮಾಧಾನ ಹೊರಹಾಕಿದರು.

ಈ ಹಿಂದೆ ನಾವು ಸಿದ್ದರಾಮಯ್ಯ ಸರ್ಕಾರದ ಭ್ರಷ್ಟಾಚಾರ, ದುರಾಡಳಿತವನ್ನು ಟೀಕಿಸಿದ್ದೇವೆ. ಆದರೆ ಎಂದಿಗೂ ವೈಯಕ್ತಿಕ ಟೀಕೆ ಮಾಡಿರಲಿಲ್ಲ. ನರೇಂದ್ರ ಮೋದಿ ಅವರನ್ನು ಹಿಟ್ಲರ್‌ಗೆ ಹೋಲಿಸಿದ್ದಾರೆ. ಮೋದಿ ಅವರ ವ್ಯಕ್ತಿತ್ವ ಇಡೀ ಭಾರತದ ಜನಸಂಖ್ಯೆಗೆ ಗೊತ್ತಿದೆ. ಯಾರೋ ಹಿಟ್ಲರ್ ಎಂದು ಹೇಳಿದರೂ ಚಿಂತೆ ಮಾಡುವ ಅಗತ್ಯವಿಲ್ಲ. ಮೋದಿ ಅವರನ್ನು ಗುಜರಾತ್ ಚುನಾವಣೆ ವೇಳೆ ಬಾಯಿಗೆ ಬಂದ ರೀತಿ ಮಾತಾಡಿದ ಪರಿಣಾಮ ಅಲ್ಲಿನ ಫಲಿತಾಂಶ ಏನಾಯಿತು ಎಂಬುದು ಎಲ್ಲರಿಗೂ ಗೊತ್ತಿದೆ. ರಾಜ್ಯದಲ್ಲಿಯೂ ಅದೇ ಸ್ಥಿತಿ ಬರಲಿದೆ ಎಂದರು.

ನಿವೃತ್ತಿ ಪಡೆಯುವ ಸ್ಥಿತಿ ಬರಲಿದೆ: ಈ ಬಾರಿ ಚುನಾವಣೆಯಲ್ಲಿ ಕಾಂಗ್ರೆಸ್ ನೀಡಿರುವ ಭರವಸೆ ಈಡೇರಿಸದೆ ಇದ್ದರೆ ರಾಜಕೀಯ ನಿವೃತ್ತಿ ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿಎಂ ಬೊಮ್ಮಾಯಿ, ಸಿದ್ದರಾಮಯ್ಯ ಅವರಿಗೆ ರಾಜಕೀಯ ನಿವೃತ್ತಿ ಪಡೆಯುವ ಸ್ಥಿತಿ ಬರಲಿದೆ. ಈಡೇರಿಸಲು ಸಾಧ್ಯವಾಗದ ಭರವಸೆ ನೀಡುತ್ತಿದ್ದಾರೆ. ಅದಕ್ಕಾಗಿ ನಿವೃತ್ತಿ ಖಚಿತ ಎಂದರು.

ಕಾಂಗ್ರೆಸ್ ಆಡಳಿತದಲ್ಲಿ ವಿದ್ಯುತ್ ಇಲಾಖೆ ದುಸ್ಥಿತಿಯಲ್ಲಿತ್ತು. ನಮ್ಮ ಸರಕಾರ ಬಂದ ಮೇಲೆ ಅದು ಸುಧಾರಿಸಿದೆ. ನಾವು ಪ.ಜಾತಿ, ಪ.ವರ್ಗದವರಿಗೆ 75 ಯೂನಿಟ್ ಉಚಿತ ವಿದ್ಯುತ್ ಕೊಟ್ಟ ಮೇಲೆ ಅದೇ ರೀತಿ ಕಾಂಗ್ರೆಸ್ ನವರು ಅಸಾಧ್ಯವಾದ 200 ಯೂನಿಟ್ ವಿದ್ಯುತ್ ನೀಡಿಕೆ ಭರವಸೆ ಕೊಡುತ್ತಿದ್ದಾರೆ. ಜನರಿಗೆ ಇದೆಲ್ಲಾ ಅರ್ಥವಾಗುತ್ತದೆ. ಸಿದ್ದರಾಮಯ್ಯ ವಿಚಲಿತರಾಗಿದ್ದಾರೆ. 30 ಕೆಜಿ ಅಕ್ಕಿ ನೀಡುತ್ತಿದ್ದ ಅವರು ಅದನ್ನು ನಂತರ 7 ಕೆಜಿಗೆ ಇಳಿಸಿ ಕಡೆಗೆ ನಾಲ್ಕು ಕೆಜಿ ಗೆ ತಂದರು. ಚುನಾವಣೆ ಅಂತ ಅದನ್ನು ಮತ್ತೆ 7 ಕೆ.ಜಿಗೆ ಏರಿಸಿದ್ದಾರೆ. ಇದೆಲ್ಲಾ ಡಾಟಾ ನನ್ನ ಬಳಿ ಇದೆ ಎಂದರು.

ನಕ್ಕರೆ ಅದೇ ಸ್ವರ್ಗ

ಅಪಘಾತದಲ್ಲಿ ಗಂಡ, ಹೆಂಡತಿ ಇಬ್ಬರು ತೀರ್ಕೊಂಡು ದೆವ್ವಗಳಾದರಂತೆ? ಬಹಳ ದಿನಗಳ ನಂತರ ಒಬ್ಬರನ್ನೊಬ್ಬರು ಭೇಟಿಯಾದರು.

ಹೆಂಡತಿ : ಎಷ್ಟು ದಿನಗಳ ನಂತರ ಸಿಕ್ಕಿದ್ದೀರಿ, ಥೇಟ್ ದೆವ್ವದ ತರಹವೇ ಆಗಿ ತಿರುಗಾಡ್ತಾ ಇದ್ದೀರಿ.

ಗಂಡ : ನೀನು ಮಾತ್ರ ಒಂಚೂರು ಚೇಂಜ್ ಆಗಿಲ್ಲ ಕಣೇ. ಆವಾಗ ಹೇಗೆ ಇದ್ದ್ಯೋ ಈಗಲೂ ಹಂಗೇ ಇದ್ದೀಯ.

ಮೈಸೂರು ಮಿತ್ರ

ಸೋಮವಾರ, 23 ಜನವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ತಪ್ಪು ಅನ್ನುವುದು ಜೀವನದ ಒಂದು ಪುಟ ಮಾತ್ರ... ಸಂಬಂಧಗಳು ಅನ್ನುವುದು ಪೂರ್ತಿ ಪುಸ್ತಕ, ಆ ಒಂದು ಪುಟಕ್ಕೋಸ್ಕರ, ಪೂರ್ತಿ ಪುಸ್ತಕವನ್ನು ಕಳೆದುಕೊಳ್ಳಬೇಡಿ...

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನದೀನೇ ನೋಡದೆ ಇರುವವನು ಸಮುದ್ರ ವರ್ಣನೆ ಮಾಡಿದ ಹಾಗೆ.

ನಿಮ್ಮ ಪತ್ರಗಳು

ಎಂಎಲ್‌ಎ ಹುದ್ದೆಗಳ ನೇಮಕಾತಿ–2023

ಮಾನ್ಯರೆ,

ಅತೀ ಶೀಘ್ರದಲ್ಲಿ ಕರ್ನಾಟಕ ವಿಧಾನಸಭೆಗೆ 224 ಎಂಎಲ್‌ಎ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಾಗುವುದು.



ವಿದ್ಯಾರ್ಹತೆ : ಸುಳ್ಳು ಹೇಳೋದು, ಅಕ್ರಮ ಆಸ್ತಿಗಳಿಕೆ, ಅನೈತಿಕ ಚಟುವಟಿಕೆ, ಕೊಲೆ ಮಾಡುವುದು, ಮಾಡಿಸುವುದು, ಸೆರೆಮನೆ ವಾಸ, ಧರ್ಮ–ಧರ್ಮಗಳ ನಡುವೆ ಬೆಂಕಿ ಹಚ್ಚುವುದು ಅಥವಾ ನಂಬಿಕೆ ದ್ರೋಹ ಇವುಗಳಲ್ಲಿ ಯಾವುದಾದರು ಒಂದರಲ್ಲಿ ಪ್ರಥಮ ದರ್ಜೆಯಲ್ಲಿ ಡಿಗ್ರಿ ಪಡೆದಿರಬೇಕು.

ವಯೋಮಿತಿ : ಆಜೀವ ಪರ್ಯಂತ.

ವೇತನ : ಐದು ವರ್ಷಗಳ ಕಾಲ ಇಡೀ ಕರ್ನಾಟಕ ರಾಜ್ಯವನ್ನೇ ಕೊಳ್ಳೆ ಹೊಡೆದು ಎಷ್ಟು ಬೇಕು ಅಷ್ಟು ಹಣ ಗಳಿಸಿಕೊಳ್ಳಬಹುದು.

ಇತರೆ ಅನುಕೂಲಗಳು: ಆಯ್ಕೆ ಆದವರಿಗೆ ತಮ್ಮ ಮಕ್ಕಳು, ಮೊಮ್ಮಕ್ಕಳಿಗೂ ಹಾಗೂ ತಮ್ಮ ಮುಂದಿನ ಹತ್ತು ಪೀಳಿಗೆಗೂ ಎಮ್‌ಎಲ್‌ಸಿ, ಎಂಎಲ್‌ಎ ಮತ್ತು ಎಂಪಿ ಆಗುವ ಅವಕಾಶ.

–ವಿಜಯಕುಮಾರ್ ಎಚ್.ಕೆ., ರಾಯಚೂರು

ಚಾಮರಾಜ ಕ್ಷೇತ್ರದ ಶಾಸಕರಿಗೆ ಧನ್ಯವಾದಗಳು

ಮಾನ್ಯರೆ,

ಮೈಸೂರಿನ ವಿ.ವಿ. ಮೊಹಲ್ಲಾ 2ನೇ ಮುಖ್ಯ ರಸ್ತೆ ನಿರ್ಮಲಾ ಕಾನ್ವೆಂಟ್ ರಸ್ತೆ ಗುಂಡಿಮಯವಾಗಿ ಸಾರ್ವಜನಿಕರು ಮತ್ತು ವಾಹನ ಸವಾರರಿಗೆ ತುಂಬಾ ಕಷ್ಟವಾಗುತ್ತಿತ್ತು. ಈ ಬಗ್ಗೆ ಚಾಮರಾಜ ಕ್ಷೇತ್ರದ ಶಾಸಕ ಎಲ್. ನಾಗೇಂದ್ರ ಅವರಿಗೆ ಮನವಿ ಸಲ್ಲಿಸಿದಾಗ ಸ್ಪಂದಿಸಿದ ಶಾಸಕರು ರಸ್ತೆಯನ್ನು ಸಂಪೂರ್ಣ ಉತ್ತಮ ಮಟ್ಟದಲ್ಲಿ ಡಾಂಬರೀಕರಣಗೊಳಿಸಿದ್ದಾರೆ. ಶಾಲಾ ಮಕ್ಕಳ ವ್ಯಾನ್ ಚಾಲಕರು, ಹಿರಿಯ ನಾಗರಿಕರು ಈ ಭಾಗದ ನಿವಾಸಿಗಳ ಪರವಾಗಿ ಧನ್ಯವಾದಗಳು.

–ವಿ.ವಿ. ಮೊಹಲ್ಲಾ 2ನೇ ರಸ್ತೆ ನಿವಾಸಿಗಳು.

ಎರಡು ಕಡೆ ಸ್ಪರ್ಧೆ: ಸಿದ್ದು ನಿಲುವೇನು...?

ಮಾನ್ಯರೆ,

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ದೇವರು ದಿಂಡಿರು ಎಂದರೆ ಅಷ್ಟಷ್ಟೇ. ಅವರಿಗೆ ವಿಚಾರವಾದಿಗಳೊಂದಿಗೆ ಒಡನಾಟವಿದೆ. ತಮ್ಮ ಅಧಿಕಾರಾವಧಿಯಲ್ಲಿ "ಚಿಂತಕರ ಚಾವಡಿ" ಕೂಡ ಮಾಡಿಕೊಂಡಿದ್ದರು. ಇತ್ತೀಚೆಗೆ ಅವರ ಮನೆ ದೇವರಾದ ಮಳವಳ್ಳಿ ತಾಲೂಕಿನ ಚೊಟ್ಟನಹಳ್ಳಿ ಗ್ರಾಮದ ಆದಿನಾಡು ಚಿಕ್ಕಮ್ಮ ತಾಯಿಯು, ದೇವಸ್ಥಾನದ ಪೂಜಾರಿಯ ಮೇಲೆ ಆವಾಹಗೊಂಡು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಎರಡು ಕಡೆ ನಿಲ್ಲಬೇಕು ಎಂಬ ಸೂಚನೆ ನೀಡಿದೆಯೆಂದು ಹೇಳಲಾಗಿದ್ದು ಇದು ಚರ್ಚೆಗೆ ಗ್ರಾಸವಾಗಿದೆ.

ದೇವರಿರುವನೇ? ಒಂದು ವೇಳೆ ಇದ್ದರೆ ಮನುಷ್ಯರ ಮೇಲೆ ಬರುವನೇ? ಎಂಬ ಮೂಲಭೂತ ಪ್ರಶ್ನೆ ವಿಚಾರವಾದಿಗಳೂ ಸೇರಿದಂತೆ ಅನೇಕರನ್ನು ಕಾಡಬಹುದು. ನಮ್ಮಲ್ಲಿ ಅಂದರೆ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಹಲವಾರು ಮೌಢ್ಯಗಳಿವೆ. ದೇವರ ಹೆಸರಿನಲ್ಲಿ ನಾನಾ ರೀತಿಯ ಆಚರಣೆಗಳು, ಪದ್ಧತಿಗಳು ಜಾರಿಯಲ್ಲಿವೆ. ಇಂತವುಗಳಲ್ಲಿ ಮುಗ್ಧ ಪ್ರಾಣಿಗಳನ್ನು ಹರಕೆಯ ನೆಪದಲ್ಲಿ ಜಾತ್ರೆ ಮುಂತಾದ ವಿಶೇಷ ಸಂದರ್ಭಗಳಲ್ಲಿ ದೇವರಿಗೆ ಬಲಿ ನೀಡುವುದೂ ಒಂದು.

ದೇವರು ಎಂಬುದು ಮೌಢ್ಯವೋ ಅಥವಾ ಅವರವರ ಭಕ್ತಿ ಭಾವನೆಗಳೋ ಎಂಬುದನ್ನು ಅವರವರೇ ತೀರ್ಮಾನ ಮಾಡಬೇಕು. ಆದರೂ ಸಹ ನಮ್ಮನ್ನು ಮೀರಿದ ಅಲೌಕಿಕ ಶಕ್ತಿ ಇದೆ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಸಿದ್ದರಾಮಯ್ಯನವರಂತಹ ವಿಚಾರವಾದಿ ಈ ವಿಚಾರದಲ್ಲಿ ಏನು ಮಾಡುತ್ತಾರೆ ಎಂಬುದೇ ಈಗ ಕುತೂಹಲದ ಪ್ರಶ್ನೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಬೆಂಗಳೂರು–ಮೈಸೂರು ದಶಪಥ ಹೆದ್ದಾರಿಯಲ್ಲಿ ಶೌಚಾಲಯ ನಿರ್ಮಿಸಿ

ಮಾನ್ಯರೆ,



ಬೆಂಗಳೂರು–ಮೈಸೂರು ದಶಪಥ ರಸ್ತೆಯೇನೋ ಆಯಿತು. ಚೆನ್ನಾಗಿದೆಯೆಂಬ ಮಾತು ಹಲವರಿಂದ ಬಂದಿದೆ. ಆ ರಸ್ತೆಯಲ್ಲಿ ಎರಡು ಸಲ ನಾನೂ ಪ್ರಯಾಣ ಮಾಡಿದೆ. ರಸ್ತೆಯಲ್ಲೆಲ್ಲೂ ಶೌಚಾಲಯಕ್ಕೆ ಸೂಕ್ತ ವ್ಯವಸ್ಥೆ ಮಾಡದಿರುವುದು ನನ್ನ ಗಮನಕ್ಕೆ ಬಂದಿತು.

ಮಧ್ಯೆಯೆಲ್ಲೂ ಸಾರ್ವಜನಿಕರ ಅನುಕೂಲಕ್ಕಾಗಿ ವಿಶ್ರಾಂತಿಗೃಹ (ರೆಸ್ಟ್ ರೂಂ) ಇಲ್ಲದಿರುವುದು ಒಂದು ಕೊರತೆಯೆಂದು ಹೆದ್ದಾರಿ ಪ್ರಾಧಿಕಾರದವರಿಗಾಗಲೀ ನಮ್ಮ ಸಂಸದರಿಗಾಗಲೀ ಅನಿಸಲಿಲ್ಲವೇ? ಇನ್ನೂ ಕಾಲ ಮಿಂಚಿಲ್ಲ... ರಸ್ತೆ ಉದ್ಘಾಟನೆಗೆ ಸಾಕಷ್ಟು ಕಾಲಾವಕಾಶವಿದೆ. ಪ್ರತಿ ಇಪ್ಪತ್ತೈದು ಅಥವಾ ಮೂವತ್ತು ಕಿಲೋ ಮೀಟರ್ ಅಂತರದಲ್ಲಿ ಶೌಚಾಲಯವನ್ನು ನಿರ್ಮಿಸಲೆಂದು ಹೆದ್ದಾರಿ ಪ್ರಾಧಿಕಾರಕ್ಕೆ ಈ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ.

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು.

ಮಕ್ಕಳಿಗಾಗಿ ಎಲ್ಲೆಡೆ ಸಾಹಿತ್ಯ ಸಮ್ಮೇಳನ ನಡೆಯಲಿ

ಮಾನ್ಯರೆ,

ನಾನು ಬೆಂಗಳೂರಿನ ದೂರವಾಣಿ ನಗರದ ಐಟಿಐ, ಸಿಬಿಎಸ್ಸಿ ಪಬ್ಲಿಕ್ ಶಾಲೆಯಲ್ಲಿ 9ನೇ ತರಗತಿ ಓದುತ್ತಿದ್ದೇನೆ. ನಾನು ಮಾತೃಭಾಷೆಯಾದ ಕನ್ನಡದಲ್ಲಿ ಹೆಚ್ಚಿನ ಆಸಕ್ತಿ ಹೊಂದಿರುತ್ತೇನೆ. ನಮ್ಮಂತಹ ಹಲವಾರು ಮಕ್ಕಳಲ್ಲಿ ಸಾಹಿತ್ಯ ಅಭಿರುಚಿ ಇರುತ್ತದೆ. ಕಥೆ ಬರೆಯುವುದು, ಕವನ ರಚನೆ ಮಾಡುವುದು, ನಾಟಕ, ನೃತ್ಯ ಹಾಗೂ ಸಂಗೀತ... ಹೀಗೆ ಹಲವಾರು ಕ್ಷೇತ್ರಗಳಲ್ಲಿ ಪ್ರತಿಭೆಗಳಿರುತ್ತಾರೆ. ಇಂತಹವರಿಗಾಗಿ ಅವಕಾಶಗಳು ದೊರೆಯುವುದು ಶಾಲಾ ಮಟ್ಟದಲ್ಲಿ ಮಾತ್ರವಾಗಿರುತ್ತದೆ. ಹಿರಿಯರಿಗಾಗಿ ಅನೇಕ ಸಾಹಿತ್ಯ ಸಂಬಂಧ ಪಟ್ಟ ಕಾರ್ಯಕ್ರಮಗಳು ಏರ್ಪಡಿಸಿದ ಹಾಗೆ ನಮ್ಮಂತಹ ಪುಟ್ಟ ಮಕ್ಕಳಿಗೂ ಜಿಲ್ಲಾ ಮಟ್ಟ, ರಾಜ್ಯ ಮಟ್ಟ ಹಾಗೂ ರಾಷ್ಟ್ರ ಮಟ್ಟದಲ್ಲಿ ಸಾಹಿತ್ಯ ಸಮ್ಮೇಳನವನ್ನು ಏರ್ಪಡಿಸಿದರೆ ಉತ್ತಮ. ಇದರಿಂದ ಸಾಹಿತ್ಯದಲ್ಲಿ ಆಸಕ್ತಿ ಇರುವ ಸ್ನೇಹಿತರೊಂದಿಗೆ ಬೆರೆತು ಸಾಹಿತ್ಯದಲ್ಲಿ ಆಸಕ್ತಿ ಬೆಳೆಸಿಕೊಳ್ಳಲು ಸಹಾಯವಾಗುತ್ತದೆ. ಇದರಿಂದ ಮನಸ್ಸು ಉಲ್ಲಾಸವಾಗಿ ಬರವಣಿಗೆಯಲ್ಲಿ ತೊಡಗಿಸಿಕೊಳ್ಳಲು ಪ್ರೇರಣೆಯಾಗುತ್ತದೆ.ಆದ್ದರಿಂದ ಮಕ್ಕಳ ಸಾಹಿತ್ಯಕ್ಕೂ ಗಮನ ನೀಡಿ ಎಲ್ಲೆಡೆ ಮಕ್ಕಳ ಸಾಹಿತ್ಯ ಕಾರ್ಯಕ್ರಮಗಳನ್ನು ಏರ್ಪಡಿಸಿ ಎಂಬುದಾಗಿ ನನ್ನದೊಂದು ಮನವಿ.

– ಎಂ.ಎಸ್. ಇಂಚರ ದತ್, 9ನೇ ತರಗತಿ ವಿದ್ಯಾರ್ಥಿ, ಬೆಂಗಳೂರು

ಚಿಂತನೆ



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಬೆಲೆ ಏರಿಕೆ ಎಂಬ ಸಾಮೂಹಿಕ ಪಿಡುಗು

ಇತ್ತೀಚಿನ ದಿನಗಳಲ್ಲಿ ಬೆಲೆ ಏರಿಕೆ ಎಂಬುದು ಸಾಮೂಹಿಕ ಸನ್ನಿಯಂತೆ ಕಾಡುತ್ತಿದೆ. ಮನುಷ್ಯನ ಜೀವ ಹೊರತುಪಡಿಸಿ ಇತರೆಲ್ಲಾ ವಸ್ತುಗಳ ಬೆಲೆ ಏರಿಕೆಯಾಗುತ್ತಲೇ ಇದೆ. ಇದಕ್ಕೆ ಯಾರು ಕಡಿವಾಣ ಹಾಕಬಹುದು? ಎಂಬುದು ನಿರ್ಣಯವಾಗದ ಚರ್ಚಾ ವಿಷಯದಂತೆ ಕಂಡುಬರುತ್ತದೆ. ಒಂದರ ಬೆಲೆ ಏರಿಕೆಯಾದರೆ ಅದಕ್ಕೆ ಪೂರಕವೋ ಎಂಬಂತೆ ಇತರೆ ಹಲವು ವಸ್ತುಗಳ ಬೆಲೆಗಳು ಏರಿಕೆಯಾಗುತ್ತದೆ. ಈ ಬೆಲೆ ಏರಿಕೆಗಳ ಜೊತೆಗೇ ಅದಕ್ಕೆ ಸಂಬಂಧಿಸಿದ ಕರಗಳೂ ಹೆಚ್ಚಾಗುತ್ತದೆ. ಒಂದು ವಸ್ತುವಿನ ಬೆಲೆ ಒಂದು ರೂಪಾಯಿ ಏರಿಕೆಯಾದರೆ ಅದು ಒಂದು ರೂಪಾಯಿಗೇ ಸೀಮಿತವಾಗುವುದಿಲ್ಲ. ಅದರ ಮೇಲೆ ಕರಗಳೂ ಸೇರಿ ಅದು ಮತ್ತಷ್ಟು ಜಾಸ್ತಿಯಾಗುತ್ತದೆ. ಈ ಬೆಲೆ ಏರಿಕೆಯನ್ನು ಯಾರು ನಿರ್ಧರಿಸುತ್ತಾರೋ ತಿಳಿಯದು. ಆದರೆ ಏರಿಕೆ ಮಾತ್ರ ನಿರಂತರವಾಗಿ ಆಗುತ್ತಲೇ ಇರುತ್ತದೆ.

ಯಾವ ಪದಾರ್ಥ ಸುಲಭವಾಗಿ ಮಾರುಕಟ್ಟೆಯಲ್ಲಿ ದೊರಕುವುದಿಲ್ಲವೋ ಆಗ ಆ ವಸ್ತುವಿನ ಬೆಲೆ ಏರಿಕೆಯಾಗುತ್ತದೆ. ನಮಗೆ ಅವಶ್ಯಕವಾದ ಪದಾರ್ಥಗಳು ಬೇಕಾಗಿರುವುದರಿಂದ ಅದನ್ನು ಕೊಳ್ಳಲೇಬೇಕಾಗುತ್ತದೆ. ಆ ವಸ್ತುವು ಅವಶ್ಯಕ ಎಂದರಿತ ವ್ಯಾಪಾರಿಗಳು ಸಮಯ ನೋಡಿಕೊಂಡು ಅದರ ಬೆಲೆ ಏರಿಸುತ್ತಾರೆ. ಜನ ಬೇಸರಿಸಿಕೊಂಡಾದರೂ ಅದನ್ನು ಕೊಂಡುಕೊಳ್ಳುತ್ತಾರೆ, ತಮಗೆ ಲಾಭವಾಗುತ್ತದೆ ಎಂಬುದು ಅವರ ಅಭಿಮತ. ಅಲ್ಲದೇ ವ್ಯಾಪಾರ ಮಾಡುವುದೇ ಲಾಭ ಗಳಿಸಲು ಎಂಬ ಚಿಂತನೆಯೂ ಇದಕ್ಕೆ ಕಾರಣವಾಗುತ್ತದೆ. ಅದಕ್ಕಾಗಿ ಕೃತಕವಾಗಿ ಅಭಾವ ಸೃಷ್ಟಿಸುವುದೂ ನಡೆಯುತ್ತದೆ. ಇದನ್ನು ಕಾಳಸಂತೆ ಎಂದು ಕರೆಯಲಾಗುತ್ತದೆ. ಇಂತಹ ಪದಾರ್ಥಗಳ ಕೃತಕ ಅಭಾವ ಸೃಷ್ಟಿಸಬಹುದು ಎಂದು ಭಾವಿಸುವ ವರ್ಗ ಅದನ್ನು ಹೆಚ್ಚು ಹೆಚ್ಚು ಸಂಗ್ರಹಿಸಿ, ಮಾರುಕಟ್ಟೆಯಲ್ಲಿ ಅದು ಸುಲಭವಾಗಿ ಸಿಗದಂತೆ ಮಾಡಿ, ನಂತರ ತನ್ನಲ್ಲಿರುವ ಆ ವಸ್ತುವನ್ನು ಒಂದಕ್ಕೆರಡು ಬೆಲೆಗೆ ಮಾರುಕಟ್ಟೆಗೆ ಬಿಡುಗಡೆ ಮಾಡಿ ಹೆಚ್ಚು ಲಾಭ ಗಳಿಸುತ್ತಾರೆ. ಅಸಹಾಯಕ ಜನ ಅದನ್ನು ಕೊಳ್ಳಲೇಬೇಕಾದ ಅನಿವಾರ್ಯತೆಯಿಂದ ಕೊಳ್ಳಲೇಬೇಕಾಗುತ್ತದೆ.

ಈ ಹಿಂದೆ ಪೆಟ್ರೋಲ್, ಡೀಸಲ್ ಬೆಲೆಗಳನ್ನು ನಿರ್ದಿಷ್ಟ ಅವಧಿಯಲ್ಲಿ ಪರಿಷ್ಕರಿಸಲಾಗುತ್ತಿತ್ತು. ವಿಶೇಷ ಎಂದರೆ ಅದರ ಬೆಲೆಯಲ್ಲಿ ಕೆಲವು ಸಲ ಕಡಿಮೆಯೂ ಆಗುತ್ತಿತ್ತು. ಆದರೆ ನಿರ್ಧಾರ ಪ್ರಕಟವಾಗುವವರೆಗೆ ಬೆಲೆ ಹೆಚ್ಚಾಗುವುದೋ. ಕಡಿಮೆಯಾಗುವುದೋ ಎಂಬ ಗುಟ್ಟು ರಟ್ಟಾಗುತ್ತಿರಲಿಲ್ಲ. ಹಾಗಾಗಿ ಅನೇಕ ಪೆಟ್ರೋಲ್ ಬಂಕ್ ಮಾಲಿಕರು ಬೆಲೆ ಹೆಚ್ಚಾಗಬಹುದೆಂದು ಹೆಚ್ಚು ಇಂಧನವನ್ನು ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರು. ಬೆಲೆ ಏರಿಕೆಯಾದರೆ ಹೆಚ್ಚು ಲಾಭ ಅವರಿಗೆ ಬರುತ್ತಿತ್ತು. ಆದರೆ ಬೆಲೆ ಕಡಿಮೆಯಾದರೆ ಅವರು ನಷ್ಟ ಅನುಭವಿಸಬೇಕಾಗುತ್ತಿತ್ತು. ನಷ್ಟವಾದಾಗ ತಮಗೆ ನಷ್ಟವಾಯಿತು ಎಂದು ಬೊಬ್ಬೆ ಹೊಡೆಯುತ್ತಿದ್ದವರು ಲಾಭವಾದಾಗ ತಮಗೆ ಲಾಭ ಬಂತು ಎಂದು ಹೇಳುತ್ತಿರಲಿಲ್ಲ. ಅದೂ ಬೆಲೆ ಏರಿಕೆ, ಇಳಿಕೆ ನಾಲ್ಕಾರು ರೂಪಾಯಿಗಳಲ್ಲಿ ಆಗುತ್ತಿದ್ದಾಗ ಇದು ಸಾಮಾನ್ಯವಾದ ವಿಷಯವಾಗಿತ್ತು. ತಮಗೆ ಹೆಚ್ಚಿನ ಲಾಭ ಬಂದಾಗಲೂ ಅವರು ಅದನ್ನು ಗ್ರಾಹಕರಿಗೆ ಒಂದಷ್ಟಾದರೂ ಹಂಚುವ ಕೆಲಸವನ್ನು ಮಾಡುತ್ತಿರಲಿಲ್ಲ. ಇದು ಕೇವಲ ಇಂಧನಕ್ಕೆ ಸಂಬಂಧಿಸಿದ್ದು ಎಂದಲ್ಲ. ಎಲ್ಲಾ ಸಾಮಗ್ರಿಗಳಿಗೂ ಇದು ಅನ್ವಯವಾಗುತ್ತದೆ. ಬೆಲೆ ಏರಿಕೆಯ ಸುಳಿವು ಸಿಕ್ಕ ಜನರು ಬೆಲೆ ಏರಿಕೆಯ ಹಿಂದಿನ ದಿನ ಪೆಟ್ರೋಲ್ ಬಂಕ್‌ಗಳಲ್ಲಿ ಸರದಿ ಸಾಲಿನಲ್ಲಿ ನಿಂತು ತಮ್ಮ ವಾಹನಗಳಿಗೆ ಇಂಧನ ತುಂಬಿಸಿಕೊಳ್ಳುತ್ತಿದ್ದರು. ಆಗ ಬೆಲೆ ಏರಿಕೆ ಮಧ್ಯರಾತ್ರಿಯಿಂದ ಜಾರಿಯಾಗುತ್ತಿತ್ತು. ಅದಕ್ಕೆ ಜನ ಹೊಂದಿಕೊಂಡಿದ್ದರು. ಆದರೆ ಆ ರೀತಿಯಾಗಿ ಎಷ್ಟು ಇಂಧನ ಸಂಗ್ರಹಿಸಿಡಬಹುದು? ಒಂದೆರಡು ದಿನಗಳ ನಂತರ ಮತ್ತೆ ಇಂಧನ ತುಂಬಿಸಲೇ ಬೇಕಾಗಿತ್ತು. ಆದರೆ ಒಂದೆರಡು ದಿನದ ಮಟ್ಟಿಗೆ ನಾವು ಸ್ವಲ್ಪ ಹಣ ಉಳಿಸಿದೆವು ಎಂಬ ಸಮಾಧಾನ ಜನರಿಗಾಗುತ್ತಿತ್ತು.

ಈ ರೀತಿ ಹಲವು ಕ್ಷೇತ್ರಗಳಲ್ಲಿ ಬೆಲೆ ಏರಿಕೆಯ ಬಿಸಿ ನಮಗೆ ಆಗುತ್ತಲೇ ಇರುತ್ತದೆ. ಇಲ್ಲಿ ಬೆಲೆ ಏರಿಕೆಯು ಒಂದು ಭಾಗವಾದರೆ, ಅದರ ಮೇಲಿನ ತೆರಿಗೆ ಮತ್ತೊಂದು ಬಗೆಯದು. (ಹೀಗಾಗಿ ಒಂದೊಂದು ಊರಿನಲ್ಲಿ ಒಂದೊಂದು ಬೆಲೆ.) ವಸ್ತುವಿನ ಬೆಲೆ ಏರಿಕೆಯ ಲಾಭ ವ್ಯಾಪಾರಿಗೆ ಸೇರಿದರೆ, ತೆರಿಗೆ ಸರ್ಕಾರದ ಬೊಕ್ಕಸಕ್ಕೆ ಜಮಾ ಆಗುತ್ತದೆ. ಹಾಗಾಗಿ ಸರ್ಕಾರ ಬೆಲೆ ಏರಿಕೆಯ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಬದಲಿಗೆ ಒಳಗೊಳಗೆ ಸಂತೋಷವನ್ನೇ ಪಡುತ್ತವೆ.

ಇಲ್ಲಿ ಏಳುವ ಪ್ರಶ್ನೆ, ಎಂದರೆ ಈ ಬೆಲೆ ಏರಿಕೆ ಪ್ರಕ್ರಿಯೆಗೆ ಕಡಿವಾಣ ಹಾಕಬೇಕಾದವರು ಯಾರು? ಎಂಬುದು. ಸರ್ಕಾರ ಕಡಿವಾಣ ಹಾಕುವುದಿಲ್ಲ. ಏಕೆಂದರೆ ಅದಕ್ಕೆ ಪರೋಕ್ಷವಾಗಿ ತೆರಿಗೆ ಸಿಗುತ್ತದೆ. ವ್ಯಾಪಾರಿಗಳು ಲಾಭದ ಆಸೆಯಿಂದ ಬೆಲೆ ಏರಿಕೆ ಮಾಡುತ್ತಲೇ ಹೋಗುತ್ತಾರೆ. ಒಂದು ವಸ್ತುವಿನ ಬೆಲೆ ಏರಿಕೆಯು ಪ್ರಚಾರವಾದರೆ, ಅದಕ್ಕೆ ಪೂರಕವಾದ ಹಲವು ವಸ್ತುಗಳ ಬೆಲೆ ಏರಿಕೆ ಪ್ರಚಾರಕ್ಕೇ ಬರುವುದಿಲ್ಲ. ಅಂದರೆ ಗ್ರಾಹಕ ಕೇವಲ ಒಂದು ವಸ್ತುವಿನ ಬೆಲೆ ಮಾತ್ರ ಏರಿಕೆಯಾಗಿದೆ ಎಂದು ಭಾವಿಸುವಂತಿಲ್ಲ. ಗ್ಯಾಸ್, ಹಾಲು, ಸಕ್ಕರೆ ದರ ಏರಿಕೆಯಾದರೆ, ಅವುಗಳೊಂದಿಗೆ ಹೋಟೇಲ್‌ನ ತಿಂಡಿಗಳ ಬೆಲೆಯೂ ಏರಿಕೆಯಾಗುತ್ತದೆ. ಪದಾರ್ಥಗಳ ಬೆಲೆ ಏರಿಕೆ ಶೇ. 10 ಆದರೆ ತಿಂಡಿಗಳ ಬೆಲೆಯಲ್ಲಿ ಶೇ. 25 ರಷ್ಟು ಹೆಚ್ಚಾಗುತ್ತದೆ. ಅಂದರೆ ಕೊಳ್ಳುವವನಿಗೆ ಎಲ್ಲೆಡೆಯಲ್ಲೂ ಬರೆಹಾಕಿದಂತೆ ಆಗುತ್ತದೆ.



> 1975 ರಲ್ಲಿ ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿದಾಗ ಎಲ್ಲವೂ ಸರ್ಕಾರದ ನಿಯಂತ್ರಣದಲ್ಲಿತ್ತು. ಬೆಲೆಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸಬೇಕಾಗಿತ್ತು, ತಮ್ಮಲ್ಲಿರುವ ಸ್ಟಾಕ್‌ನ್ನು ಬಹಿರಂಗಪಡಿಸಬೇಕಾಗಿತ್ತು. ಸರ್ಕಾರದ ಗಮನಕ್ಕೆ ತರದೆ ಬೆಲೆ ಏರಿಕೆ ಮಾಡಿದರೆ ಶಿಕ್ಷಿಸಬಹುದಾಗಿತ್ತು. ಆಗ ಎಲ್ಲಾ ವ್ಯಾಪಾರಿಗಳು ಹೆದರಿಕೆಯಿಂದಲಾದರೂ ಬೆಲೆಯನ್ನು ಹೆಚ್ಚಿಸಲು ಹೋಗುತ್ತಿರಲಿಲ್ಲ. ಒಂದು ರೀತಿ ಬೆಲೆ ಏರಿಕೆ ನಿಯಂತ್ರಣದಲ್ಲಿತ್ತು. ಆದರೆ ನಂತರ ಯಥಾಪ್ರಕಾರ ಬೆಲೆ ಏರಿಕೆಯಾಗತೊಡಗಿತು. ಅಂದರೆ ಸರ್ಕಾರ ಮನಸ್ಸು ಮಾಡಿದರೆ ಬೆಲೆ ನಿಯಂತ್ರಿಸಲಾಗುವುದಿಲ್ಲ ಎಂದಲ್ಲ. ತುರ್ತುಪರಿಸ್ಥಿತಿ ಒಂದು ಕೆಟ್ಟ ಕನಸು ಎಂದು ಹೇಳಲಾಗುತ್ತದೆ. ಆದರೆ ಸಾಮಾನ್ಯ ಜನರ ಬದುಕಿಗೆ ಅದು ಸಮಾಧಾನಕರವಾದ ಅವಧಿಯಾಗಿತ್ತು ಎಂಬುದನ್ನು ಮರೆಯುವಂತಿಲ್ಲ.

ಬೆಲೆ ಏರಿಕೆಯಾದಾಗ ಸರ್ಕಾರದಲ್ಲಿ, ಕಂಪನಿಗಳಲ್ಲಿ ಕೆಲಸ ಮಾಡುವವರಿಗೆ ಅಲ್ಪಸ್ವಲ್ಪ ವೇತನದಲ್ಲಿ ಏರಿಕೆಯಾಗುತ್ತದೆ ಅಥವಾ ತುಟ್ಟಿ ಭತ್ಯ ಎಂದು ಸ್ವಲ್ಪ ಜೇನನ್ನು ತುಟಿಗೆ ಸವರುವ ಕೆಲಸವಾಗುತ್ತದೆ. ಆದರೆ ಅವರ ಜೀವನಮಟ್ಟ ಸುಧಾರಿಸುವುದಿಲ್ಲ. ಆದರೆ ವೇತನ ಪಡೆಯದ ಗುಂಪು ಈ ಬೆಲೆ ಏರಿಕೆಯಿಂದ ತತ್ತರಿಸಿ ಹೋಗುತ್ತದೆ. ಒಬ್ಬ ಕೂಲಿ ಮಾಡುವವನು ಬೆಲೆ ಏರಿಕೆಯಾಗಿದೆ, ಆದ್ದರಿಂದ ನನಗೆ ಕೊಡುವ ಕೂಲಿಯನ್ನು ಶೇಕಡಾ ಇಪ್ಪತ್ತೈದರಷ್ಟು ಜಾಸ್ತಿ ಮಾಡಿ ಎಂದರೆ ಎಷ್ಟು ಜನ ಒಪ್ಪಿಕೊಳ್ಳುತ್ತಾರೆ? ನೀನಲ್ಲದಿದ್ದರೆ ಇನ್ನೊಬ್ಬ ಅದೇ ಹಳೇ ಕೂಲಿಗೆ ಸಿಗುತ್ತಾನೆ ಎಂದು ಬೈದು ಸಾಗಹಾಕುತ್ತಾರೆ. ಹಾಗಾದರೆ ಕೂಲಿ ಮಾಡುವವನ ಕುಟುಂಬ ಹೇಗೆ ಜೀವನ ಮಾಡಬೇಕು?

ಈ ಬೆಲೆ ಏರಿಕೆಗೆ ಪರೋಕ್ಷವಾಗಿ ಸರ್ಕಾರಗಳೂ ಕಾರಣವಾಗುತ್ತವೆ. ಅವು ಬೆಲೆ ಏರಿಕೆಯನ್ನು ನಿಯಂತ್ರಿಸಬೇಕಾದುದು ತಮ್ಮ ಕರ್ತವ್ಯ ಎಂದೇ ಭಾವಿಸುವುದಿಲ್ಲ. ಹಾಗಾಗಿ ಪ್ರತಿ ವರ್ಷ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಆಯವ್ಯಯ ಮಂಡಿಸುತ್ತವೆ ಎಂದರೆ ಜನರು ಗಾಬರಿಯಿಂದ ಮತ್ತೆ ಯಾವ ವಸ್ತುವಿನ ಮೇಲೆ ಎಷ್ಟು ತೆರಿಗೆ ಹೆಚ್ಚು ಮಾಡುತ್ತಾರೋ? ಎಂದು ಅತಂಕ ಪಡುವಂತಾಗುತ್ತದೆ. ಸರ್ಕಾರದ ಸಿದ್ಧ ಸೂತ್ರ ಎಂದರೆ ತೆರಿಗೆ ಏರಿಸುವುದೇ ಆಗಿದೆ. ಅದಕ್ಕೆ ಸರ್ಕಾರ ಕೊಡುವ ಕಾರಣ ಇತರೆ ವಸ್ತುಗಳ ಬೆಲೆ ಏರಿಕೆ ಯಾಗುತ್ತಿರುವುದರಿಂದ ಸರ್ಕಾರ ನಡೆಸಲು ಇದು ಅನಿವಾರ್ಯ ಎಂದು. ಹಾಗಿದ್ದರೆ ಇತರೆ ವಸ್ತುಗಳ ಬೆಲೆಯನ್ನು ಸರ್ಕಾರ ಏಕೆ ತಡೆಯುವುದಿಲ್ಲ? ಒಬ್ಬ ವ್ಯಾಪಾರಿ ತನಗೆ ಬೆಲೆ ಏರಿಕೆ ಮಾಡುವುದು ಅನಿವಾರ್ಯ, ಏಕೆಂದರೆ ಇತರೆ ವಸ್ತುಗಳ ಬೆಲೆ ಜಾಸ್ತಿಯಾಗಿದೆ ಎಂದು ಹೇಳುತ್ತಾನೆ. ಈ ರೀತಿ ಎಲ್ಲರೂ ಬೆಲೆ ಏರಿಕೆಗೆ ಮತ್ತೊಬ್ಬರು ಕಾರಣ ಎಂದೇ ಹೇಳಿ, ತಾವು ಪ್ರಾಮಾಣಿಕರು, ಇಲ್ಲದಿದ್ದರೆ ಬೆಲೆ ಏರಿಸುತ್ತಿರಲಿಲ್ಲ ಎಂದೇ ತೋರ್ಪಡಿಸಿಕೊಳ್ಳುತ್ತಾರೆ. ಈ ಬೆಲೆ ಏರಿಕೆ ಈ ಹಿಂದೆ ವಾರ್ಷಿಕ ಸಂಪ್ರದಾಯವಾಗಿದ್ದುದು ಈಗ ದೈನಂದಿನ ಸಂಪ್ರದಾಯವಾಗಿಬಿಟ್ಟಿದೆ. ಬೆಲೆ ಏರುತ್ತದೆ ಎಂದು ಗೊತ್ತಾದರೂ ಸಾಮಾನ್ಯ ಜನ ಎಷ್ಟು ಪದಾರ್ಥಗಳನ್ನು ಹೆಚ್ಚು ಹೆಚ್ಚಾಗಿ ಕೊಂಡು ಸಂಗ್ರಹಿಸಿ ಇಟ್ಟುಕೊಳ್ಳಲು ಸಾಧ್ಯ? ಹಾಗೆ ಸಂಗ್ರಹಿಸಿಡಲು ಖರ್ಚಾಗುವ ಹಣವನ್ನು ಎಲ್ಲಿ ಹೊಂದಿಸಲಾಗುತ್ತದೆ? ಈ ಕಾರಣದಿಂದಾಗಿ ಮಧ್ಯಮ ವರ್ಗ ಹಾಗೂ ಬಡ ವರ್ಗ ನಿತ್ಯ ನಿಟ್ಟುಸಿರು ಬಿಡುವಂತಾಗುತ್ತಿದೆ. ಬೆಲೆ ಏರಿಕೆಯಾದಾಗೆಲ್ಲಾ ಸರ್ಕಾರ ಏನೂ ಕ್ರಮ ಕೈಗೊಳ್ಳುತ್ತಿಲ್ಲ ಎಂದೇ ಆಪಾದಿಸಲಾಗುತ್ತದೆ. ಆದರೆ ಸರ್ಕಾರಗಳಿಗೆ ಈ ಕೂಗು ಕೇಳುವುದೇ ಇಲ್ಲ.

ಹಾಗಾದರೆ ಸರ್ಕಾರಗಳು ಬೆಲೆ ಏರಿಕೆ ನಿಯಂತ್ರಿಸಲು ಸಾಧ್ಯವೇ ಇಲ್ಲವೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಸಾಧ್ಯತೆ ಇದೆ. ಆದರೆ ಮನಸ್ಸು ಎಂಬುದಿಲ್ಲ ಎಂದು ಹೇಳಬೇಕಾಗುತ್ತದೆ. ನಮ್ಮಲ್ಲಿ 1975 ರಲ್ಲಿ ದೇಶದ ಮೇಲೆ ತುರ್ತುಪರಿಸ್ಥಿತಿ ಹೇರಿದಾಗ ಎಲ್ಲವೂ ಸರ್ಕಾರದ ನಿಯಂತ್ರಣದಲ್ಲಿತ್ತು. ಬೆಲೆಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸಬೇಕಾಗಿತ್ತು, ತಮ್ಮಲ್ಲಿರುವ ಸ್ಟಾಕ್‌ನ್ನು ಬಹಿರಂಗಪಡಿಸಬೇಕಾಗಿತ್ತು. ಸರ್ಕಾರದ ಗಮನಕ್ಕೆ ತರದೆ ಬೆಲೆ ಏರಿಕೆ ಮಾಡಿದರೆ ಶಿಕ್ಷಿಸಬಹುದಾಗಿತ್ತು. ಆಗ ಎಲ್ಲಾ ವ್ಯಾಪಾರಿಗಳು ಹೆದರಿಕೆಯಿಂದಲಾದರೂ ಬೆಲೆಯನ್ನು ಹೆಚ್ಚಿಸಲು ಹೋಗುತ್ತಿರಲಿಲ್ಲ. ಒಂದು ರೀತಿ ಬೆಲೆ ಏರಿಕೆ ನಿಯಂತ್ರಣದಲ್ಲಿತ್ತು. ಆದರೆ ನಂತರ ಯಥಾಪ್ರಕಾರ ಬೆಲೆ ಏರಿಕೆಯಾಗತೊಡಗಿತು. ಅಂದರೆ ಸರ್ಕಾರ ಮನಸ್ಸು ಮಾಡಿದರೆ ಬೆಲೆ ನಿಯಂತ್ರಿಸಲಾಗುವುದಿಲ್ಲ ಎಂದಲ್ಲ. ತುರ್ತುಪರಿಸ್ಥಿತಿ ಒಂದು ಕೆಟ್ಟ ಕನಸು ಎಂದು ಹೇಳಲಾಗುತ್ತದೆ. ಆದರೆ ಸಾಮಾನ್ಯ ಜನರ ಬದುಕಿಗೆ ಅದು ಸಮಾಧಾನಕರವಾದ ಅವಧಿಯಾಗಿತ್ತು ಎಂಬುದನ್ನು ಮರೆಯುವಂತಿಲ್ಲ. (ತುರ್ತು ಪರಿಸ್ಥಿತಿ ಹೇರಿದುದು ತಪ್ಪು ಎಂಬುದು ಸಾಮಾನ್ಯವಾದ ಅಭಿಪ್ರಾಯವಿದೆ.) ಸರ್ಕಾರ ಯಾವಾಗಲೂ ಅಂತಹ ಶಿಸ್ತನ್ನು ಬೆಲೆ ನಿಯಂತ್ರಣದಲ್ಲಿ ತರಬೇಕೆಂದು ಜನರು ಬಯಸುತ್ತಾರೆ.


ಈಗ ಹೇಗಾಗಿದೆ ಎಂದರೆ ಸರ್ಕಾರದ್ದೇ ಯೋಜನೆಗಳು ಸಮಯಕ್ಕೆ ಸರಿಯಾಗಿ ಮುಗಿಯದಿದ್ದರೆ, ಅದಕ್ಕೆ ಪೂರಕ ಬಜೆಟ್ ಎಂದು ಮತ್ತಷ್ಟು ಹಣವನ್ನು ಸರ್ಕಾರವೇ ಬಿಡುಗಡೆ ಮಾಡುತ್ತದೆ. ಅಂದರೆ ಬೆಲೆ ಏರಿಕೆ ತನಗೆ ಸಂಬಂಧಿಸಿದ ವಿಷಯವಲ್ಲ ಎಂದು ಅದು ಭಾವಿಸಿದಂತಿದೆ. ಸರ್ಕಾರಕ್ಕೆ ಎಲ್ಲ ಅಧಿಕಾರವೂ ಇದೆ. ಅದನ್ನು ಚಲಾವಣೆ ಮಾಡುವಲ್ಲಿ ಅವುಗಳು ವಿಫಲವಾಗುತ್ತಿದೆ ಎಂದು ಕಂಡುಬರುತ್ತದೆ.

ಸರ್ಕಾರಗಳು ಅದೂ–ಇದೂ ಎಂದು ಜನರ ಕಲ್ಯಾಣಕ್ಕೆ ಎಂದು ಹೊಸಹೊಸ ಯೋಜನೆ ಮಾಡುವ ಬದಲು, ಸಾಮಾನ್ಯ ಜನರೂ ನೆಮ್ಮದಿಯಾಗಿ ಜೀವನ ಮಾಡುವಂತೆ ಮಾಡಬೇಕಾದುದನ್ನು ಕರ್ತವ್ಯ ಎಂದು ಭಾವಿಸಬೇಕು. ತೆರಿಗೆ ನೀಡುತ್ತಾರೆ ಎಂದು ಜನರ ಮೇಲೆ ತೆರಿಗೆಯ ಹೊರೆ ಹಾಕುತ್ತಲೇ ಹೋಗಬಾರದು. ಒಬ್ಬ ವ್ಯಕ್ತಿ ಪ್ರಾಮಾಣಿಕವಾಗಿ ತನ್ನ ಆದಾಯ ಇಷ್ಟು ಎಂದು ಘೋಷಿಸಿಕೊಂಡು ಅದಕ್ಕೆ ಸರ್ಕಾರ ನೀಡುವ ತೆರಿಗೆ ಪಾವತಿಸಿದ ನಂತರ ಅವನ ಮೇಲೆ ಇತರೆ ತೆರಿಗೆಗಳ ಭಾರ ಬೀಳದಂತೆ ನೋಡಿಕೊಳ್ಳಬೇಕು. ಪ್ರಾಮಾಣಿಕವಾಗಿ ತೆರಿಗೆ ಕಟ್ಟುವವನಿಗೆ ಇದರಿಂದ ಪ್ರೋತ್ಸಾಹ ದೊರಕಿದಂತಾಗುತ್ತದೆ. ಅಪ್ರಾಮಾಣಿಕ ಹಾಗೂ ಪ್ರಾಮಾಣಿಕನನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಗುವುದಾದರೆ, ಪ್ರಾಮಾಣಿಕನನ್ನು ನೀನೂ ಅಪ್ರಾಮಾಣಿಕನಾಗು ಎಂದು ಹೇಳಿದಂತೆ ಭಾಸವಾಗುತ್ತದೆ. ಬೆಲೆ ಏರಿಕೆ ಬಗ್ಗೆ ಸರ್ಕಾರಗಳು ಗಮನಹರಿಸಬೇಕು. ಬೆಲೆ ಏರಿಕೆ ವಿಶ್ವದ ಜಾಯಮಾನ ಎಂದು ಹೇಳಿ ತಮ್ಮ ಜವಾಬ್ದಾರಿ ತಪ್ಪಿಸಿಕೊಳ್ಳಬಾರದು.

ಎಲ್ಲದರ ಬೆಲೆ ಹೆಚ್ಚಾಯಿತು ಎಂದಾದಾಗ ಕೇವಲ ಕರೆನ್ಸಿ ಮುದ್ರಿಸಿ ಹಂಚಲಾಗುವುದಿಲ್ಲ, ಅದು ಹಣದುಬ್ಬರಕ್ಕೆ ಕಾರಣವಾಗುತ್ತದೆ. ಸರ್ಕಾರ ಒಂದು ವಸ್ತುವಿನ ಉತ್ಪಾದನೆಗೆ ಆಗುವ ಎಲ್ಲಾ ವೆಚ್ಚಗಳನ್ನೂ ಪರಿಗಣಿಸಿ ಅದಕ್ಕೆ ಇಂತಿಷ್ಟು ಮೌಲ್ಯ ಎಂದು ನಿರ್ಧರಿಸುವುದು ಸರಿಯಾದ ಕ್ರಮವಾಗುತ್ತದೆ. ಹಾಗೆ ಮಾಡದಿರುವುದರಿಂದ ಹತ್ತು ರೂಪಾಯಿ ಮೌಲ್ಯದ ವಸ್ತುವಿಗೆ ನೂರು ರೂಪಾಯಿ ಎಂದು ಸಂಬಂಧಿಸಿದ ಕಂಪನಿ ದರ ನಿಗಧಿಪಡಿಸಿ ಹಣ ದೋಚುತ್ತದೆ. ಇದು ಸಾರ್ವಜನಿಕರ ಗಮನಕ್ಕೇ ಬರುವುದಿಲ್ಲ. (ಉದಾಹರಣೆಗೆ ಔಷಧಗಳು). ಸರ್ಕಾರ ಜನಪರವಾದ ಯೋಚನೆ ಮಾಡುವುದು ಸೂಕ್ತ.

ಕನ್ನಡದಲ್ಲಿ ಕಾನೂನು ನಿಘಂಟು, ತೀರ್ಪುಗಳ ತರ್ಜುಮೆಗೆ ಸಿಎಂ ಸೂಚನೆ

ಬೆಂಗಳೂರು, ಜ.22– ನ್ಯಾಯಾಂಗ ಹಾಗೂ ಕಾನೂನಿಗೆ ಸಂಬಂಧಿಸಿದ ಎಲ್ಲ ಪಾರಿಭಾಷಿಕ ಪದಗಳನ್ನು ಒಳಗೊಂಡ ಕನ್ನಡ ನಿಘಂಟು ರೂಪಿಸುವುದು ಹಾಗೂ ನ್ಯಾಯಾಲಯಗಳ ತೀರ್ಪುಗಳನ್ನು ಕನ್ನಡಕ್ಕೆ ತರ್ಜುಮೆ ಮಾಡುವ ಕೆಲಸ ಆರಂಭಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೂಚಿಸಿದರು.



ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಕನ್ನಡದಲ್ಲಿ ತೀರ್ಪು ನೀಡಿದ ನ್ಯಾಯಾಧೀಶರು, ವಾದ ಮಂಡಿಸಿದ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳು ಹಾಗೂ ವಕೀಲರಿಗೆ 'ನ್ಯಾಯಾಂಗದಲ್ಲಿ ಕನ್ನಡ ಪ್ರಶಸ್ತಿ' ಪ್ರದಾನ ಮಾಡಿ ಅವರು ಮಾತನಾಡಿದರು.

ನ್ಯಾಯಾಂಗದಲ್ಲಿ ಕನ್ನಡ ಬಳಕೆಗೆ ಹಲವು ಮಿತಿಗಳಿವೆ. ಅವುಗಳನ್ನು ಮೀರಿ ಕನ್ನಡ ಬಳಸಬೇಕಾದರೆ ಕನ್ನಡದ ನಿಘಂಟು ಅಗತ್ಯ. ನ್ಯಾಯಾಲಯಗಳ ತೀರ್ಪು ಮತ್ತು ಆದೇಶಗಳನ್ನು ಜನರು ಅರ್ಥ ಮಾಡಿಕೊಳ್ಳಬೇಕಾದರೆ ಅವುಗಳನ್ನು ಆನ್‌ಲೈನ್‌ನಲ್ಲಿ ಪ್ರಕಟಿಸಬೇಕು. ಈ ಕೆಲಸವನ್ನು ಪ್ರಾಧಿಕಾರ ಮಾಡಬೇಕು ಎಂದರು.


ಪ್ರಕರಣವೊಂದರಲ್ಲಿ ನ್ಯಾಯಾಲಯದ ತೀರ್ಪು ಬರುವುದಷ್ಟೇ ಮುಖ್ಯವಲ್ಲ. ಆ ತೀರ್ಪಿನ ಸರಿಯಾದ ವ್ಯಾಖ್ಯಾನ ಮತ್ತು ಅನುಷ್ಠಾನ ಅಗತ್ಯ. ಕೆಲವೊಮ್ಮೆ ಅಧಿಕಾರಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ನ್ಯಾಯಾಲಯದ ತೀರ್ಪನ್ನು ವ್ಯಾಖ್ಯಾನ ಮಾಡುತ್ತಾರೆ. ಇಂತಹ ಅಪಾಯ ತಡೆಯಬೇಕಾದರೆ ಆಡಳಿತ ನಡೆಸುವವರಿಗೆ ಕಾನೂನಿನ ಜ್ಞಾನ ಇರಬೇಕಾಗುತ್ತದೆ ಎಂದು ಹೇಳಿದರು.

ಹೈಕೋರ್ಟ್ ನ್ಯಾಯಮೂರ್ತಿ ಸಿ.ಜಿ. ನರೇಂದರ್ ಮಾತನಾಡಿ, ನ್ಯಾಯಾಂಗದಲ್ಲಿ ಕನ್ನಡದ ಬಳಕೆಯಿಂದ ಜನಸಾಮಾನ್ಯರಲ್ಲಿ ಕಾನೂನಿನ ಅರಿವು ಮೂಡುತ್ತದೆ. ಕಾನೂನು ಉಲ್ಲಂಘನೆ ಮತ್ತು ಅಪರಾಧಗಳು ತಗ್ಗುತ್ತವೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಡಾ.ಎನ್. ಮಂಜುಳಾ, ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ. ವೆಂಕಟೇಶ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ ಉಪಸ್ಥಿತರಿದ್ದರು.

ಎಂಜಿನಿಯರಿಂಗ್, ಮೆಡಿಕಲ್ ಪಠ್ಯವನ್ನು ಮಾತೃಭಾಷೆಯಲ್ಲಿ ಕಲಿಸಿ

ನವದೆಹಲಿ, ಜ.22– ಭಾರತವು ಹಲವು ಭಾಷೆಗಳನ್ನು ಹೊಂದಿದೆ, ಅದು ನಮ್ಮ ಸಾಂಸ್ಕೃತಿಕ ಕಂಪನ್ನು ಹೆಚ್ಚಿಸುತ್ತದೆ. ಆಯಾ ಸ್ಥಳೀಯ ಮಾತೃ ಭಾಷೆಯಲ್ಲಿ ಎಂಜಿನಿಯರಿಂಗ್ ಮತ್ತು ವೈದ್ಯಕೀಯದಂತಹ ಉನ್ನತ ಶಿಕ್ಷಣ ವಿಷಯಗಳನ್ನು ಅಧ್ಯಯನ ಮಾಡುವ ಆಯ್ಕೆಯನ್ನು ನೀಡುವುದು ಸೇರಿದಂತೆ ಭಾರತೀಯ ಭಾಷೆಗಳನ್ನು ಪ್ರೋತ್ಸಾಹಿಸಲು ಕೇಂದ್ರ ಸರ್ಕಾರವು ಹಲವು ಪ್ರಯತ್ನಗಳನ್ನು ಮಾಡುತ್ತಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.



ಈ ಬಗ್ಗೆ ಟ್ವೀಟ್ ಮಾಡಿರುವ ಪ್ರಧಾನಿಗಳು, ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮಾತುಗಳ ವಿಡಿಯೊವನ್ನು ಶೇರ್ ಮಾಡಿದ್ದಾರೆ. ಇತ್ತೀಚೆಗೆ ನಡೆದ ಸಮಾರಂಭವೊಂದರಲ್ಲಿ, ಗೌರವಾನ್ವಿತ ಸಿಜೆಐ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರು ಪ್ರಾದೇಶಿಕ ಭಾಷೆಗಳಲ್ಲಿ ಸುಪ್ರೀಂಕೋರ್ಟ್ ತೀರ್ಪುಗಳು ಲಭ್ಯವಾಗುವಂತೆ ಕೆಲಸ ಮಾಡುವ ಅಗತ್ಯತೆಯ ಕುರಿತು ಮಾತನಾಡಿದ್ದಾರೆ. ಅದಕ್ಕೆ ತಂತ್ರಜ್ಞಾನವನ್ನೂ ಬಳಸಿಕೊಳ್ಳುವಂತೆ ಸಲಹೆ ನೀಡಿದ್ದಾರೆ. ಇದು ಶ್ಲಾಘನೀಯ ವಿಷಯವಾಗಿದೆ. ಇದು ಅನೇಕ ಮಂದಿಗೆ ವಿಶೇಷವಾಗಿ ಯುವಕರಿಗೆ ಸಹಾಯ ಮಾಡುತ್ತದೆ ಎಂದಿದ್ದಾರೆ.

ಪ್ರತಿ ಭಾರತೀಯ ಭಾಷೆಯಲ್ಲಿ ಸುಪ್ರೀಂಕೋರ್ಟ್ ತೀರ್ಪುಗಳ ಅನುವಾದಿತ ಪ್ರತಿಗಳನ್ನು ಒದಗಿಸುವುದು ನಮ್ಮ ಮುಂದಿನ ಹಂತದ ಧ್ಯೇಯವಾಗಿದೆ. ನಮ್ಮ ನಾಗರಿಕರಿಗೆ ಅರ್ಥವಾಗುವ ಭಾಷೆಯಲ್ಲಿ ನಾವು ತಲುಪದ ಹೊರತು, ನಾವು ಮಾಡುತ್ತಿರುವ ಕೆಲಸ ಶೇ.99 ಮಂದಿಗೆ ತಲುಪುವುದಿಲ್ಲ ಎಂದು ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಹೇಳಿದ್ದಾರೆ.

ನಿಖಿಲ್ ಕುಮಾರಸ್ವಾಮಿ ಹುಟ್ಟುಹಬ್ಬದ ಅಂಗವಾಗಿ ಹಣ್ಣು, ಬ್ರೆಡ್ ವಿತರಣೆ



ಚಿತ್ರನಟ, ಯುವ ರಾಜಕಾರಣಿ ನಿಖಿಲ್ ಕುಮಾರಸ್ವಾಮಿ ಅವರ ಹುಟ್ಟುಹಬ್ಬದ ಅಂಗವಾಗಿ ಮೈಸೂರಿನ ಸಾಲುಂಡಿಯ ನವಚೇತನ ಬುದ್ಧಿಮಾಂದ್ಯ ಮತ್ತು ಅಂಗವಿಕಲ ಶಾಲೆಯಲ್ಲಿ ಭಾನುವಾರ ಮಕ್ಕಳಿಗೆ ಸೇಬು ಮತ್ತು ಉಪಾಹಾರ, ಬ್ರೆಡ್, ನೋಟ್‌ಬುಕ್ ವಿತರಿಸಲಾಯಿತು. ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ ನೇತೃತ್ವದಲ್ಲಿ ಸಂಘದ ಪದಾಧಿಕಾರಿಗಳಾದ ಶ್ರೀನಿವಾಸಗೌಡ, ಧರ್ಮಪಾಲ್‌ಗೌಡ, ಡಾ.ಸಂದೀಪ್, ಡಾ.ನಾಗರಾಜ್ ಮೂರ್ತಿ, ಕೃಷ್ಣ, ಪಡುವಾರಹಳ್ಳಿ ಸುನಿಲ್, ನಾಗರಾಜು, ಅಜಯ್ ಚಂದ್ರಶೇಖರ್ ಎಸ್.ಜೀವನ್ ಇನ್ನಿತರರನ್ನು ಚಿತ್ರದಲ್ಲಿ ಕಾಣಬಹುದು.

ಗಣರಾಜ್ಯೋತ್ಸವ ಪರೇಡ್‌ನಲ್ಲಿ 23 ಸ್ತಬ್ಧ ಚಿತ್ರಗಳ ಪ್ರದರ್ಶನ

ನವದೆಹಲಿ, ಜ.22– ನವದೆಹಲಿಯ ಕರ್ತವ್ಯ ಪಥದಲ್ಲಿ ಜ.26 ರಂದು ನಡೆಯಲಿರುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ದೇಶದ ವಿಭಿನ್ನ ಸಂಸ್ಕೃತಿ, ಆಚಾರ, ವಿಚಾರ, ಕಲೆ, ಸಾಹಿತ್ಯ ಬಿಂಬಿಸುವ 23 ಸ್ತಬ್ಧ ಚಿತ್ರಗಳ ಪ್ರದರ್ಶನ ಇರಲಿದೆ.

17 ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ವಿವಿಧ ಸಚಿವಾಲಯಗಳು, ಇಲಾಖೆಗಳ ಒಟ್ಟಾರೇ 23 ಸ್ತಬ್ಧ ಚಿತ್ರಗಳು ಪ್ರದರ್ಶನದಲ್ಲಿ ಪಾಲ್ಗೊಳ್ಳಲಿವೆ ಎಂದು ರಕ್ಷಣಾ ಸಚಿವಾಲಯ ಭಾನುವಾರ ತಿಳಿಸಿದೆ.

ಕರ್ನಾಟಕ, ತಮಿಳುನಾಡು, ಆಂಧ್ರ ಪ್ರದೇಶ, ಕೇರಳ, ಮಹಾರಾಷ್ಟ್ರ, ಉತ್ತರಾಖಂಡ್, ಜಾರ್ಖಂಡ್, ಉತ್ತರ ಪ್ರದೇಶ, ಹರಿಯಾಣ, ಗುಜರಾತ್, ಅಸ್ಸಾಂ, ಅರುಣಾಚಲ ಪ್ರದೇಶ, ತ್ರಿಪುರಾ, ಪಶ್ಚಿಮ ಬಂಗಾಳ ರಾಜ್ಯದಿಂದ ಮತ್ತು ಜಮ್ಮು–ಕಾಶ್ಮೀರ, ಲಡಾಖ್, ದಾದರ್ ನಗರ್ ಹವೇಲಿ ಮತ್ತು ದಾಮನ್, ಡಿಯೂ ನಿಂದ ಒಟ್ಟಾರೇ 23 ಸ್ತಬ್ಧ ಚಿತ್ರಗಳು ಸಾಗುವ ಮೂಲಕ ವಿವಿಧತೆಯಲ್ಲಿ ಏಕತೆಯನ್ನು ಪ್ರತಿಬಿಂಬಿಸಲಿವೆ. ಕರ್ನಾಟಕದ ನಾರಿಶಕ್ತಿ ಸ್ತಬ್ಧ ಚಿತ್ರ ಈ ಬಾರಿಯ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಸಾಗುವ ಮೂಲಕ ರಾಜ್ಯದಲ್ಲಿನ ನಾರಿಶಕ್ತಿಯನ್ನು ದೇಶಕ್ಕೆ ಪರಿಚಯ ಮಾಡಿಕೊಡಲಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಪುರುಷರ ಹಾಕಿ ವಿಶ್ವಕಪ್: ಭಾರತದ ಕನಸು ಭಗ್ನ, ನ್ಯೂಜಿಲೆಂಡ್ ವಿರುದ್ಧ ಸೋತು ಟೂರ್ನಿಯಿಂದ ಔಟ್



ಭುವನೇಶ್ವರ: ಒಡಿಶಾದ ಭುವನೇಶ್ವರದಲ್ಲಿ ಭಾನುವಾರ ನಡೆದ ಪುರುಷರ ಹಾಕಿ ವಿಶ್ವಕಪ್ ಪಂದ್ಯಾವಳಿ ಕ್ರಾಸ್ ಓವರ್ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ ಸೋತ ಭಾರತೀಯ ತಂಡ ಟೂರ್ನಿಯಿಂದ ಹೊರ ಬಿದ್ದಿದೆ. ಇದರೊಂದಿಗೆ 48 ವರ್ಷಗಳ ನಂತರ ವಿಶ್ವಕಪ್ ಗೆಲ್ಲುವ ಕನಸು ಭಗ್ನಗೊಂಡಿತು.

ಕಳಿಂಗ ಕ್ರೀಡಾಂಗಣದಲ್ಲಿ ಕಿಕ್ಕಿರಿದು ತುಂಬಿದ್ದ ಪ್ರೇಕ್ಷಕರ ಅಬ್ಬರದ ಬೆಂಬಲದ ಹೊರತಾಗಿಯೂ, ಉಭಯ ತಂಡಗಳು ತಲಾ ಮೂರು ಗೋಲು ಗಳಿಸಿ ಸಮಬಲ ಸಾಧಿಸಿದ್ದವು. ಪೆನಾಲ್ಟಿ ಶೂಟೌಟ್ ನಲ್ಲಿ 4–5 ಅಂತರದಲ್ಲಿ ಭಾರತ ಪರಾಭವಗೊಂಡಿತು. ನಾಯಕ ಹರ್ಮನ್‌ಪ್ರೀತ್ ಸಿಂಗ್ ಭಾರತವನ್ನು ಗೆಲುವಿನತ್ತ ಕೊಂಡೊಯ್ಯುವ ಸುವರ್ಣ ಅವಕಾಶವನ್ನು ಹೊಂದಿದ್ದರು ಆದರೆ ಅವರು ಗುರಿ ತಲುಪವಲ್ಲಿ ವಿಫಲರಾದರು. ಮಂಗಳವಾರ ನಡೆಯಲಿರುವ ಕ್ವಾರ್ಟರ್ ಫೈನಲ್‌ನಲ್ಲಿ ಬಿ ಪೂಲ್‌ನಲ್ಲಿ ಅಗ್ರಸ್ಥಾನದಲ್ಲಿರುವ ಹಾಲಿ ಚಾಂಪಿಯನ್ ಬೆಲ್ಜಿಯಂ ತಂಡವನ್ನು ನ್ಯೂಜಿಲೆಂಡ್ ಎದುರಿಸಲಿದೆ.



ಮೈಸೂರಿನ ಶ್ರೀ ಶಾರದಾ ಪ್ರತಿಷ್ಠಾನ ಟ್ರಸ್ಟ್ ವತಿಯಿಂದ ವಿದ್ವಾನ್ ಮೈಸೂರು ಸುಬ್ರಮಣ್ಯ ಕುಮಾರ್ ನೇತೃತ್ವದಲ್ಲಿ ಜಯನಗರ 16ನೇ ಕ್ರಾಸ್‌ನ ಶ್ರೀ ರಾಮ ಮಂದಿರದಲ್ಲಿ ನಡೆದ ಸಂಕ್ರಾಂತಿ ಸಂಭ್ರಮ ಕಾರ್ಯಕ್ರಮದಲ್ಲಿ ಶ್ರೀರಂಗಪಟ್ಟಣದ ವಿದ್ವಾನ್ ಎಂ.ಆರ್.ರಾಜೇಶ್ ಹಾಗೂ ಎಂ.ಆರ್.ಕೃಷ್ಣ ದ್ವಂದ್ವ ಕೊಳಲು ವಾದನ ಪ್ರಸ್ತುತಪಡಿಸಿದರು. ವಿದ್ವಾನ್ ಎಸ್.ವಿದ್ಯಾದರ್ ಪಿಟೀಲು, ಸಿ.ಎನ್.ಕೇಶವದತ್ತ ಮೃದಂಗ ಹಾಗೂ ವಿದ್ವಾನ್ ಮೈಸೂರು ಸುಬ್ರಮಣ್ಯ ಕುಮಾರ್ ಘಟ ವಾದನದಲ್ಲಿ ಸಹಕಾರ ನೀಡಿದರು.



ಮೈಸೂರಿನ ಅಗ್ರಹಾರ ವಾರ್ಡ್ ನಂ.51ರಲ್ಲಿ ಬಿಜೆಪಿ ವಿಜಯ ಸಂಕಲ್ಪ ಅಭಿಯಾನಕ್ಕೆ ವೈದ್ಯ ರಾಜೀವ್ ಚಾಲನೆ ನೀಡಿದರು. ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್, ರಾಜ್ಯ ಬ್ರಾಹ್ಮಣ ಪ್ರಾಧಿಕಾರದ ಸದಸ್ಯ ಎಂ.ಆರ್.ಬಾಲಕೃಷ್ಣ, ವಾರ್ಡ್ ಅಧ್ಯಕ್ಷ ಮಂಜುನಾಥ್, ಕಾರ್ಯದರ್ಶಿ ಚಂದ್ರು, ಮುಖಂಡರಾದ ಶಿವಪ್ರೇರಣ, ಜ್ಯೋತಿ ರವಿಶಂಕರ್, ವಸಂತ ಕುಮಾರಯ್ಯ, ಚಂದ್ರಪ್ರಕಾಶ್, ಮಹದೇವಸ್ವಾಮಿ ಉಪಸ್ಥಿತರಿದ್ದರು.

ಬಿಜೆಪಿ ಹಿಂದೂಗಳ ಪರವಾಗಿಲ್ಲ; ಹಿಂದುತ್ವದ ಪರವಾಗಿದೆ

ಉಡುಪಿ, ಜ.22– ಬಿಜೆಪಿಯ ದುರುದ್ದೇಶಪೂರಿತ ಹಿಂದುತ್ವಕ್ಕೆ ಕರಾವಳಿ ಯುವಕರು ಬಲಿಯಾಗುತ್ತಿರುವುದು ನೋವಿನ ಸಂಗತಿ. ಇನ್ನಾದರೂ ಬಿಜೆಪಿ ಷಡ್ಯಂತ್ರದ ಬಗ್ಗೆ ಜನರು ಎಚ್ಚೆತ್ತುಕೊಳ್ಳಬೇಕು ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.



ನಗರದ ಕ್ರಿಶ್ಚಿಯನ್ ಹೈಸ್ಕೂಲ್ ಮೈದಾನದಲ್ಲಿ ಭಾನುವಾರ ನಡೆದ ಕಾಂಗ್ರೆಸ್ ಪ್ರಜಾಧ್ವನಿ ಸಮಾವೇಶ ಉದ್ಘಾಟಿಸಿ ಮಾತನಾಡಿ, ಆರ್‌ಎಸ್‌ಎಸ್‌ನಲ್ಲಿ ತರಬೇತಿ ಪಡೆಯುವ ಬಿಜೆಪಿ ನಾಯಕರು ಹಿಂದುತ್ವದ ಹೆಸರಲ್ಲಿ ಜನರ ದಾರಿ ತಪ್ಪಿಸುತ್ತಿದ್ದಾರೆ. ಬಿಜೆಪಿ ನಿಜವಾಗಿಯೂ ಹಿಂದೂಗಳ ಪರವಾಗಿಲ್ಲ; ಹಿಂದುತ್ವದ ಪರವಾಗಿದೆ ಎಂದು ಟೀಕಿಸಿದರು. ಮನುಷ್ಯತ್ವವನ್ನು ವಿರೋಧಿಸುವುದೇ ಹಿಂದುತ್ವ ಕರಾವಳಿಯಲ್ಲಿ ಹಿಂದುತ್ವಕ್ಕಾಗಿ ಕೊಲೆಯಾದವರು, ಕೊಲೆ ಮಾಡಿ ಜೈಲಿಗೆ ಹೋದವರೆಲ್ಲ ಹಿಂದುಳಿದ ಜಾತಿಗೆ ಸೇರಿದವರು. ಆರ್‌ಎಸ್‌ಎಸ್ ಮುಖಂಡರ ಮಕ್ಕಳಾಗಲಿ, ಶಾಸಕರ ಮಕ್ಕಳಾಗಲಿ ಹಿಂದುತ್ವಕ್ಕಾಗಿ ಕೊಲೆಯಾದ ನಿದರ್ಶನ ಕರಾವಳಿಯಲ್ಲಿ ಸಿಗುವುದಿಲ್ಲ ಎಂದು ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಹಿಂದುತ್ವ ಹಾಗೂ ಮನುವಾದದ ವಿರುದ್ಧವಾಗಿದೆಯೇ ಹೊರತು. ಹಿಂದೂಗಳ, ಹಿಂದೂ ಧರ್ಮದ ವಿರುದ್ಧವಾಗಿಲ್ಲ. ಬಿಜೆಪಿಯ ಹಿಂದುತ್ವಕ್ಕೆ ಮರುಳಾಗಿ ಯುವ ಜನತೆ ಬಲಿಯಾಗಬಾರದು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪರೇಶ್ ಮೇಸ್ತ ಸಾವಿನ ಪ್ರಕರಣವನ್ನು ಕೊಲೆ ಎಂದು ಬಿಂಬಿಸಿ, ಒಂದು ಧರ್ಮದ ತಲೆಗೆ ಕಟ್ಟಿ ಬಿಜೆಪಿ ಅಪಪ್ರಚಾರ ಮಾಡಿತು. ತನಿಖೆ ನಡೆಸಿದ ಸಿಬಿಐ ಪರೇಶ್ ಮೇಸ್ತನದ್ದು ಸಹಜ ಸಾವು ಎಂದು ವರದಿ ನೀಡಿದೆ ಎಂದರು. ಮನುವಾದಿಗಳು ಒಂದು ಧರ್ಮ, ಒಂದು ದೇಶ, ಒಂದು ಭಾಷೆಯನ್ನು ಪ್ರತಿಪಾದಿಸುತ್ತಾರೆ. ಹಲವು ಜಾತಿ, ಧರ್ಮ, ಭಾಷೆಗಳನ್ನೊಳಗೊಂಡಿರುವ ಜಾತ್ಯತೀತ ರಾಷ್ಟ್ರದಲ್ಲಿ ಎಲ್ಲರೂ ಒಟ್ಟಾಗಿ ಸಾಗಬೇಕಾಗಿದೆ. ಅಂಬೇಡ್ಕರ್ ಸಂವಿಧಾನದಲ್ಲಿ ಪ್ರತಿಪಾದಿಸಿದ ಸಮಾನತೆಗೆ ಆರ್‌ಎಸ್‌ಎಸ್ ವಿರುದ್ಧವಾಗಿದೆ ಎಂದು ವಾಗ್ದಾಳಿ ನಡೆಸಿದರು.

ನಾರಾಯಣ ಗುರು, ಗಾಂಧೀಜಿ, ಅಂಬೇಡ್ಕರ್, ಕುದ್ಮಲ್ ರಂಗರಾಯರ ತತ್ವಗಳ ಮೇಲೆ ನಂಬಿಕೆ ಇಟ್ಟು ಜೀವಪರವಾಗಿ ಬದುಕೋಣ. ಯಾವ ಧರ್ಮವೂ ಕೊಲ್ಲಲು, ಹಿಂಸೆ ಮಾಡಲು ಪ್ರಚೋದಿಸುವುದಿಲ್ಲ. ಬಿಜೆಪಿ ಮಾತ್ರ ಧರ್ಮದ ಹೆಸರಿನಲ್ಲಿ ದ್ವೇಷ ಹಂಚುತ್ತಿದೆ ಎಂದರು.

ಕಾಂಗ್ರೆಸ್ ಬಡವರಿಗಾಗಿ ಕೃಷಿ ಭಾಗ್ಯ, ಕ್ಷೀರಭಾಗ್ಯ, ಅನ್ನಭಾಗ್ಯ, ಶಾದಿಭಾಗ್ಯ, ಹಸಿರು ಭಾಗ್ಯ, ಶೂ ಭಾಗ್ಯ, ವಿದ್ಯಾಸಿರಿ, ಇಂದಿರಾ ಕ್ಯಾಂಟೀನ್ ಯೋಜನೆ ಜಾರಿಗೆ ತಂದರೆ ಬಿಜೆಪಿ ಲೂಟಿ ಹೊಡೆಯುವುದರಲ್ಲಿ ಮಗ್ನವಾಗಿದೆ. ವರ್ಗಾವಣೆ, ಬಡ್ತಿ, ಗುತ್ತಿಗೆ ಕಾಮಗಾರಿಗಳಲ್ಲಿ ಕಮಿಷನ್ ದಂಧೆಗಿಳಿದಿದೆ. ವಿಧಾನಸೌಧದ ಗೋಡೆಗಳಿಗೆ ಕಿವಿಗೊಟ್ಟರೆ ಲಂಚ ಪಿಸುಗುಡುತ್ತದೆ ಎಂದು ವಾಗ್ದಾಳಿ ನಡೆಸಿದರು.

ಸರ್ಕಾರದ ಬಣ್ಣ ಬಯಲಾಗುವ ಉದ್ದೇಶದಿಂದ ಸ್ಯಾಂಟ್ರೋ ರವಿಯನ್ನು ಹೆಚ್ಚಿನ ವಿಚಾರಣೆಗೆ ಪೊಲೀಸ್ ವಶಕ್ಕೆ ಪಡೆಯದೆ ಜೈಲಿಗೆ ಕಳಿಸಲಾಗಿದೆ ಎಂದು ಆರೋಪಿಸಿದರು.

16 ಮಂದಿ ಆಕಾಂಕ್ಷಿತರು ಒಗ್ಗಟ್ಟಾಗಿದ್ದೇವೆ

ಮಾಜಿ ಸಚಿವ ಎಂ.ಎಸ್.ಆತ್ಮಾನಂದ



ಮಂಡ್ಯ, ಜ.22– ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ಕೆಪಿಸಿಸಿಗೆ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿರುವ 16 ಮಂದಿ ಆಕಾಂಕ್ಷಿತರು ಒಗ್ಗಟ್ಟಾಗಿದ್ದು, ನಮ್ಮಲ್ಲಿ ಯಾರಿಗೆ ಟಿಕೆಟ್ ನೀಡಿದರೂ ಒಮ್ಮತದಿಂದ ಪಕ್ಷದ ಅಭ್ಯರ್ಥಿ ಪರ ಶ್ರಮಿಸಲು ಸಿದ್ಧರಿದ್ದೇವೆ ಎಂದು ಮಾಜಿ ಸಚಿವ ಎಂ.ಎಸ್. ಆತ್ಮಾನಂದ ತಿಳಿಸಿದರು.

ತಾಲೂಕಿನ ಹುಲಿವಾನ ಗ್ರಾಮದಲ್ಲಿ ಭಾನುವಾರ ಕಾಂಗ್ರೆಸ್ ಮುಖಂಡ ಅಮರಾವತಿ ಚಂದ್ರಶೇಖರ್ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಸಮಾವೇಶದಲ್ಲಿ 10ಕ್ಕೂ ಹೆಚ್ಚು ಆಕಾಂಕ್ಷಿತರು ಭಾಗಿಯಾಗಿದ್ದು, ನಾವೆಲ್ಲರೂ ಒಗ್ಗಟ್ಟಾಗಿದ್ದೇವೆ. ಖರ್ಗೆ, ಡಿಕೆಶಿ ಹಾಗೂ ಸಿದ್ದರಾಮಯ್ಯ ಯಾರಿಗೆ ಟಿಕೆಟ್ ನೀಡಿದರೂ ಅವರ ಪರ ಶ್ರಮಿಸಲು ನಾವು ಕಟಿಬದ್ಧ ಎಂದು ಎಲ್ಲಾ ಅಭ್ಯರ್ಥಿಗಳ ಪರ ಘೋಷಿಸಿದರು. ಪಕ್ಷದ ನಾಯಕರ ಸೂಚನೆ ಮೇರೆಗೆ ಕಾರ್ಯಕ್ರಮ ನಡೆಯುತ್ತಿದ್ದು, ಜಿಲ್ಲಾ ನಾಯಕ ಎನ್.ಚಲುವರಾಯಸ್ವಾಮಿ ಕಾರಣಾಂತರಗಳಿಂದ ಗೈರಾಗಿದ್ದಾರೆ. ಆದರೆ ಅವರ ಹಾದಿಯಾಗಿ ಎಲ್ಲಾ ಕೈ ನಾಯಕರ ಬೆಂಬಲ ಈ ಸಭೆಗೆ ಇದೆ. ಈ ಬಾರಿ ಮಂಡ್ಯದಲ್ಲಿ ಅತಿ ಹೆಚ್ಚು ಸೀಟು ಗೆದ್ದು ರಾಜ್ಯದಲ್ಲೂ ಕಾಂಗ್ರೆಸ್ ಅಧಿಕಾರ ಹಿಡಿಯಲಿದೆ ಎಂದು ಭವಿಷ್ಯ ನುಡಿದರು.

ದೇಶದ ಪ್ರಗತಿ ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ. ನೆಹರು, ಇಂದಿರಾ, ರಾಜೀವ್ ಗಾಂಧಿ, ಡಾ.ಮನಮೋಹನ್‌ಸಿಂಗ್ ದೇಶದ ಅಭಿವೃದ್ಧಿಗೆ ಹಲವು ಕೊಡುಗೆ ನೀಡಿದ್ದು, ಪ್ರಾಮಾಣಿಕ ಹಾಗೂ ಪಾರದರ್ಶಕ ಆಡಳಿತಕ್ಕೆ ಕಾಂಗ್ರೆಸ್ ಮನೆ ಮಾತಾಗಿದೆ. ಪ್ರಸ್ತುತ ರಾಜ್ಯದ ಜನತೆಗೆ ಉಚಿತ ವಿದ್ಯುತ್ ಹಾಗೂ ಮನೆ ಯಜಮಾನಿಗೆ ಪ್ರತಿ ತಿಂಗಳು 2 ಸಾವಿರ ಕೊಡುವುದಾಗಿ ಕಾಂಗ್ರೆಸ್ ಘೋಷಿಸಿದ್ದು, ಇದು ಪಕ್ಷ ಜನಪರ ಹೊಂದಿರುವ ಕಾಳಜಿ ಎಂದರು.

ಅಮರಾವತಿ ಚಂದ್ರಶೇಖರ್ ಮಾತನಾಡಿ, ಮಾಜಿ ಸಚಿವ ದಿ.ಅಂಬರೀಶ್ ಕಾಲದಲ್ಲಿದ್ದ ಕಾಂಗ್ರೆಸ್‌ನ ಗತ ವೈಭವ ಮತ್ತೆ ಮರುಕಳಿಸುವಂತೆ ಮಾಡಲು ನಾವೆಲ್ಲರೂ ಸನ್ನದ್ಧರಾಗಿದ್ದೇವೆ. ಚಲುವರಾಯಸ್ವಾಮಿ ನಾಯಕತ್ವದಲ್ಲಿ ಕಾಂಗ್ರೆಸ್ ಅನ್ನು ಬಲಿಷ್ಠವಾಗಿ ಕಟ್ಟಿ, ಜಿಲ್ಲೆಯ 7ಕ್ಷೇತ್ರಗಳಲ್ಲೂ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುತ್ತೇವೆ. ನಮ್ಮಲ್ಲಿ ಯಾವುದೇ ಗೊಂದಲವಿಲ್ಲ. ಎಲ್ಲರೂ ಒಗ್ಗಟ್ಟಾಗಿದ್ದೇವೆ ಎಂದರು.

> ಒಕ್ಕಲಿಗರ ಪ್ರಾಬಲ್ಯವಿರುವ ಮಂಡ್ಯ ಜನತೆ ಹೆಚ್.ಡಿ.ದೇವೇಗೌಡ, ಎಸ್.ಎಂ.ಕೃಷ್ಣ, ಹೆಚ್.ಡಿ.ಕುಮಾರಸ್ವಾಮಿ ಸಿಎಂ ಆಗುವ ವೇಳೆ ಅತಿ ಹೆಚ್ಚು ಸೀಟುಗಳನ್ನು ಗೆಲ್ಲಿಸಿಕೊಟ್ಟಿದ್ದಾರೆ. ಅದೇ ರೀತಿ ಈ ಬಾರಿ ಡಿ.ಕೆ.ಶಿವಕುಮಾರ್‌ಗೂ ಒಂದು ಅವಕಾಶವಿದ್ದು, ಜಿಲ್ಲೆಯ ಜನ ಒಕ್ಕಲಿಗ ಸಮುದಾಯದ ನಾಯಕ ಕೈ ಹಿಡಿಯಿರಿ. ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ನಡುವೆ ಅಧಿಕಾರಕ್ಕಾಗಿ ಹೈಕಮಾಂಡ್ ಮಟ್ಟದಲ್ಲಿ ಹೊಂದಾಣಿಕೆಯಾಗಿದ್ದು, ಇಬ್ಬರಿಗೂ ಅಧಿಕಾರ ಸಿಗಲಿದೆ.
>
> **-ಹೆಚ್.ಬಿ.ರಾಮು, ಮಾಜಿ ಶಾಸಕ.**

ಕಾಂಗ್ರೆಸ್ ಮುಖಂಡ ಕೀಲಾರ ರಾಧಾಕೃಷ್ಣ ಮಾತನಾಡಿ, ಕಾಂಗ್ರೆಸ್ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಪಕ್ಷವಾಗಿದ್ದು, ಪಕ್ಷಕ್ಕೆ ತನ್ನದೇ ಆದ ಘನತೆ ಇದೆ. ಇಂತಹ ಕಾಂಗ್ರೆಸ್ ಪಕ್ಷಕ್ಕೆ ನಾನು ಮರಳಿ ಸೇರ್ಪಡೆಯಾಗಿರುವುದು ಸಂಸತ ತಂದಿದೆ ಎಂದರು. ಇದೇ ವೇಳೆ ಮಂಡ್ಯ ಕ್ಷೇತ್ರದ ಕಾಂಗ್ರೆಸ್ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿರುವ 16 ಮಂದಿ ಪೈಕಿ ಎಂ.ಎಸ್.ಆತ್ಮಾನಂದ, ಹೆಚ್.ಬಿ.ರಾಮು, ಅಮರಾವತಿ ಚಂದ್ರಶೇಖರ್, ಕೀಲಾರ ರಾಧಾಕೃಷ್ಣ, ಎಂ.ಎಸ್. ಚಿದಂಬರ್, ಹಾಲಹಳ್ಳಿ ರಾಮಲಿಂಗಯ್ಯ, ಹೊಸಹಳ್ಳಿ ಶಿವು, ಬಿ.ಸಿ.ಶಿವಾನಂದ್ ಭಾಗಿಯಾಗಿ ಒಗ್ಗಟ್ಟು ಪ್ರದರ್ಶಿಸಿದರು. ಜೊತೆಗೆ ಮತ್ತೋರ್ವ ಟಿಕೆಟ್ ಆಕಾಂಕ್ಷಿ ಸಿದ್ದಾರೂಢ ಸತೀಶ್‌ಗೌಡ ಸಂಬಂಧಿ ಸಾವನ್ನಪ್ಪಿರುವುದರಿಂದ ಬರಲು ಸಾಧ್ಯವಿಲ್ಲ ಎಂದು ಸಂದೇಶ ಪತ್ರ ರವಾನಿಸಿದ್ದರೆ, ಪ್ರಮುಖ ಆಕಾಂಕ್ಷಿ ಗಣಿಗ ರವಿಕುಮಾರ್ ಸೇರಿದಂತೆ ಉಮ್ಮಡಹಳ್ಳಿ ಶಿವಪ್ಪ, ಹನಕೆರೆ ಶಿವರಾಂ, ಅಸಾದುಲ್ಲಾ ಖಾನ್, ಅಂಜನಾ ಶ್ರೀಕಾಂತ್, ಹಾಲಹಳ್ಳಿ ಅಶೋಕ್ ಸೇರಿದಂತೆ ಇನ್ನು ಕೆಲವರು ಗೈರಾಗಿದ್ದರು.

ವೇದಿಕೆಯಲ್ಲಿ ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಸುರೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಪ್ಪಾಜಿ, ಮುಖಂಡರಾದ ಸಿದ್ದರಾಮೇಗೌಡ, ಪಾಪಣ್ಣ, ನಾಗಮಣಿ, ಆನಂದ್, ವಿಜಯ್‌ಕುಮಾರ್, ಶಿವನಂಜು ಇತರರಿದ್ದರು.

ಮುಂಬರುವ ಚುನಾವಣೆಯಲ್ಲಿ ಸ್ಪರ್ಧೆ ಖಚಿತ

ತಾಪಂ ಮಾಜಿ ಸದಸ್ಯ ರಾಜಾಹುಲಿ ದಿನೇಶ್



ಕೆ.ಆರ್.ಪೇಟೆ, ಜ.22– ಮುಂಬರುವ ಚುನಾವಣೆಯಲ್ಲಿ ಕೆ.ಆರ್.ಪೇಟೆಯಿಂದ ಜನತಾದಳ(ಯು) ಅಥವಾ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಲು ನಿರ್ಧರಿಸಿರುವುದಾಗಿ ಸಮಾಜ ಸೇವಕ, ತಾಪಂ ಮಾಜಿ ಸದಸ್ಯ ರಾಜಾಹುಲಿ ದಿನೇಶ್ ತಿಳಿಸಿದರು.

ತಾಲೂಕಿನ ಬಿಲ್ಲೇನಹಳ್ಳಿ ಗ್ರಾಮದ ಗೋರಕ್ಷಕ ಶ್ರೀಗವಿರಂಗನಾಥಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ಚುನಾವಣೆಯಲ್ಲಿ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ ಅವರು, ನಾನು ತಾಪಂ ಸದಸ್ಯನಾಗಿ ಹಲವು ಸಮಾಜಮುಖಿ ಕೆಲಸ ಮಾಡಿಕೊಂಡು ಬರುತ್ತಿದ್ದೇನೆ. ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಿದ್ದೇನೆ. ಮಳೆಯಿಂದ ಸಂಕಷ್ಟಕ್ಕೆ ಸಿಲುಕಿದ್ದ ಕುಟುಂಬಗಳಿಗೆ ಆರ್ಥಿಕ ನೆರವು ನೀಡಿದ್ದೇನೆ. ಹೋಬಳಿಯ ಎಲ್ಲಾ ಶಾಲಾ ಕಾಲೇಜಿನ ಮಕ್ಕಳಿಗೆ ಲೇಖನ ಸಾಮಗ್ರಿ ವಿತರಿಸಿದ್ದೇನೆ. ಭಕ್ತರ ಅನುಕೂಲಕ್ಕಾಗಿ ಗವಿರಂಗನಾಥ ಶ್ರೀ ಕ್ಷೇತ್ರದಲ್ಲಿ 10 ಲಕ್ಷ ವೆಚ್ಚದಲ್ಲಿ ಉದ್ಯಾನವನ ನಿರ್ಮಿಸಿದ್ದೇನೆ. ಅಲ್ಲದೆ ನನ್ನ ತಾಯಿ ಗ್ರಾಪಂ ಸದಸ್ಯರಾಗಿ, ಎಪಿಎಂಸಿ ಅಧ್ಯಕ್ಷರಾಗಿ ಉತ್ತಮ ಕೆಲಸ ಮಾಡಿದ್ದಾರೆ. ಇಂತಹ ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಂಡಿರುವ ನಮ್ಮ ಕುಟುಂಬ ಸದಾ ತಾಲೂಕಿನ ಜನಸೇವೆಗಾಗಿ ಕೆಲಸ ಮಾಡುತ್ತಿದೆ ಎಂದರು.

ನನ್ನ ರಾಜಕೀಯ ಬೆಳವಣಿಗೆ ಸಹಿಸದ ಕೆಲವರು ನನಗೆ ತೊಂದರೆ ನೀಡಿದರು. ಆದರೂ ನಾನು ಜೆಡಿಎಸ್ ಪಕ್ಷಕ್ಕಾಗಿ ಶ್ರಮಿಸಿದ್ದು, ಕೆಲ ಕಾರಣಗಳಿಂದ ಪಕ್ಷ ತೊರೆದು ರಾಜಕೀಯದಿಂದ ದೂರ ಉಳಿದಿದ್ದೆ. ಆದರೆ ತಾಲೂಕಿನ ಹಲವು ಗ್ರಾಮಗಳ ನನ್ನ ಸ್ನೇಹಿತರು, ಬೆಂಬಲಿಗರು, ಅಭಿಮಾನಿಗಳು ನೀವು ಚುನಾವಣೆಗೆ ಸ್ಪರ್ಧಿಸಬೇಕು. ನಮ್ಮ ಬೆಂಬಲ ನಿಮಗೆ ಸದಾ ಇರುತ್ತದೆ ಎಂದು ಒತ್ತಾಯಿಸಿದ್ದರಿಂದ ಇಂದು ಗವಿರಂಗನಾಥ ಸ್ವಾಮಿ ದೇವಾಲಯಕ್ಕೆ ಆಗಮಿಸಿ ಪೂಜೆ ಸಲ್ಲಿಸಿ ಮುಖಂಡರು ಚುನಾವಣೆಯಲ್ಲಿ ಸ್ಪರ್ಧಿಸಲು ತೀರ್ಮಾನಿಸಿರುವುದಾಗಿ ಅವರು ತಿಳಿಸಿದರು.

ಈ ವೇಳೆ ಮುಖಂಡರಾದ ಹರೀಶ್, ಕೃಷ್ಣಣ್ಣ, ದರ್ಶನ್, ಭರತ್, ಅಭಿ, ಪ್ರತಾಪ್, ಸಚಿನ್, ರವಿಯಣ್ಣ, ಸೋಮಶೇಖರ್, ಗಣೇಶ್, ಸಂತೋಷ್, ಸುರೇಶ್, ವಿನೋದ್ ಕುಮಾರ್, ದಿನೇಶ್, ಕಿರಣ್, ವೆಂಕಟೇಶ್, ಸತೀಶ್, ಮನು, ಪ್ರಸನ್ನ, ಸೇರಿದಂತೆ ನೂರಾರು ಅಭಿಮಾನಿಗಳು, ಹಿತೈಷಿಗಳು ಉಪಸ್ಥಿತರಿದ್ದರು.

ನಿಖಿಲ್ ಕುಮಾರಸ್ವಾಮಿ ಹುಟ್ಟುಹಬ್ಬ: ಹಣ್ಣು ಹಂಪಲು ವಿತರಣೆ



ಪಾಂಡವಪುರ, ಜ.22– ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹುಟ್ಟುಹಬ್ಬದ ಅಂಗವಾಗಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ರೋಗಿಗಳಿಗೆ ಶಾಸಕ ಸಿ.ಎಸ್.ಪುಟ್ಟರಾಜು ಅಭಿಮಾನಿಗಳು, ಜೆಡಿಎಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಹಣ್ಣು ಹಂಪಲು ವಿತರಿಸಿದರು.

ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಹಾಗೂ ಶಾಸಕ ಸಿ.ಎಸ್.ಪುಟ್ಟರಾಜು ಪುತ್ರ ಸಿ.ಪಿ.ಶಿವರಾಜು ನೇತೃತ್ವದಲ್ಲಿ ಆಸ್ಪತ್ರೆ ಒಳ ರೋಗಿಗಳಿಗೆ ಹಣ್ಣುಹಂಪಲು ವಿತರಿಸಿ, ನಿಖಿಲ್ ಕುಮಾರಸ್ವಾಮಿ ಅವರಿಗೆ ಭಗವಂತ ಆಯಸ್ಸು, ಆರೋಗ್ಯ ಕೊಟ್ಟು ಕಾಪಾಡಲಿ ಎಂದು ಹಾರೈಸಿದರು. ಸಿ.ಪಿ.ಶಿವರಾಜು ಮಾತನಾಡಿ, ಚಿತ್ರನಟ, ಜೆಡಿಎಸ್‌ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರ ಹುಟ್ಟುಹಬ್ಬದ ಅಂಗವಾಗಿ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದ್ದೇವೆ. ಅಲ್ಲದೆ ಮಂಡ್ಯದ ಅಂಧ ಮಕ್ಕಳ ಶಾಲೆಯ ಮಕ್ಕಳಿಗೆ ಊಟದ ವ್ಯವಸ್ಥೆ ಮಾಡಲಾಗಿದ್ದು, ಮಕ್ಕಳೊಂದಿಗೆ ಕೇಕ್ ಕತ್ತರಿಸಿ ನಿಖಿಲ್ ಕುಮಾರಸ್ವಾಮಿ ಹುಟ್ಟುಹಬ್ಬ ಆಚರಣೆ ಮಾಡುತ್ತೇವೆ ಎಂದರು.

ಈ ವೇಳೆ ಪುರಸಭೆ ಅಧ್ಯಕ್ಷೆ ಅರ್ಚನ, ಮುಖಂಡರಾದ ಚೇತನ್, ಗಿರೀಶ್, ಕಲ್ಪತ್ ಅನಿಲ್, ಅಶೋಕ, ಎಚ್.ಎಸ್.ವಿ.ಸ್ವಾಮೀಗೌಡ, ಚಲುವರಾಜು, ಬೊಮ್ಮರಾಜು, ಟೌನ್‌ಚಂದ್ರು, ಪುರಸಭೆ ಸದಸ್ಯ ಶಿವಕುಮಾರ್, ಚನ್ನೇಗೌಡ, ಸಿ.ಎನ್.ಚಂದನ್, ಪ್ರಶಾಂತ್, ಹೇಮಂತ್ ಕುಮಾರ್, ಅರವಿಂದ, ರವಿ, ಸೋಮಶೇಖರ್, ಚೇತನ್, ಅವಿನಾಶ್ ಸೇರಿದಂತೆ ಹಲವರಿದ್ದರು.

ಕಟೀಲ್ ವಿರುದ್ಧ ಜೆಡಿಎಸ್ ಕಾರ್ಯಕರ್ತರ ಪ್ರತಿಭಟನೆ



ಮಂಡ್ಯ, ಜ.22– ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಹಾಗೂ ಕುಟುಂಬದ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿರುವ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ವಿರುದ್ಧ ಜಿಲ್ಲಾ ಜೆಡಿಎಸ್ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಮೈಸೂರು–ಬೆಂಗಳೂರು ಹೆದ್ದಾರಿಯ ಎಸ್.ಡಿ.ಜಯರಾಂ ವೃತ್ತದಲ್ಲಿ ಜಮಾವಣೆಗೊಂಡ ಜೆಡಿಎಸ್ ಕಾರ್ಯಕರ್ತರು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಜೆಡಿಎಸ್ ಮುಖಂಡ ಹೆಚ್.ಎನ್.ಯೋಗೇಶ್ ಮಾತನಾಡಿ, ಮಾಜಿ ಪ್ರಧಾನಿ ದೇವೇಗೌಡರ ಬಗ್ಗೆ ಅಗೌರವವಾಗಿ ಮಾತನಾಡಿರುವ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್‌ಗೆ ಬಿಜೆಪಿ ರಾಷ್ಟ್ರೀಯ ವರಿಷ್ಠರು ಬುದ್ಧಿ ಹೇಳಬೇಕು ಎಂದರು.

ಮಾಜಿ ಸಿಎಂ ಕುಮಾರಸ್ವಾಮಿ ಹೇಳಿರುವ ಹಾಗೆ ದೇವೇಗೌಡರ ಒಂದು ಉಗುರಿಗೆ ಕಟೀಲ್ ಸಮ ಇಲ್ಲ. ದೇವೇಗೌಡರ ಕಾಲಿನ ಧೂಳಿಗೆ ಸಮ ಇಲ್ಲ. ದೇವೇಗೌಡರ ಬಗ್ಗೆ ಗೊತ್ತಿಲ್ಲದಿದ್ದರೆ, ಪ್ರಧಾನಿ ಮೋದಿ ಅವರನ್ನು ಕೇಳಲಿ ಎಂದರು.

ಬಿಜೆಪಿ ನಾಯಕರಿಗೆ ಎಚ್ಚರಿಕೆ ನೀಡುತ್ತೇವೆ. ರಾಜ್ಯದಿಂದ ನಿಮ್ಮ ಟೆಂಟ್ ತೆಗೆದುಕೊಂಡು ಹೋಗುವ ಕಾಲ ಬಂದಿದೆ. ಯಾವಾಗ ಧರ್ಮ ಧರ್ಮದ ನಡುವೆ ಬೆಂಕಿ ಹಚ್ಚಿದ್ದೀರಿ. ಕೇಂದ್ರದಲ್ಲಿ 8 ವರ್ಷ ಆಡಳಿತ ನಡೆಸಿದ ನೀವು, ಬಡವರ ಪರ ಯಾವ ಯೋಜನೆಗಳನ್ನು ಜಾರಿಗೊಳಿಸಿಲ್ಲ. ಬೆಲೆ ಏರಿಕೆ ನಿಮ್ಮ ಕೊಡುಗೆಯಾಗಿದೆ ಎಂದರು.

ವರಿಷ್ಠರಿಂದ ಕಡೆಗಣನೆ: ತಗ್ಗಹಳ್ಳಿ ವೆಂಕಟೇಶ್ ಬೇಸರ



ಶ್ರೀರಂಗಪಟ್ಟಣ, ಜ.22– ಕಳೆದ 30 ವರ್ಷಗಳಿಂದ ಜೆಡಿಎಸ್‌ನ ನಿಷ್ಠಾವಂತ ಕಾರ್ಯಕರ್ತನಾಗಿ ದುಡಿದ ನನಗೆ ವರಿಷ್ಠರು ಎಂಎಲ್‌ಎ, ಎಂಎಲ್ಸಿ ಸೇರಿದಂತೆ ಹಲವು ಸ್ಥಾನಮಾನ ನೀಡುವುದಾಗಿ ಆಶ್ವಾಸನೆ ನೀಡಿ ಕಡೆಗಣಿಸಿದ್ದಾರೆ ಎಂದು ತಗ್ಗಹಳ್ಳಿ ವೆಂಕಟೇಶ್ ಬೇಸರ ವ್ಯಕ್ತಪಡಿಸಿದರು.

ತಾಲೂಕಿನ ಆರತಿ ಉಕ್ಕಡದಲ್ಲಿ ತಮ್ಮ ಬೆಂಬಲಿರು ಹಾಗೂ ಹಿತೈಷಿಗಳು ಏರ್ಪಡಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, 3 ಪಕ್ಷಗಳ ಸಂಭವನೀಯ ಅಭ್ಯರ್ಥಿಗಳು ಪಕ್ಷದ ಚಿಹ್ನೆ ಇಲ್ಲದೆ ಸ್ವತಂತ್ರವಾಗಿ ನನ್ನೊಂದಿಗೆ ಚುನಾವಣೆ ಎದುರಿಸಲಿ, ಅವರಿಗಿಂತ 1 ಓಟು ಕಡಿಮೆ ತೆಗೆದುಕೊಂಡರೂ ರಾಜಕೀಯ ನಿವೃತ್ತಿ ಹೊಂದುತ್ತೇನೆ ಎಂದರು. ನಾನು ಇಷ್ಟು ವರ್ಷ ರಾಜಕೀಯದಲ್ಲಿದ್ದರೂ, ನನ್ನ ಹಾಗೂ ಕುಟುಂಬದವರ ಹೆಸರಲ್ಲಿ 1 ಗುಂಟೆ ಆಸ್ತಿ ಸಂಪಾದಿಸಿಲ್ಲ. ಈ ಬಗ್ಗೆ ನಾನು ಎಲ್ಲಿ ಬೇಕಾದರೂ ಪ್ರಮಾಣ ಮಾಡುತ್ತೇನೆ. ಅವರು ಸಹ ಬಹಿರಂಗವಾಗಿ ಪ್ರಮಾಣ ಮಾಡಲಿ ಎಂದು ಸವಾಲೆಸದರು. ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್‌ಗೌಡ ಮಾತನಾಡಿ, ತಗ್ಗಹಳ್ಳಿ ವೆಂಕಟೇಶ್ ಅವರನ್ನು ಬಹಳ ವರ್ಷಗಳಿಂದ ನೋಡುತ್ತಾ ಬಂದಿದ್ದೇನೆ. ಸರಳ ವ್ಯಕ್ತಿತ್ವ ಹೊಂದಿರುವ ಅವರು, ಇತ್ತೀಚೆಗೆ ಅವರ ಪಕ್ಷದಲ್ಲಿನ ಭಿನ್ನಾಭಿಪ್ರಾಯದಿಂದ ಬೇಸರಗೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಅವರ ರಾಜಕೀಯ ಭವಿಷ್ಯ ಉತ್ತಮವಾಗಿರಲಿ ಎಂದು ಶುಭ ಹಾರೈಸಿದರು. ಈ ವೇಳೆ ಪ್ರಸನ್ನಗೌಡ, ಪ್ರಸನ್ನ, ಸಿದ್ದರಾಜು, ಸಚಿನ್, ರಮೇಶ್, ಪುಟ್ಟೇಗೌಡ, ಬಾಲು, ಕೃಷ್ಣಪ್ಪ, ಶಿವಲಿಂಗೇಗೌಡ, ಮಂಚೇಗೌಡ, ರಮೇಶ್, ಸುನೀಲ್, ವಿಜಿ, ಗಿರೀಶ್, ಮಂಜು, ನವೀನ್, ಸುರೇಶ್ ಸೇರಿದಂತೆ ನೂರಾರು ಮಂದಿ ತಗ್ಗಹಳ್ಳಿ ವೆಂಕಟೇಶ್ ಅಭಿಮಾನಿಗಳು ಹಾಗೂ ಹಿತೈಷಿಗಳು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಹೆಚ್.ಡಿ.ಕೋಟೆ ಬಳಿ ಹುಲಿ ದಾಳಿಗೆ ಯುವಕ ಬಲಿ

ಹಾಡಿಯ ಮಕ್ಕಳು ಬರುವುದು ಸಾಮಾನ್ಯ. ಆನೆ ಶಿಬಿರದಲ್ಲಿರುವ ಸಿಬ್ಬಂದಿ ಹಾಗೂ ಆನೆಗಳೊಂದಿಗೆ ಆಟವಾಡುವುದಕ್ಕಾಗಿ ಭಾನುವಾರ ಬೆಳಗ್ಗೆಯೂ ಕೆಲವರು ಬಂದಿದ್ದರು. ಅವರಲ್ಲಿ ಮಂಜು ಕೂಡ ಒಬ್ಬನಾಗಿದ್ದು, ಮಧ್ಯಾಹ್ನ 1.30ರಲ್ಲಿ ಆರ್‌ಎಫ್‌ಓ ಕ್ವಾಟ್ರಸ್ ಹಿಂಭಾಗದ ಕಾಡಿನ ರಸ್ತೆಯ ಪಕ್ಕದಲ್ಲಿ ಕುಳಿತಿದ್ದಾಗ ಏಕಾಏಕಿ ಹುಲಿ ದಾಳಿ ನಡೆಸಿ ಎಳೆದೊಯ್ದಿದೆ. ಹಾಡಹಗಲೇ ನಡೆದ ಈ ಘಟನೆಯಿಂದ ತಬ್ಬಿಬ್ಬಾದ ಆನೆ ಶಿಬಿರದ ಸಿಬ್ಬಂದಿಗಳು ಹುಲಿಯನ್ನು ಓಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅಷ್ಟರಲ್ಲಾಗಲೇ ಯುವಕ ಮಂಜುವಿನ ಪ್ರಾಣ ಪಕ್ಷಿ ಹಾರಿಹೋಗಿತ್ತು.

ವಿಷಯ ತಿಳಿದು ಕಚೇರಿಯಲ್ಲೇ ಇದ್ದ ಆರ್‌ಎಫ್‌ಓ ಮಧು ಹಾಗೂ ಸಿಬ್ಬಂದಿಗಳು ಯುವಕನ ಮೃತದೇಹವಿದ್ದ ಸ್ಥಳಕ್ಕೆ ಆಗಮಿಸಿ, ಹುಲಿ ಯುವಕನ ದೇಹ ಭಕ್ಷಿಸದಂತೆ ಕಟ್ಟೆಚ್ಚರ ವಹಿಸಿದ್ದರು. ಬಳಿಕ ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ಹುಲಿ ದಾಳಿ ನಡೆಸಿದ ಸ್ಥಳ ಪರಿಶೀಲನೆ ಮಾಡಿ, ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದರು.

ಕಿಡಿಕಾರಿದ ಹಾಡಿ ನಿವಾಸಿಗಳು: ಯುವಕ ಬಲಿಯಾದ ಸುದ್ದಿ ತಿಳಿಯುತ್ತಿದ್ದಂತೆಯೇ ಆನೆ ಶಿಬಿರದ ಬಳಿ ಬಂದ ಹಾಡಿ ನಿವಾಸಿಗಳು ಹೆಚ್.ಡಿ.ಕೋಟೆ–ಮಾನಂದವಾಡಿ ಮುಖ್ಯ ರಸ್ತೆಗೆ ಕಲ್ಲುಗಳನ್ನು ಅಡ್ಡಲಾಗಿಟ್ಟು ಪ್ರತಿಭಟನೆ ಮಾಡಿದರು. ಸ್ಥಳಕ್ಕೆ ಹಿರಿಯ ಅಧಿಕಾರಿಗಳು ಬಂದು ನ್ಯಾಯ ದೊರಕಿಸಿಕೊಡಬೇಕೆಂದು ಆಗ್ರಹಿಸಿದರು. ಇದರಿಂದ ಅರಣ್ಯ ಪ್ರದೇಶದಲ್ಲಿ ಹಾದು ಹೋಗುವ ಮುಖ್ಯರಸ್ತೆಯಲ್ಲಿ ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು.

ಹಲವು ದಿನಗಳಿಂದ ನೆಲೆಯೂರಿರುವ ಹುಲಿ: ಯುವಕನ ಮೇಲೆ ದಾಳಿ ನಡೆಸಿರುವ ಹುಲಿ ಕಳೆದ ಒಂದೂವರೆ ತಿಂಗಳಿಂದ ಬಳ್ಳಿ ಹಾಡಿ ಸಮೀಪವೇ ನೆಲೆಯೂರಿದೆ. ಹಲವು ದಿನ ಈ ಹುಲಿಯನ್ನು ಅರಣ್ಯ ಸಿಬ್ಬಂದಿ ಹಾಗೂ ಬಳ್ಳೆ ಹಾಡಿ ನಿವಾಸಿಗಳು ನೋಡಿದ್ದರು. ಕಾಡಿನೊಳಗೆ ಹಾಡಿ ಇರುವುದರಿಂದ ಪ್ರಾಣಿಗಳೊಂದಿಗೆ ಆದಿವಾಸಿಗಳು ಸಹಜ ಜೀವನ ನಡೆಸುತ್ತಿದ್ದರಿಂದ ದಾಳಿಯ ಮುನ್ಸೂಚನೆ ಅರಿಯದೇ ಸುಮ್ಮನಿದ್ದರು ಎನ್ನಲಾಗಿದೆ.

ಅರ್ಧ ದಿನ ಸಫಾರಿ ಬಂದ್: ಹುಲಿ ದಾಳಿ ಹಿನ್ನೆಲೆಯಲ್ಲಿ ಕಬಿನಿ ಹಿನ್ನೀರು ಪ್ರದೇಶದ ಬಿ–ಜೋನ್‌ನಲ್ಲಿ ಭಾನುವಾರ ಮಧ್ಯಾಹ್ನ ಸಫಾರಿ ನಿರ್ಬಂಧಿಸಲಾಗಿತ್ತು. ದಾಳಿ ನಡೆಸಿದ ಬಳಿಯೂ ಹುಲಿಯ ಮನಸ್ಥಿತಿಯೂ ಬದಲಾಗಿ, ಘಾಸಿಗೊಳ್ಳುವ ಸಾಧ್ಯತೆ ಇರುತ್ತದೆ ಎಂದು ಸಫಾರಿ ವಾಹನಗಳನ್ನು ಬಿ–ಜೋನ್‌ನಲ್ಲಿ ಸಂಚರಿಸದಂತೆ ಸೂಚಿಸಲಾಗಿತ್ತು.

> **ಬ್ಯಾಕ್‌ವಾಟರ್ ಫೀಮೇಲ್**
>
> ಕಬಿನಿ ಹಿನ್ನೀರಿನ ಪ್ರದೇಶದಲ್ಲಿ ಆವಾಸ ಸ್ಥಾನ ಮಾಡಿಕೊಂಡಿದ್ದ ಹೆಣ್ಣು ಹುಲಿಯೇ ದಾಳಿ ನಡೆಸಿದ್ದು ಖಚಿತವಾಗಿದೆ. ಈ ಹುಲಿಗೆ 7 ತಿಂಗಳ ನಾಲ್ಕು ಮರಿಗಳಿದ್ದು, ತನ್ನ ಕರುಳ ಕುಡಿಯನ್ನು ಇತರೆ ಹುಲಿಗಳಿಂದ ರಕ್ಷಿಸಿಕೊಳ್ಳಲು ಸುರಕ್ಷಿತ ಸ್ಥಳ ಆಯ್ದುಕೊಂಡು ವಾಸ ಮಾಡುತ್ತಿತ್ತು. ಆನೆ ಕ್ಯಾಂಪ್ ಸಮೀಪದ ಪೊದೆಗಳಲ್ಲಿ ಹಾಗೂ ಮುಖ್ಯ ರಸ್ತೆ ಆಸುಪಾಸಿನಲ್ಲಿ ನೆಲೆ ಕಂಡಿದ್ದರಿಂದ ಇತರೆ ಪ್ರಾಣಿಗಳಿಂದ ಮರಿಗಳನ್ನು ರಕ್ಷಿಸಿಕೊಳ್ಳುತ್ತಿತ್ತು. ಹಾಗಾಗಿಯೇ ಅನಿರೀಕ್ಷಿತವಾಗಿ ಯುವಕನ ಮೇಲೆ ದಾಳಿ ನಡೆಸಿದೆ ಎಂದು ವಿಶ್ಲೇಷಿಸಲಾಗಿದೆ.

ಮಗನನ್ನು ಕುಯ್ಯಬೇಡಿ: ಹೆಚ್.ಡಿ.ಕೋಟೆ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆಗಾಗಿ ಯುವಕನ ಮೃತದೇಹ ತರಲಾಗಿತ್ತು. ಈ ವೇಳೆ ಮೃತರ ಪೋಷಕರು ಪೊಲೀಸರೊಂದಿಗೆ ವಾಗ್ವಾದ ನಡೆಸಿದರು. ನಮ್ಮ ಅನುಮತಿ ಇಲ್ಲದೆ ಯಾಕೆ ಆಸ್ಪತ್ರೆಗೆ ಶವ ತಂದಿದ್ದೀರಿ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಪೊಲೀಸರು ಹಾಗೂ ಅರಣ್ಯ ಸಿಬ್ಬಂದಿಗಳು ಪೋಷಕರನ್ನು ಸಮಾಧಾನ ಮಾಡಿದರು.

2.50 ಲಕ್ಷ ಪರಿಹಾರದ ಚೆಕ್ ವಿತರಣೆ: ಆಸ್ಪತ್ರೆ ಬಳಿ ಮೇಟಿಕುಪ್ಪೆ ಉಪ ವಿಭಾಗದ ಎಸಿಎಫ್ ಕೆ.ಎನ್.ರಂಗಸ್ವಾಮಿ ಆಗಮಿಸಿ ಮೃತ ಯುವಕನ ತಂದೆ ಕಾಳ, ತಾಯಿ ಪುಷ್ಪ ಅವರಿಗೆ ಪ್ರಾಥಮಿಕ ಹಂತದಲ್ಲಿ 2.50 ಲಕ್ಷ ರೂ. ಪರಿಹಾರ ಮೊತ್ತದ ಚೆಕ್ ವಿತರಿಸಿದರು. ಉಳಿದ ಮೊತ್ತವನ್ನು ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕ ನಿಯಮಾನುಸಾರ ವಿತರಿಸುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಮೃತ ಯುವಕನ ಅಕ್ಕ ಕವನ, ಸುಮ, ಅಣ್ಣ ನಾಗಪ್ಪ, ದೊಡ್ಡಮ್ಮ ಜಯ, ತಾತ ತಿಮ್ಮ, ತಹಶೀಲ್ದಾರ್ ರತ್ನಾಂಬಿಕ, ಆರ್‌ಎಫ್‌ಓಗಳಾದ ಮಧು, ಹರ್ಷಿತ್, ಡಿವೈಎಸ್ಪಿ ಎಂ.ಕೆ.ಮಹೇಶ್, ಹೆಚ್.ಡಿ.ಕೋಟೆ ಸರ್ಕಲ್ ಇನ್ಸ್‌ಪೆಕ್ಟರ್‌ಗಳಾದ ಬಸವರಾಜ್, ಕೆ.ಆರ್.ನಗರದ ಸರ್ಕಲ್ ಇನ್ಸ್‌ಪೆಕ್ಟರ್ ಎಂ.ಆರ್.ಲವ, ಸರಗೂರು ಇನ್ಸ್‌ಪೆಕ್ಟರ್ ಲಕ್ಷ್ಮಿಕಾಂತ್, ಅಂತರಸಂತೆ ಎಸ್‌ಐ ರವಿಶಂಕರ್, ಮುಖಂಡರಾದ ಜಯಪ್ರಕಾಶ್ ಚಿಕ್ಕಣ್ಣ, ಗ್ರಾ.ಪಂ. ಸದಸ್ಯ ರಮೇಶ್, ಮಾಸ್ತಿ, ಶಂಕರ್, ಭಾಸ್ಕರ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಈ ಸಂಬಂಧ ಅಂತರಸಂತೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ರಸ್ತೆ ತಡೆ, ಅಧಿಕಾರಿಗಳ ವಿರುದ್ಧ ಆಕ್ರೋಶ

ಚಿರತೆ ಸೆರೆ ಹಿಡಿಯಲು ವಿಫಲರಾದ ಅರಣ್ಯ ಇಲಾಖೆ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ ಪ್ರತಿಭಟನಾ ಸ್ಥಳಕ್ಕೆ ಉಸ್ತುವಾರಿ ಸಚಿವರು ಬಾರದ ಹೊರತು ಪ್ರತಿಭಟನೆ ಹಿಂಪಡೆಯಲು ಸಾಧ್ಯವಿಲ್ಲವೆಂದು ಪಟ್ಟು ಹಿಡಿದ ಪರಿಣಾಮ ಭಾರೀ ತೊಂದರೆ ಎದುರಾಯಿತು. ಬೆಳಗ್ಗೆ 8.30ರಿಂದ ಆರಂಭಗೊಂಡ ರಸ್ತೆ ತಡೆ ಮಧ್ಯಾಹ್ನ 1 ಗಂಟೆಯಾದರೂ ಮುಗಿಯದ ಕಾರಣ ಸ್ಥಳದಲ್ಲಿ ಗೊಂದಲದ ವಾತಾವರಣ ಸೃಷ್ಟಿಯಾಯಿತು. ಪ್ರತಿಭಟನಾ ಸ್ಥಳಕ್ಕೆ ಶಾಸಕ ಎಂ.ಅಶ್ವಿನ್‌ಕುಮಾರ್, ಜಿಲ್ಲಾಧಿಕಾರಿ ರಾಜೇಂದ್ರ ಆಗಮಿಸಿ ಪ್ರತಿಭಟನಾಕಾರರ ಮನವಿ ಆಲಿಸಿದರು. ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ತಾಲೂಕಿನಲ್ಲಿ ಕಳೆದ 3 ತಿಂಗಳಿಂದ ಚಿರತೆ ದಾಳಿಗೆ ನಾಲ್ವರು ಮೃತಪಟ್ಟಿದ್ದಾರೆ. ಮೊದಲ ಪ್ರಕರಣದ ವೇಳೆಯೇ ಕ್ರಮವಹಿಸಲು ಒತ್ತಾಯಿಸಿದ್ದೆವು. ಆದರೆ ಅರಣ್ಯ ಇಲಾಖೆ ಗಮನ ಹರಿಸದ ಪರಿಣಾಮ ನಾಲ್ವರು ಮೃತಪಟ್ಟಿದ್ದು, ಅರಣ್ಯ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಶಾಸಕ ಅಶ್ವಿನ್‌ಕುಮಾರ್ ಅಧಿವೇಶನದಲ್ಲಿ ಈ ಬಗ್ಗೆ ಚರ್ಚೆ ಮಾಡಿದ್ದಾರೆ. ಆದರೂ ಸರ್ಕಾರ ಸೂಕ್ತ ಗಮನಹರಿಸಿಲ್ಲ. ಅಗತ್ಯ ಕ್ರಮ ಕೈಗೊಂಡಿಲ್ಲ. ಇದರ ಫಲ ಇಂದು ಪ್ರತಿಭಟನೆ ಹಂತ ತಲುಪಿದೆ. ಸರ್ಕಾರ ಚಿರತೆ ದಾಳಿಯಿಂದ ಮೃತಪಟ್ಟ ಕುಟುಂಬದವರಿಗೆ ಪರಿಹಾರ ನೀಡುವಾಗ ಒಂದೇ ಕಂತಿನಲ್ಲಿ ನೀಡದೆ 3 ಕಂತಿನ ರೂಪದಲ್ಲಿ ನೀಡುತ್ತಿದೆ. ಇದನ್ನು ನಿಲ್ಲಿಸಿ ಒಂದೇ ಕಂತಿನಲ್ಲಿ ಪರಿಹಾರದ ಹಣ ಪಾವತಿ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಪಿ.ಸುಬ್ರಹ್ಮಣ್ಯ ಮಾತನಾಡಿ, ನರಸೀಪುರದಲ್ಲಿ ದಿನದಿಂದ ದಿನಕ್ಕೆ ಚಿರತೆಗಳು ಮನುಷ್ಯರು, ಸಾಕು ಪ್ರಾಣಿಗಳನ್ನು ಬಲಿ ಪಡೆಯುತ್ತಲೇ ಇದೆ. ಸೌಜನ್ಯಕ್ಕಾದರೂ ಉಸ್ತುವಾರಿ ಸಚಿವರು, ಅರಣ್ಯ ಇಲಾಖೆ ಸಚಿವರು ಭೇಟಿ ನೀಡಿಲ್ಲ. ಸರ್ಕಾರಕ್ಕೆ ಮಾನ ಮರ್ಯಾದೆ ಇಲ್ಲದಂತಾಗಿದೆ. ಹಾಗಾದರೆ ಚಿರತೆ ದಾಳಿಯಿಂದ ದಿನನಿತ್ಯ ಸಾಯುತ್ತಿರುವ ಬಡ ಜೀವಗಳಿಗೆ ಬೆಲೆಯಿಲ್ಲವೇ ಎಂದು ಪ್ರಶ್ನಿಸಿರುವ ಗ್ರಾಮಸ್ಥರು, ಸರ್ಕಾರ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ಈ ತನಕ ಚಿರತೆ ದಾಳಿ ತಪ್ಪಿಸಲು ಯಾವ ಕ್ರಮ ಕೈಗೊಂಡಿದ್ದಾರೆ. ನಿಮ್ಮ ಸುಳ್ಳು ಭರವಸೆಗಳು, ಪರಿಹಾರಗಳು ನಮಗೆ ಬೇಡ. ಚಿರತೆಗಳನ್ನು ಕೊಂದು ಹಾಕಿಯಾದರು ತಾಲೂಕಿನ ಜನತೆ ನೆಮ್ಮದಿಯಿಂದ ಬದುಕುವ ವಾತಾವರಣ ಸೃಷ್ಟಿ ಮಾಡಿ ಎಂದು ಆಗ್ರಹಿಸಿದ್ದಾರೆ. ಪ್ರತಿಭಟನೆಯಲ್ಲಿ ಹೊರಳಹಳ್ಳಿ, ಮುಸುವಿನಕೊಪ್ಪಲು, ಕನ್ನಾಯಕನಹಳ್ಳಿ, ದೊಡ್ಡಬಾಗಿಲು, ಕೈಯಂಬಳ್ಳಿ, ಗ್ರಾಮದ ನಿವಾಸಿಗಳು ಹಾಗೂ ತಾಲೂಕು ಕುರುಬರ ಸಂಘ ನಿರ್ದೇಶಕರು, ವಿವಿಧ ಸಂಸ್ಥೆಯ ಮುಖಂಡರು ಭಾಗವಹಿಸಿದ್ದರು.

ರುಂಡವಿಲ್ಲದ ಶವ ಪತ್ತೆ

ನನ್ನ ಮಗನನ್ನು ಕಳೆದುಕೊಂಡಿದ್ದೇನೆ. ಚಿರತೆ ಹಾವಳಿ ಬಗ್ಗೆ ದೂರು ನೀಡಿದ್ದರೂ, ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಇನ್ನೆಷ್ಟು ಮಂದಿ ಬಲಿಗಾಗಿ ಕಾಯುತ್ತಿದ್ದೀರಾ? ಇದೇ ರೀತಿ ಚಿರತೆ ಹಾವಳಿಗೆ ಅಮಾಯಕರು ಬಲಿಯಾಗುತ್ತಿದ್ದರೆ, ಅಧಿಕಾರಿಗಳಿಗೆ ಗ್ರಾಮಸ್ಥರೇ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಕಿಡಿಕಾರಿದರು.



5 ಲಕ್ಷ ರೂ. ಪರಿಹಾರ: ಚಿರತೆಗೆ ಬಲಿಯಾದ ಜಯಂತ್ ಪೋಷಕರಿಗೆ ಮೈಸೂರು ವೃತ್ತದ ಸಿಎಫ್ ಡಾ.ಮಾಲತಿಪ್ರಿಯ ಅವರು ಐದು ಲಕ್ಷ ರೂ. ಮೊತ್ತದ ಪರಿಹಾರದ ಚೆಕ್ಕನ್ನು ಮೊದಲ ಹಂತದಲ್ಲಿ ವಿತರಿಸಿದರು. ಮರಣೋತ್ತರ ಪರೀಕ್ಷೆ ನಡೆಸಿ ವರದಿ ಬಂದ ನಂತರ ಉಳಿದ ಮೊತ್ತವನ್ನು ಕೊಡಿಸುವುದಾಗಿ ಭರವಸೆ ನೀಡಿದರು. ಆದರೂ ಗ್ರಾಮಸ್ಥರು ಅಧಿಕಾರಿಗಳ ನಿರ್ಲಕ್ಷ್ಯದಿಂದ ಬಾಲಕನನ್ನು ಕಳೆದುಕೊಂಡಿದ್ದೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರುಂಡದ ಬಗ್ಗೆ ಸುಳಿವಿಲ್ಲ: ಚಿರತೆ ದಾಳಿ ನಡೆಸಿ ಕೊಂದು ಹಾಕಿದ ಬಾಲಕ ಜಯಂತ್‌ನ ರುಂಡ ದಿನವಿಡೀ ಶೋಧಿಸಿದರೂ ಸಿಗಲಿಲ್ಲ. ಅರಣ್ಯ ಅಧಿಕಾರಿಗಳು ಹಾಗೂ ಗ್ರಾಮಸ್ಥರು ಮುಂಡ ಸಿಕ್ಕಿದ ಸ್ಥಳದಿಂದ ವಿವಿಧೆಡೆ ಸಾಕಷ್ಟು ದೂರದವರೆಗೆ ಹುಡುಕಾಟ ನಡೆಸಿದರೂ, ಯಾವುದೇ ಪ್ರಯೋಜನವಾಗಲಿಲ್ಲ. ಈ ಹಿನ್ನೆಲೆಯಲ್ಲಿ ಪೋಷಕರು ಅನಿವಾರ್ಯವಾಗಿ ಮಗನ ರುಂಡವಿಲ್ಲದ ಮೃತದೇಹವನ್ನು ಪಡೆಯಬೇಕಾಯಿತು.

ಮೃತದೇಹ ಸಿಕ್ಕ ಸ್ಥಳವನ್ನು ಮಹಜರು ನಡೆಸಿದ ಪೊಲೀಸ್ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ತಿ.ನರಸೀಪುರದ ಸಾರ್ವಜನಿಕ ಆಸ್ಪತ್ರೆಗೆ ಸ್ಥಳಾಂತರಿಸಿ ಮರಣೋತ್ತರ ಪರೀಕ್ಷೆಗೆ ಕ್ರಮ ಕೈಗೊಂಡರು. ಬಳಿಕ ವಾರಸುದಾರರಿಗೆ ಮೃತದೇಹ ಒಪ್ಪಿಸಿದರು.

ಚಿರತೆಗೆ ಕಂಡಲ್ಲಿ ಗುಂಡು: ಜಿಲ್ಲಾಧಿಕಾರಿ ಆದೇಶ

ಜಿಲ್ಲಾಡಳಿತಕ್ಕೆ ಅರ್ಥವಾಗುತ್ತದೆ. ಆದ್ದರಿಂದ ವನ್ಯಜೀವಿ ಅಧಿಕಾರಿಗಳೊಂದಿಗೆ ಮಾತನಾಡಿ ಚಿರತೆಗಳನ್ನು ಕಂಡಲ್ಲಿ ಗುಂಡಿಕ್ಕಲು ಆದೇಶ ನೀಡಲಾಗಿದೆ. ಸಾರ್ವಜನಿಕರು ಆತಂಕಕ್ಕೆ ಒಳಗಾಗಬಾರದು ಎಂದರು. 3 ತಿಂಗಳ ಹಿಂದೆಯೇ ಕಬ್ಬು ಕಟಾವಿಗೆ ಆದೇಶಿಸಲಾಗಿತ್ತು. ಆ ವೇಳೆ ಮರಿ ಚಿರತೆ ಸೇರಿದಂತೆ 8 ಚಿರತೆಗಳು ಸಿಕ್ಕಿದ್ದವು. ಅಂದಾಜಿನ ಪ್ರಕಾರ ಇನ್ನು 15ರಿಂದ 20 ಚಿರತೆಗಳಿರಬಹುದು. ತಾಲೂಕಿನಲ್ಲಿ ಕಬ್ಬು ಕಟಾವು ಮಾಡಿಸಲು ಸಕ್ಕರೆ ಕಾರ್ಖಾನೆಯವರೊಂದಿಗೆ ಸಭೆ ನಡೆಸಿ ಆದ್ಯತೆ ಮೇರೆಗೆ ಶೀಘ್ರ ಕಬ್ಬು ಕಟಾವು ಮಾಡಿಸಲು ಆದೇಶಿಸುತ್ತೇನೆ. ಅಲ್ಲದೇ ಗ್ರಾಮೀಣ ಭಾಗದಲ್ಲಿ ಹಗಲು ಹೊತ್ತಿನಲ್ಲಿ 3 ಫೇಸ್ ವಿದ್ಯುತ್ ನೀಡಲು ಮುಖ್ಯಮಂತ್ರಿಗಳಿಗೆ ರಿಪೋರ್ಟ್ ಕಳುಹಿಸಿ ಚಿರತೆ ದಾಳಿ ಇಲ್ಲದ ಕಡೆಗಳಲ್ಲಿ ವಿದ್ಯುತ್ ಕಡಿತ ಮಾಡಿ ತಿ.ನರಸೀಪುರ ಭಾಗಕ್ಕೆ ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ರೈತ ಮುಖಂಡರು ಹಾಗೂ ದಲಿತ ಮುಖಂಡರ ಒತ್ತಾಯದ ಮೇರೆಗೆ ಚಿರತೆ ದಾಳಿಯಿಂದ ಮೃತಪಟ್ಟ ಕುಟುಂಬಕ್ಕೆ ಕಂತಿನ ರೂಪದಲ್ಲಿ ನೀಡುತ್ತಿದ್ದ ಪರಿಹಾರವನ್ನು ಒಂದೇ ಕಂತಿನಲ್ಲಿ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಲಾಗುತ್ತದೆ. ಚಿರತೆ ದಾಳಿ ಬಗ್ಗೆ ವೈಯಕ್ತಿಕ ಗಮನಹರಿಸಿ ತಾಲೂಕಿನಲ್ಲಿ 10 ರಿಂದ 12 ತಂಡಗಳನ್ನು ರಚಿಸಿ ಕೂಂಬಿಂಗ್ ನಡೆಸಲು ಕ್ರಮ ಕೈಗೊಳ್ಳಲಾಗುತ್ತದೆ. ತಂಡದಲ್ಲಿ ಅರಣ್ಯ, ಪೊಲೀಸ್, ಕಂದಾಯ, ಗ್ರಾಪಂ ಹಾಗೂ ಊರಿನ ಯುವಕರನ್ನು ಸೇರಿಸಿ ಕಾರ್ಯಾಚರಣೆ ಮಾಡಲಾಗುತ್ತದೆ ಎಂದರು.

ಗ್ರಾಮದ ಜನರು ಇಲಾಖೆಯ ಮುಖ್ಯಸ್ಥರಿಗೆ ಸಹಕರಿಸಬೇಕು. ಸರ್ಕಾರವೇ ಎಲ್ಲಾ ಕೆಲಸ ಮಾಡಲು ಸಾಧ್ಯವಿಲ್ಲ. ಊರಿನ ಯುವಕರು, ಯಜಮಾನರ ಸಹಕಾರ ಮುಖ್ಯ. ಇಂದು ನೀವು ಮಾಡಿರುವ ಪ್ರತಿಭಟನೆ ಜಿಲ್ಲಾಡಳಿತಕ್ಕೆ ಮುಟ್ಟಿದೆ. ಪ್ರತಿಭಟನೆಯೊಂದೇ ಸಮಸ್ಯೆಗೆ ಪರಿಹಾರವಲ್ಲ. ಹಾಗಾಗಿ ಮುಂದೆ ಇಂತಹ ಅನಾಹುತ ಆಗದಂತೆ ಎಚ್ಚರ ವಹಿಸಲು ಇಲಾಖೆಗೆ ಸೂಚಿಸಲಾಗುತ್ತದೆ ಎಂದು ವಿವರಿಸಿ ಪ್ರತಿಭಟನೆ ಹಿಂಪಡೆಯುವಂತೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಪ್ರತಿಭಟನೆ ಅಂತ್ಯಗೊಂಡಿತು.

ಚಿರತೆ ಸೆರೆ ಕಾರ್ಯಾಚರಣೆಗೆ ಅನುವಾಗುವಂತೆ

ತಿ.ನ.ಪುರ ತಾಲೂಕಲ್ಲಿ 15 ದಿನದೊಳಗೆ ಕಬ್ಬು ಕಟಾವು ಮಾಡಲು ಡಿಸಿ ಸೂಚನೆ



ಮೈಸೂರು,ಜ.22(ಎಸ್‌ಬಿಡಿ)–ತಿ.ನರಸೀಪುರ ತಾಲೂಕಿನಲ್ಲಿ ಆತಂಕ ಹೆಚ್ಚಿಸಿರುವ ಚಿರತೆ ಸೆರೆ ಕಾರ್ಯಾಚರಣೆಗೆ ಅನುವಾಗುವಂತೆ ಪಕ್ವಗೊಂಡಿರುವ ಕಬ್ಬನ್ನು 15 ದಿನಗಳಲ್ಲಿ ಕಟಾವು ಮಾಡಲು ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಸೂಚನೆ ನೀಡಿದ್ದಾರೆ.

ತಿ.ನರಸೀಪುರ ತಾಲೂಕಿನ ಹೊರಳ ಹಳ್ಳಿಯಲ್ಲಿ ಬಾಲಕನ ಮೇಲೆ ಚಿರತೆ ದಾಳಿ ನಡೆಸಿ ಕೊಂದ ಘಟನೆ ಹಿನ್ನೆಲೆಯಲ್ಲಿ ತಮ್ಮ ಕಚೇರಿಯಲ್ಲಿ ಭಾನುವಾರ ತುರ್ತು ಸಭೆ ನಡೆಸಿ ಬಣ್ಣಾರಿ ಅಮ್ಮನ ಸಕ್ಕರೆ ಕಾರ್ಖಾನೆ ಪ್ರತಿನಿಧಿಗಳಿಂದ ಮಾಹಿತಿ ಪಡೆದ ಅವರು, ಚಿರತೆ ಉಪಟಳ ಹೆಚ್ಚಾಗಿರುವ ಸೋಸಲೆ ಹೋಬಳಿ ವ್ಯಾಪ್ತಿಯಲ್ಲಿ ಪಕ್ವಗೊಂಡಿರುವ ಕಬ್ಬನ್ನು ಆದ್ಯತೆಯಡಿ ಕಟಾವು ಮಾಡಬೇಕು. ಒಟ್ಟಾರೆ ತಿ.ನರಸೀಪುರ ತಾಲೂಕು ಹಾಗೂ ನಂಜನಗೂಡು ತಾಲೂಕು ಗಡಿ ಪ್ರದೇಶದಲ್ಲಿರುವ ಕಬ್ಬನ್ನು 15 ದಿನಗಳಲ್ಲಿ ಕಟಾವು ಮಾಡಬೇಕೆಂದು ತಿಳಿಸಿದರು.

ಸದ್ಯ 19 ತಂಡಗಳು ಕಬ್ಬು ಕಟಾವು ಕಾರ್ಯದಲ್ಲಿ ತೊಡಗಿದ್ದು ನಿತ್ಯ 15 ಟನ್ ಕಟಾವು ಮಾಡಲಾಗುತ್ತಿದೆ. ಇದನ್ನು 30 ತಂಡಗಳಿಗೆ ಹೆಚ್ಚಿಸಿ ನಿತ್ಯ 600 ಟನ್ ಕಟಾವಿಗೆ ಕ್ರಮ ಕೈಗೊಳ್ಳಬೇಕು. ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಜಂಟಿ ನಿರ್ದೇಶಕಿ ಕುಮುದಾ ಶರತ್ ಹಾಗೂ ತಿ.ನರಸೀಪುರ ತಹಸೀಲ್ದಾರ್ ಮೇಲ್ವಿಚಾರಣೆ ನಡೆಸಿ ದೈನಂದಿನ ವರದಿ ಸಲ್ಲಿಸಬೇಕು ಎಂದು ಹೇಳಿದರು.

ಬಂಡೀಪುರದಲ್ಲಿ ಹತ್ತಾರು ಎಕರೆ ಅರಣ್ಯ ಭಸ್ಮ



ಗುಂಡ್ಲುಪೇಟೆ: ಭಾನುವಾರ ಬಂಡೀಪುರ ರಾಷ್ಟ್ರೀಯ ಉದ್ಯಾನವನಕ್ಕೆ ಸೇರಿದ ಗುಡ್ಡದಲ್ಲಿ ಬೆಂಕಿ ಬಿದ್ದು ಹತ್ತಾರು ಎಕರೆ ಪ್ರದೇಶ ಭಸ್ಮವಾಗಿವೆ.

ಇಲ್ಲಿನ ಕುಂದಕೆರೆ ವಲಯದ ಕಣಿಯನಪುರ ಗುಡ್ಡದಲ್ಲಿ ಭಾನುವಾರ ಮಧ್ಯಾಹ್ನ ಬೆಂಕಿ ಕಾಣಿಸಿಕೊಂಡಿತ್ತು. ಅರಣ್ಯ ಇಲಾಖೆ ಸಾಕಷ್ಟು ಮುನ್ನೆಚ್ಚರಿಕೆ ಕ್ರಮ ಕೈಗೊಂಡರೂ ಬೆಂಕಿ ತಗುಲಿ ಹತ್ತಾರು ಎಕರೆ ಭಸ್ಮವಾಗಿದೆ. ಆರಂಭದಲ್ಲಿ ದಟ್ಟವಾದ ಹೊಗೆ ಆವರಿಸಿತ್ತು. ಇದನ್ನು ಕಂಡ ಗ್ರಾಮಸ್ಥರು, ಅರಣ್ಯ ಇಲಾಖೆಗೆ ವಿಷಯ ಮುಟ್ಟಿಸಿದರು. ಸ್ಥಳಕ್ಕೆ ಬಂದ ಅರಣ್ಯ ಇಲಾಖೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ.

ಮೈಸೂರು ಮಿತ್ರ ಸೋಮವಾರ 23 ಜನವರಿ 2023

ಹಾರಂಗಿ ಹಿನ್ನೀರು ಪ್ರದೇಶದ ತೋಟದಲ್ಲಿ ಗೋವುಗಳ ಹತ್ಯೆ

- ಹಿಂದೂ ಜಾಗರಣ ವೇದಿಕೆ ಆಕ್ರೋಶ ಸ್ಥಳಕ್ಕೆ ಪೊಲೀಸರ ಭೇಟಿ
- ಪಶು ವೈದ್ಯರ ಸಮ್ಮುಖದಲ್ಲಿ ಹೂತಿಟ್ಟ ಗೋವಿನ ಕಳೇಬರದ ಮಹಜರು



ಮಡಿಕೇರಿ, ಜ.22– ಸೋಮವಾರಪೇಟೆ ತಾಲೂಕಿನ ಗರಗಂದೂರು 'ಬಿ' ಸಮೀಪದ ಹಾರಂಗಿ ಹಿನ್ನೀರು ಪ್ರದೇಶದಲ್ಲಿರುವ ಅನ್ಯ ಕೋಮಿನ ವ್ಯಕ್ತಿಯೊಬ್ಬರ ಕಾಫಿ ತೋಟದಲ್ಲಿ 2 ಗೋವುಗಳನ್ನು ಹತ್ಯೆ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ.

ಖಚಿತ ಮಾಹಿತಿ ಮೇರೆಗೆ ಹಿಂದೂ ಜಾಗರಣ ವೇದಿಕೆಯ ಹೊಸತೋಟ ಮತ್ತು ಮಾದಾಪುರ ಭಾಗದ ಕಾರ್ಯಕರ್ತರು ಘಟನಾ ಸ್ಥಳಕ್ಕೆ ತೆರಳಿ ಗೋ ಹತ್ಯೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಸುಂಟಿಕೊಪ್ಪ ಪೊಲೀಸರಿಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಸ್ಥಳಕ್ಕಾಗಮಿಸಿದ ಪೊಲೀಸರು ಸ್ಥಳ ಪರಿಶೀಲನೆ ನಡೆಸಿದರು. ಈ ಸಂದರ್ಭ ಗೋವಿನ ಚರ್ಮ ಹಾಗೂ ಉದರದೊಳಗಿನ ಭಾಗಗಳನ್ನು ಮಣ್ಣಿನಡಿ ಹೂತು ಹಾಕಿರುವುದು ಪತ್ತೆಯಾಗಿದೆ. ಪೊಲೀಸರು ಸ್ಥಳಕ್ಕೆ ಪಶು ವೈದ್ಯರನ್ನು ಕರೆಯಿಸಿ ಕಳೇಬರದ ಮಹಜರು ನಡೆಸಿದರು.

ಕೊಡಗು ಜಿಲ್ಲೆಯಲ್ಲಿ ನಿರಂತರ ಗೋ ಹತ್ಯೆ, ಗೋಮಾಂಸ ಮಾರಾಟ, ಗೋವುಗಳ ಅಕ್ರಮ ಕಳ್ಳ ಸಾಗಾಣಿಕೆ ನಡೆಯುತ್ತಿದ್ದರೂ ಪೊಲೀಸ್ ಇಲಾಖೆ ಅವುಗಳನ್ನು ಮಟ್ಟ ಹಾಕುವಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ಹಿಂದೂ ಜಾಗರಣ ವೇದಿಕೆಯ ಪ್ರಮುಖರು ತೀವ್ರ ಆಕ್ರೋಶ ವ್ಯಕ್ತ ಪಡಿಸಿದರು. ಹಿಂದೂಗಳ ಧಾರ್ಮಿಕ ಭಾವನೆಗಳನ್ನು ಘಾಸಿಗೊಳಿಸುವುದಕ್ಕಾಗಿಯೇ ಗೋಹತ್ಯೆಗಳನ್ನು ನಡೆಸಲಾಗುತ್ತಿದೆ ಎಂದು ಹಿಂದೂ ಜಾಗರಣ ವೇದಿಕೆಯ ಜಿಲ್ಲಾ ಸಮಿತಿಯ ಪ್ರಮುಖರಾದ ಸುನಿಲ್ ಆಕ್ರೋಶ ವ್ಯಕ್ತಪಡಿಸಿದರು.

ಕ್ರೈಂ ಇಂಟಲಿಜೆನ್ಸ್, ವಿಲೇಜ್ ಬೀಟ್, ಡಿ.ಸಿ.ಐ.ಬಿ, ಸೈಬರ್ ಕ್ರೈಂ ನಂತಹ ಪ್ರಮುಖ ವಿಭಾಗಗಳನ್ನು ಹೊಂದಿರುವ ಪೊಲೀಸ್ ಇಲಾಖೆಗೆ ಈ ಬಗ್ಗೆ ಸಂಪೂರ್ಣ ಮಾಹಿತಿಯಿದ್ದು ಕೃತ್ಯ ನಡೆಯುವ ಪ್ರದೇಶಗಳಲ್ಲಿ ದಾಳಿ ನಡೆಸಿ ಅಕ್ರಮ ಚಟುವಟಿಕೆಗಳನ್ನು ಮಟ್ಟ ಹಾಕಲು ಹಿಂದೇಟು ಹಾಕುತ್ತಿರುವುದು ಸಾರ್ವಜನಿಕರ ಸಂಶಯಕ್ಕೆ ಕಾರಣವಾಗಿದೆ ಎಂದು ಹಿಂ.ಜಾ.ವೇ. ತಾಲೂಕು ಸಹ ಸಂಚಾಲಕ ವಿನು ಅಸಮಧಾನ ವ್ಯಕ್ತಪಡಿಸಿದರು.

ಸ್ಥಳೀಯ ಪೊಲೀಸರು ಅಗತ್ಯವಿದ್ದಲ್ಲಿ ಜಿಲ್ಲೆ ಮತ್ತು ಹೊರ ಜಿಲ್ಲೆಗಳ ರಿಸರ್ವ್ ಪೊಲೀಸ್ ಮತ್ತು ಅರೆಸೇನಾ ಪಡೆಗಳ ಸಹಕಾರದೊಂದಿಗೆ ಕಾನೂನು ಬಾಹಿರ ಮತ್ತು ದೇಶದ್ರೋಹ ಕೃತ್ಯ ನಡೆಯುತ್ತಿರುವ ಪ್ರದೇಶಗಳ ಮೇಲೆ ವ್ಯವಸ್ಥಿತ ದಾಳಿ ನಡೆಸಿ ಅಕ್ರಮ ಗೋಹತ್ಯೆ, ಗೋಮಾಂಸ ಮಾರಾಟ ಪ್ರಕರಣಗಳಿಗೆ ಕಡಿವಾಣ ಹಾಕಬೇಕೆಂದು ಹಿಂದೂ ಜಾಗರಣ ವೇದಿಕೆಯ ಜಿಲ್ಲಾ ಸಂಚಾಲಕ ಕುಕ್ಕೇರ ಅಜಿತ್, ಜಿಲ್ಲಾ ಪ್ರಮುಖರಾದ ಸುಭಾಸ್ ತಿಮ್ಮಯ್ಯ, ರಂಜನ್ ಗೌಡ ಒತ್ತಾಯಿಸಿದರು.

ಘಟನೆಯ ಸ್ಥಳಕ್ಕೆ ಹಿಂದೂ ಜಾಗರಣ ವೇದಿಕೆ ಜಿಲ್ಲಾ ಸಮಿತಿಯ ಸುನಿಲ್ ಮಾದಾಪುರ, ವಿನು ಕುಮಾರ್, ಚಿದು, ಸುನಿಲ್, ರಾಜೇಶ್ ಸೇರಿದಂತೆ ಹೊಸ ತೋಟದ ಕಾರ್ಯಕರ್ತರು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣದ ಸಮಗ್ರ ತನಿಖೆಗೆ ಆಗ್ರಹಿಸಿದರು. ಗೋಹತ್ಯೆ ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲ ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ತಪ್ಪಿದ್ದಲ್ಲಿ ಉಗ್ರ ಹೋರಾಟ ರೂಪಿಸಲಾಗುವುದೆಂದು ಎಚ್ಚರಿಸಿದರು. ಗೋಹತ್ಯೆ ಪ್ರಕರಣ ಕುರಿತು ಸುಂಟಿಕೊಪ್ಪ ಪೊಲೀಸರು ದೂರು ದಾಖಲಿಸಿಕೊಂಡು, ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ನಾಲ್ವರು ಸಾಧಕ ಮಾಜಿ ಸೈನಿಕರಿಗೆ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಪ್ರಶಸ್ತಿ



ಮಡಿಕೇರಿ, ಜ.22– ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಜಿಲ್ಲೆಯ ನಾಲ್ವರು ಮಾಜಿ ಸೈನಿಕರಿಗೆ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ವತಿಯಿಂದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಗೋಣಿಕೊಪ್ಪಲು ಕಾವೇರಿ ಕಾಲೇಜಿನಲ್ಲಿ ನಡೆದ 'ಆರ್ಮಿ ಡೇ' ಕಾರ್ಯಕ್ರಮದಲ್ಲಿ ಮಾಜಿ ಸೈನಿಕರಾದ ಕೊಟ್ಟುಕತ್ತಿರ ಪ್ರಕಾಶ್ ಕಾರ್ಯಪ್ಪ, ಹೊಸೊಕ್ಲು ಚಿಣ್ಣಪ್ಪ, ತಂಬಂಡ ನಾಣಯ್ಯ ಹಾಗೂ ಗಣೇಶ್ ತಿಮ್ಮಯ್ಯ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಚಲನಚಿತ್ರ ಕ್ಷೇತ್ರದ ಸೇವೆಗಾಗಿ ಪ್ರಶಸ್ತಿ ಪಡೆದ ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ ಅವರು ಚಿತ್ರ ನಿರ್ಮಾಣ ಮತ್ತು ನಿರ್ದೇಶನದ ಮೂಲಕ ಭಾಷೆ ಹಾಗೂ ಸಾಹಿತ್ಯದ ಬೆಳವಣಿಗೆಗೆ ಉತ್ತೇಜನ ನೀಡುತ್ತಿದ್ದಾರೆ. ಇವರ ನಿರ್ದೇಶನದ 'ನಾಡ ಪೆದ ಆಶಾ' ಅಂತರರಾಷ್ಟ್ರೀಯ ಚಲಚಿತ್ರೋತ್ಸವಗಳಲ್ಲಿ ಹಲವು ಪ್ರಶಸ್ತಿಗಳನ್ನು ಪಡೆದುಕೊಂಡಿದೆ.

ಹೊಸೊಕ್ಲು ಎ.ಚಿಣ್ಣಪ್ಪ ಅವರು 1984ರಲ್ಲಿ ಭೂಸೇನೆಯ ಮದ್ರಾಸ್ ರೆಜಿಮೆಂಟ್‌ಗೆ ಭರ್ತಿಯಾಗಿ 2016ರವರೆಗೆ ಸೇವೆ ಸಲ್ಲಿಸಿ ಆನರರಿ ಕ್ಯಾಪ್ಟನ್ ಆಗಿ ನಿವೃತ್ತಿ ಹೊಂದಿದ್ದಾರೆ. ಸೇನೆಯಲ್ಲಿರುವಾಗಲೇ ಮ್ಯಾರಥಾನ್ ಮತ್ತು ಕ್ರಾಸ್ ಕಂಟ್ರಿ ಸ್ಪರ್ಧೆಯಲ್ಲಿ ಭಾಗವಹಿಸಿ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ 88 ಚಿನ್ನ, 31 ಬೆಳ್ಳಿ ಹಾಗೂ 18 ಕಂಚಿನ ಪದಕ ಗೆದ್ದಿದ್ದಾರೆ. ಇವರು ಎರಡು ಬಾರಿ ಚೀಫ್ ಆಫ್ ಆರ್ಮಿ ಸ್ಟಾಫ್ ಪದಕ ಪಡೆದಿದ್ದು, ನಿವೃತ್ತಿ ನಂತರ ಮೂಲ ಕಸುಬು ಕೃಷಿಯನ್ನು ಮುಂದು ವರೆಸಿದ್ದಾರೆ.

ತಂಬಂಡ ನಾಣಯ್ಯ ಅವರು ಕೂಡ ಭೂ ಸೇನೆಯ ಮದ್ರಾಸ್ ರೆಜಿಮೆಂಟ್‌ಗೆ ಸೇರಿ ಆನರರಿ ಕ್ಯಾಪ್ಟನ್ ಆಗಿ ನಿವೃತ್ತಿ ಹೊಂದಿದ್ದಾರೆ. ಮ್ಯಾರಥಾನ್ ಮತ್ತು ಕ್ರಾಸ್ ಕಂಟ್ರಿ ಓಟದಲ್ಲಿ ಭಾಗವಹಿಸಿ 22 ಚಿನ್ನದ ಪದಕ ಪಡೆದುಕೊಂಡಿದ್ದು, ನಿವೃತ್ತಿ ನಂತರ ಕೃಷಿಯನ್ನು ಮುಂದುವರೆಸಿದ್ದಾರೆ.

ಸೋಮೆಂಗಡ ಗಣೇಶ್ ತಿಮ್ಮಯ್ಯ ಅವರು ಭೂಸೇನೆಗೆ ಸೇರಿ 'ಆಪರೇಷನ್ ಬ್ಲ್ಯೂ ಸ್ಟಾರ್'ನಲ್ಲಿ ಭಾಗವಹಿಸಿ ನಿವೃತ್ತಿ ನಂತರ ಮೂಲ ಕಸುಬು ಕೃಷಿಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ಕೃಷಿ ಸಾಧನೆಗಾಗಿ 2 ರಾಷ್ಟ್ರ, 5 ರಾಜ್ಯ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿ ಹಾಗೂ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ನಾಳೆ ಸಂವಾದ ಕಾರ್ಯಕ್ರಮ

ಮಡಿಕೇರಿ ಜ.22– ಸಾಂಬಾರ ಮಂಡಳಿ ವತಿಯಿಂದ ಜ.24 ರಂದು ಬೆಳಗ್ಗೆ 10.30 ಗಂಟೆಯಿಂದ ಸಂಜೆ 5 ಗಂಟೆವರೆಗೆ ನಗರದ ಹೋಟೆಲ್ ಕ್ರಿಸ್ಟಲ್ ಕೋರ್ಟ್‌ನಲ್ಲಿ ಖರೀದಿದಾರರು ಮತ್ತು ಮಾರಾಟಗಾರರ ಜತೆ ಸಂವಾದ ಕಾರ್ಯಕ್ರಮ ನಡೆಯಲಿದೆ ಎಂದು ಸಾಂಬಾರ ಮಂಡಳಿಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ವಾಹನ ಜಪ್ತಿ

ಮಡಿಕೇರಿ, ಜ.22– ಮಡಿಕೇರಿ ತಾಲೂಕು ವ್ಯಾಪ್ತಿಯಲ್ಲಿ ಪರವಾನಿಗೆ ಉಲ್ಲಂಘಿಸಿ ಸಾಮಾನ್ಯ ಮರಳು ಸಾಗಾಣಿಕೆ ಮಾಡುತ್ತಿದ್ದ ವಾಹನ (ಸಂಖ್ಯೆ ಕೆಎ–21–ಬಿ–2307 ಮತ್ತು ಕೆಎ–42–3–3434) ಗಳನ್ನು ಜಪ್ತಿ ಮಾಡಲಾಗಿದೆ ಎಂದು ಹಿರಿಯ ಭೂ ವಿಜ್ಞಾನಿ ಶ್ರೀನಿವಾಸ್ ತಿಳಿಸಿದ್ದಾರೆ. ಈ ವಾಹನಗಳನ್ನು ಪರಿಶೀಲಿಸಿ ಪರವಾನಿಗೆ ಉಲ್ಲಂಘನೆಗೆ ರೂ.1,01,000 ಗಳ ಕೆ.ಎಂ.ಎಂ.ಸಿಆರ್ ನಿಯಮದಂತೆ ದಂಡ ವಿಧಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಬಾಲಕಿ ನೇಣಿಗೆ ಶರಣು

ನಾಪೋಕ್ಲು, ಜ.22– ಸಮೀಪದ ಕಕ್ಕಬೆಯ ಕುಂಜಿಲ ಗ್ರಾಮದ ನಂಬುಡಮಾಡ ದಿಲನ್ ಅವರ ಲೈನ್ ಮನೆಯಲ್ಲಿ ವಾಸವಾಗಿದ್ದ ತಾಜುದ್ದೀನ್ ಅವರ ಪುತ್ರಿ ತಸ್ಲೀಮಾ(13) ಭಾನುವಾರ ಮನೆಯಲ್ಲಿ ಯಾರೂ ಇಲ್ಲದ ಸಂದರ್ಭದಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ತಂದೆ ತಾಜುದ್ದೀನ್ ನೀಡಿದ ದೂರು ದಾಖಲಾಗಿದ್ದು, ಠಾಣಾಧಿಕಾರಿ ಸದಾಶಿವ ಮತ್ತು ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಮಡಿಕೇರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ್ದು ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ಕಕ್ಕಬೆಯ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದಲ್ಲಿ ಉಪ ಲೋಕಾಯುಕ್ತ



ನಾಪೋಕ್ಲು, ಜ.22– ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ. ಎನ್ ಫಣೀಂದ್ರ ಭಾನುವಾರ ಸಂಜೆ ಸಮೀಪದ ಇತಿಹಾಸ ಪ್ರಸಿದ್ಧ ಕಕ್ಕಬೆಯ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪ್ರಾರ್ಥನೆ, ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಡಿಆರ್‌ಎ ಚೆನ್ನಕೇಶವ ರೆಡ್ಡಿ, ಲೋಕಾಯುಕ್ತ ಪಬ್ಲಿಕ್ ಪ್ರಾಸಿಕ್ಯೂಟರ್ ಡಿ ನಾರಾಯಣ, ಜಿಲ್ಲಾಧಿಕಾರಿ ಡಾ. ಸತೀಶ್, ಉಪವಿಭಾಧಿಕಾರಿ ಡಾ. ನಂಜುಂಡೇಗೌಡ, ಡಿವೈಎಸ್‌ಪಿ ಪವನ್‌ಕುಮಾರ್, ತಹಶೀಲ್ದಾರ್ ಮಹೇಶ್, ಸಿ.ಐ ಲೋಕೇಶ್, ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಲೋಕಾಯುಕ್ತ ಎಸ್‌ಐ ಸುರೇಶ್ ಬಾಬು, ಕಂದಾಯ ಪರಿವೀಕ್ಷಕ ರವಿಕುಮಾರ್, ನಾಪೋಕ್ಲು ಠಾಣಾಧಿಕಾರಿ ಸದಾಶಿವ, ಪಾಡಿ ಇಗ್ಗುತ್ತಪ್ಪ ದೇವಾಲಯದ ಪಾರುಪತ್ತೆಗಾರ ಪರದಂಡ ಪ್ರಿನ್ಸ್ ತಮ್ಮಪ್ಪ, ಅರ್ಚಕರಾದ ಜಗದೀಶ್, ಶ್ರೀಕಾಂತ್, ಗುರುಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

ಸಂಭ್ರಮದ ಕನ್ನಡ ಹಬ್ಬ ಸಂಪನ್ನ



ವಿರಾಜಪೇಟೆ, ಜ.22– ಇಡೀ ದಿನ ಕನ್ನಡದ ಕಹಳೆಯನ್ನು ಮೊಳಗಿಸಿದ ಕನ್ನಡ ಹಬ್ಬ ಶನಿವಾರ ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ವಿಚಾರ ಗೋಷ್ಠಿಗಳೊಂದಿಗೆ ಸಂಪನ್ನಗೊಂಡಿತು.

ವಿರಾಜಪೇಟೆ ಬಳಿಯ ಬೇಟೋಳಿ ಮತ್ತು ಆರ್ಜಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲಾ ಆವರಣದಲ್ಲಿ ನಡೆದ ವಿರಾಜಪೇಟೆ ತಾಲೂಕು 9ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಸಮ್ಮೇಳನಾಧ್ಯಕ್ಷ ಡಾ.ಎಸ್.ವಿ. ನರಸಿಂಹನ್ ಅವರು ತಮ್ಮ ಆಶಯ ನುಡಿಗಳನ್ನಾಡಿದರು. ಸಾಹಿತ್ಯ ಪರಿಷತ್ ಜಿಲ್ಲಾ ಅಧ್ಯಕ್ಷ ಕೇಶವಕಾಮತ್ ಮಾತನಾಡಿದರು.

ಅಧಿವೇಶನದ ಅಧ್ಯಕ್ಷತೆಯನ್ನು ವಿರಾಜಪೇಟೆ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ರಾಜೇಶ್ ಪದ್ಮನಾಭ ವಹಿಸಿದ್ದರು. 'ಕಸಾಪ ತಾಲೂಕು ಕೋಶಾಧಿಕಾರಿ ಶಬರೀಶ್ ಶೆಟ್ಟಿ ಕೊಡವ ಭಾಷೆಯನ್ನು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸಬೇಕು, ಗಡಿನಾಡಿನಲ್ಲಿ ಕನ್ನಡ ಭವನಗಳನ್ನು ತೆರೆಯುವಂತಾಗಬೇಕು, ಕನ್ನಡಪರ ಚಟುವಟಿಕೆಗಳನ್ನು ಉತ್ತೇಜಿಸುವ ಸಲುವಾಗಿ ಸರ್ಕಾರದಿಂದ ಅನುದಾನ ಬಿಡುಗಡೆಗೊಳಿಸಬೇಕು, ಕನ್ನಡ ಶಾಲೆಗಳಿಗೆ ಅಗತ್ಯ ಮೂಲಭೂತ ಸೌಕರ್ಯ ಒದಗಿಸಬೇಕು, ಕೊಡಗಿನ ಕೃಷಿ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಮೂಲಕ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಬೇಕೆಂದು' ನಿರ್ಣಯ ಮಂಡಿಸಿದರು.

ವಿರಾಜಪೇಟೆ ತಾಲೂಕು ದರ್ಶನ ವಿಚಾರಗೋಷ್ಠಿಯಲ್ಲಿ ಗಡಿ ಭಾಗದ ಜನರ ಬದುಕು ಮತ್ತು ಬವಣೆ ಎಂಬ ವಿಷಯದ ಬಗ್ಗೆ ಸೋಮೆಯಂಡ ಕೌಸಲ್ಯ ಉಪನ್ಯಾಸ ನೀಡಿದರು, ಗಡಿ ಭಾಗದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಅಗತ್ಯತೆ ಬಗ್ಗೆ ಡಾ.ಡಿ.ಕೆ.ಉಷಾ ಉಪನ್ಯಾಸ ನೀಡಿದರು. ರಾಜ್‌ಕಮಾಲ್ ಸ್ಟುಡಿಯೋ ಶ್ರೀಕಾಂತ್ ರಾವ್ ಅವರಿಂದ ಕೊಡಗಿನ ಪಕ್ಷಿ ಲೋಕದ ಹಿನ್ನೋಟ, ಬಳಿಕ ಟಿ.ಡಿ.ಮೋಹನ್ ಮತ್ತು ಸಂಗಡಿಗರಿಂದ ಗಾಯನ ಕಾರ್ಯಕ್ರಮ ನಡೆಯಿತು. ನಂತರ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಕುಶಾಲನಗರದ ಉಪನ್ಯಾಸಕ ಲೀಲಾ ಕುಮಾರಿ ವಹಿಸಿದ್ದರು.

ವಿವಿದ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರನ್ನು ಇದೇ ವೇಳೆ ಸನ್ಮಾನಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಕೆ.ಪಿ.ಸಿ.ಸಿ ಕಾನೂನು ಘಟಕದ ಅಧ್ಯಕ್ಷ ಹಿರಿಯ ವಕಿಲ ಎ.ಎಸ್.ಪೊನ್ನಣ್ಣ ವಹಿಸಿದ್ದರು. ಸಾಹಿತ್ಯ ಕ್ಷೇತ್ರ–ಪುಷ್ಪಲತಾ ಶಿವಪ್ಪ, ಶಿಕ್ಷಣ ಕ್ಷೇತ್ರ–ಪೆರಿಗ್ರೀನ್ ಮಚ್ಚಾಡೋ, ಸೈನಿಕರಾದ ಭವನಿಶಂಕರ್, ವಿಶಿಷ್ಠ ಸೇವಾ ಪದಕ ಬ್ರಿಗೇಡಿಯರ್ ಪಿ.ಟಿ.ಮೊಣ್ಣಪ್ಪ, ಸಹಕಾರ ಕ್ಷೇತ್ರ–ಚಂದಪಂಡ ಬಿ.ನಂಜಪ್ಪ, ಪತ್ರಿಕಾರಂಗದಿಂದ ಡಿ.ಮಂಜುನಾಥ್, ಜಾನಪದ ಕ್ಷೇತ್ರ–ಕುಡಿಯರ ಗೋಪಮ್ಮ, ರಂಗಭೂಮಿಯಿಂದ ತಾತಂಡ ಪ್ರತಾಪ್ ಮತ್ತು ಕೆಜಿ.ನಿಖಿಲ್ ಜೋಸೆಫ್, ಕಬ್ಬಡಿ– ಭರತ್ ಎಂ.ಆರ್.ದೇಶಸೇವೆ ಪಟ್ರಪಂಡ ಮೊಣ್ಣಪ್ಪ ಸೇರಿದಂತೆ ಮತ್ತಿತರರು ಹಾಗೂ ಕನ್ನಡ ಭಾಷಾ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಸಮ್ಮೇಳನ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

ಹನೂರು ಕ್ಷೇತ್ರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ಹನೂರು, ಜ.22– ತಾಲೂಕಿನ ವಿವಿಧ ಗ್ರಾಮಗಳಲ್ಲಿ ಶಾಸಕ ಆರ್. ನರೇಂದ್ರ ಅವರು ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದರು.

ತಾಲೂಕಿನ ಎಲ್ಲೇಮಾಳ, ಕೆ.ವಿ.ಎನ್. ದೊಡ್ಡಿ, ಚಂಗವಾಡಿ ಗ್ರಾಮಗಳಲ್ಲಿ ಸಿ.ಸಿ.ರಸ್ತೆ, ಚರಂಡಿ ಕಾಮಗಾರಿ, ವೈಸಂ ಪಾಳ್ಯ ಗ್ರಾಮದ ರಸ್ತೆಯಲ್ಲಿ ಸೇತುವೆ ನಿರ್ಮಾಣ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಸುದ್ದಿಗಾರರೊಡನೆ ಮಾತನಾಡಿ, ಮುಖ್ಯಮಂತ್ರಿಗಳ ವಿಶೇಷ ಪ್ರದೇಶಾಭಿವೃದ್ಧಿ ಯೋಜನೆಯಡಿ 25 ಕೋಟಿ ರೂ.ಗಳ ಅನುದಾನದಲ್ಲಿ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಬಹುಶಃ ಈ ಅನುದಾನ ಕೊನೆಯದ್ದಾಗಿದ್ದು, ಆದ್ಯತೆ ಮೇರೆಗೆ ಕ್ಷೇತ್ರ ವ್ಯಾಪ್ತಿಯಲ್ಲಿ ಅಭಿವೃದ್ಧಿಗೆ ಒತ್ತು ನೀಡಲಾಗಿದೆ ಎಂದರು. ವಿಶೇಷವಾಗಿ ಪಿಡಬ್ಲ್ಯೂಡಿ ಇಲಾಖೆಯಿಂದ ವೈಶಂಪಾಳ್ಯ ರಸ್ತೆಯಲ್ಲಿ ಬರುವ ಹಳ್ಳಕ್ಕೆ ಸೇತುವೆ ನಿರ್ಮಾಣವನ್ನು ಕೈಗೊಳ್ಳಲಾಗಿದೆ. ಕಾಮಗಾರಿಗಳು ಶೀಘ್ರದಲ್ಲಿ ಪೂರ್ಣಗೊಂಡು ಜನತೆಗೆ ಅನುಕೂಲವಾಗಲಿದೆ ಎಂದ ಅವರು ಡಾಂಬರು ರಸ್ತೆ ಕಾಮಗಾರಿಯನ್ನು ತೆಳ್ಳನೂರು ಬಂಡಳ್ಳಿ ರಸ್ತೆ, ಮಾರ್ಟಳ್ಳಿ ರಸ್ತೆ, ಭದ್ರಯ್ಯನಹಳ್ಳಿ ರಸ್ತೆಗಳಲ್ಲಿ ಶೀಘ್ರವಾಗಿ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಕಾಂಗ್ರೆಸ್ ಶಾಸಕ ಎಂಬ ಕಾರಣದಿಂದ ನಮ್ಮ ಕ್ಷೇತ್ರಕ್ಕೆ ತಾರತಮ್ಯವನ್ನು ಮಾಡಲಾಗಿದೆ. ಹಾಗಾಗಿ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗಿಲ್ಲ. ಇನ್ನು ಕೆಲವೇ ದಿನಗಳಲ್ಲಿ ಚುನಾವಣೆ ಬರಲಿದ್ದು, ದೇವರ ದಯೆಯಿಂದ ಒಳ್ಳೆಯದಾದರೆ ಉಳಿದ ಕೆಲಸಗಳನ್ನು ಪೂರ್ಣಗೊಳಿಸಲಾಗುವುದು. ನೀವೆಲ್ಲರೂ ನನ್ನನ್ನು ಮತ್ತೊಮ್ಮೆ ಜಯಶೀಲರನ್ನಾಗಿ ಮಾಡಿ ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ವಿವಿಧ ಗ್ರಾಮಗಳ ಸ್ಥಳೀಯ ಚುನಾಯಿತ ಜನಪ್ರತಿನಿಧಿಗಳು, ಮುಖಂಡರುಗಳು ಸಾರ್ವಜನಿಕರು ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಮತ್ತೊಮ್ಮೆ ರಾಜ್ಯದ ಸಿಎಂ ಆಗಬೇಕು

ಸಿದ್ದರಾಮಯ್ಯ ನಿವೃತ್ತಿ ಹೊಂದಿದರೆ ನಾನು ಕೂಡ ನಿವೃತ್ತಿಯಾಗುವೆ: ಶಾಸಕ ಪುಟ್ಟರಂಗಶೆಟ್ಟಿ



ಚಾಮರಾಜನಗರ, ಜ. 22– ಹಿಂದುಳಿದ ವರ್ಗಗಳ ಹರಿಕಾರರು, ನನ್ನ ನೆಚ್ಚಿನ ನಾಯಕರಾದ ಸಿದ್ದರಾಮಯ್ಯ ಅವರು ಮತ್ತೊಮ್ಮೆ ರಾಜ್ಯದ ಮುಖ್ಯಮಂತ್ರಿ ಆಗಬೇಕು ಎಂದು ಮಾಜಿ ಸಚಿವ ಹಾಗೂ ಹಾಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಪ್ರತಿಪಾದಿಸಿದರು.

ನಗರದ ಬಿ.ರಾಚಯ್ಯ ಜೋಡಿರಸ್ತೆಯಲ್ಲಿರುವ ತಾಲೂಕು ಕುರುಬರ ಸಂಘದ ಕಟ್ಟಡದಲ್ಲಿ ಕಾಳಿದಾಸ ನೂತನ ವಿದ್ಯಾರ್ಥಿ ನಿಲಯದ ನಾಲ್ಕು ಅಂತಸ್ತಿನ ಕಟ್ಟಡ, ಶ್ರೀ ಕನಕ ವಾಣಿಜ್ಯ ಸಂಕೀರ್ಣದ ಮೊದಲ ಅಂತಸ್ತಿನ ಉದ್ಘಾಟನೆ ಹಾಗೂ ಚುನಾಯಿತ ಪ್ರತಿನಿಧಿಗಳು ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

2013ರಲ್ಲಿ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ 5 ವರ್ಷಗಳ ಕಾಲ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಹೆಚ್ಚಿನ ಒತ್ತು ನೀಡಿದರು. ಅವರ ಅವಧಿಯಲ್ಲಿ ತಾಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಹಿಂದುಳಿದ ವರ್ಗಗಳ ಸಮುದಾಯ ಭವನಗಳು ನಿರ್ಮಾಣಕ್ಕಾಗಿ ಹೆಚ್ಚಿನ ಅನುದಾನ ನೀಡಿದರು. ನನ್ನ ಕ್ಷೇತ್ರದಲ್ಲಿ ತಾಲೂಕು ಕುರುಬರ ಸಂಘದ ಸಮುದಾಯ ಭವನಕ್ಕೆ 1 ಕೋಟಿ, ಉಪ್ಪಾರ ಸಮುದಾಯ ಭವನಕ್ಕೆ 2 ಕೋಟಿ ಅಲ್ಲದೆ ಗ್ರಾಮಾಂತರ ಪ್ರದೇಶದಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಆದ್ಯತೆ ನೀಡಿದ್ದರು. ಹೀಗಾಗಿ ಅವರು ಮತ್ತೆ ಮುಖ್ಯಮಂತ್ರಿ ಆದರೆ ಸಾಮಾಜಿಕ ನ್ಯಾಯ ದೊರೆಯುವುದರಲ್ಲಿ ಸಂದೇಹ ಇಲ್ಲ ಎಂದರು.

ಉಪ್ಪಾರ ಸಮುದಾಯದವನಾದ ನಾನು ಮೂರು ಬಾರಿ ಶಾಸಕನಾಗಲು ಸಿದ್ದರಾಮಯ್ಯ ಅವರ ಕೊಡುಗೆ ಅಪಾರವಿದೆ. ಅವರ ಜೊತೆಯಲ್ಲಿ ನಾನು ಬೆಳೆದೆ. ಉಪ್ಪಾರ ಸಮಾಜವನ್ನು ಎಸ್‌ಟಿಗೆ ಸೇರಿಸಲು ಕುಲ ಶಾಸ್ತ್ರೀಯ ಆಧ್ಯಯನಕ್ಕೆ ಅವಕಾಶ ಮಾಡಿ ಕೊಟ್ಟಿದ್ದರು. ಈಗ ಕುಲಶಾಸ್ತ್ರೀಯ ಅಧ್ಯಯನ ಪೂರ್ಣಗೊಂಡಿದೆ. ಅವರ ಅವಧಿಯಲ್ಲಿ ಪೂರ್ಣಗೊಂಡಿದ್ದರೆ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿ ಎಸ್ ಟಿಗೆ ನಮ್ಮ ಸಮಾಜವನ್ನು ಸೇರ್ಪಡೆ ಮಾಡುತ್ತಿದ್ದರು. 2023ರಲ್ಲಿ ಸಿದ್ದರಾಮಯ್ಯನವರು ಗೆದ್ದು ಮುಖ್ಯಮಂತ್ರಿಯಾಗಬೇಕು ಎಂದರು.

ನಗರದ ಹೃದಯ ಭಾಗದಲ್ಲಿ ಇಷ್ಟೊಂದು ಪ್ರಮಾಣದ ಜಾಗ ಮಾಡಿಕೊಟ್ಟ ಸಮಾಜದ ಹಿರಿಯರಾದ ಬೆಣ್ಣೆ ರಾಮೇಗೌಡ, ನಂಜೇಗೌಡ ಅವರನ್ನು ಎಲ್ಲರೂ ಸ್ಮರಿಸಿಕೊಳ್ಳಬೇಕು. 1967ರಲ್ಲಿ ದೂರದೃಷ್ಟಿ ವಹಿಸುವ ಮೂಲಕ ಸಮಾಜಕ್ಕೆ ದೊಡ್ಡ ಕೊಡುಗೆಯಾಗಿದೆ. ಅದನ್ನು ಉಳಿಸಿ – ಬೆಳೆಸುವುದು ನಮ್ಮೆಲ್ಲರ ಕೊಡುಗೆಯಾಗಿದೆ ಎಂದರು.

ಮುಂದಿನ ದಿನಗಳಲ್ಲಿ ಸಹಕಾರ ಸಂಘ ಸ್ಥಾಪನೆ: ಅಧ್ಯಕ್ಷತೆ ವಹಿಸಿದ್ದ ಸಂಘದ ಉಪಾಧ್ಯಕ್ಷ ಆರ್.ಉಮೇಶ್ ಮಾತನಾಡಿ, ನಿಮ್ಮೆಲ್ಲರ ಸಹಕಾರದಿಂದ ಕುರುಬರ ಸಂಘದಿಂದ ವಿದ್ಯಾರ್ಥಿ ನಿಲಯ, ಅಂಗಡಿ ಮಳಿಗೆ ಉದ್ಘಾಟನೆಯಾಗಿದೆ. 5 ವರ್ಷಗಳ ಶ್ರಮ ಸಾರ್ಥಕಗೊಂಡಿದೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಹಾಸ್ಟೆಲ್ ನಿರ್ಮಾಣಕ್ಕೆ 50 ಲಕ್ಷ ರೂ. ಮಂಜೂರು ಮಾಡಿದ್ದರು. ಕನಕ ಸಮುದಾಯ ಭವನಕ್ಕೆ 1 ಕೋಟಿ ರೂ. ನೀಡಿದ್ದರು. ಮತ್ತೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾದರೆ ಭವನ ಉದ್ಘಾಟನೆಯಾಗುತ್ತದೆ. ಅದೇ ರೀತಿಯಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಹಿಂದುಳಿದ ವರ್ಗಗಳ ಸಚಿವರಾಗಿದ್ದಾಗ ಸಮುದಾಯಕ್ಕೆ 100 ಕೊಳವಿ ಬಾವಿ, ಅನೇಕ ಸವಲತ್ತುಗಳನ್ನು ಕಲ್ಪಿಸಿಕೊಟ್ಟಿದ್ದಾರೆ ಎಂದರು.

ಸಂಘದ ಅಭಿವೃದ್ಧಿ ಜೊತೆಗೆ ಮುಂದಿನ ದಿನಗಳಲ್ಲಿ ಸಿರಗಳ್ಳಿ ಶ್ರೀ ಲಕ್ಷ್ಮಿದೇವಿ ದೇವಸ್ಥಾನ ಸೋಮೇಶ್ವರ ದೇವಸ್ಥಾನ ಜೀರ್ಣೋದ್ದಾರ ಹಾಗೂ ಸಹಕಾರ ಬ್ಯಾಂಕ್ ಸ್ಥಾಪನೆ ಮಾಡಲಾಗುವುದು ಎಂದರು.

ಸನ್ಮಾನ, ಪ್ರತಿಭಾ ಪುರಸ್ಕಾರ: ಇದೇ ಸಂದರ್ಭದಲ್ಲಿ ಸಮುದಾಯದ ಗ್ರಾಪಂ ಸದಸ್ಯರುಗಳಿಗೆ ಸನ್ಮಾನ ಹಾಗೂ ಪ್ರತಿಭಾವಂತ ಮಕ್ಕಳಿಗೆ ಪುರಸ್ಕಾರ ನೀಡಿ, ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಘದ ಗೌರವ ಅಧ್ಯಕ್ಷ ಡಿ.ಸೋಮಣ್ಣೇಗೌಡ, ಕನಕ ನೌಕರರ ಸಂಘದ ಅಧ್ಯಕ್ಷ ನಿಂಗೇಗೌಡ, ಪ್ರಧಾನ ಕಾರ್ಯದರ್ಶಿ ಕೆ.ಪಿ.ನಾಗರಾಜು, ಖಜಾಂಚಿ ಕುದೇರು ಲಿಂಗಣ್ಣ, ಸಹ ಕಾರ್ಯದರ್ಶಿ ಮಣಿಕಂಠ, ಸಂಘಟನಾ ಕಾರ್ಯದರ್ಶಿ ಶಂಕರ್, ಮಾಜಿ ಅಧ್ಯಕ್ಷ ಎಸ್.ರಾಜಶೇಖರ್, ನಿರ್ದೇಶಕರಾದ ಕಾಳನಹುಂಡಿ ಬಸವರಾಜು, ಮಹದೇವ ಸ್ವಾಮಿ, ಮಾದಪ್ಪ, ಶಾರದಮ್ಮ, ಸೋಮಣ್ಣ, ಮಹದೇವಸ್ವಾಮಿ, ಮುಖಂಡರಾದ ಮಹೇಶ್, ಸ್ವಾಮಿ, ಮಾದಾಪುರ ರವಿ, ಶಿಕ್ಷಕ ಬಸವರಾಜು ಇತರರು ಹಾಜರಿದ್ದರು.

ಎಂಬಿಬಿಎಸ್ ಮಾಡಿ ಸೇವೆಗೆ ಸಜ್ಜಾದ ಒಂದೇ ಕುಟುಂಬದ ಮೂವರು, ನ್ಯಾಯಾಧೀಶರಿಗೆ ಸನ್ಮಾನ



ಚಾಮರಾಜನಗರ, ಜ.22– ಎಂಬಿಬಿಎಸ್ ಮಾಡಿ ಜನರಸೇವೆಗೆ ಸಜ್ಜಾದ ತಾಲೂಕಿನ ಚಿಕ್ಕಮೂಡಹಳ್ಳಿ ಗ್ರಾಮದ ಒಂದೇ ಕುಟುಂಬದ ಮೂವರಾದ ರಾಮಕೃಷ್ಣನ್, ದಿವ್ಯ ಸೌಂದರಿ, ಶಿವರಂಜಿನಿ ಹಾಗೂ ನ್ಯಾಯಾಧೀಶರಾಗಿ ಆಯ್ಕೆಯಾದ ಚಂದುಕಟ್ಟೆ ಮೋಳೆ ಗ್ರಾಮದ ಶಂಕರ ಅವರನ್ನು ಜಿಲ್ಲಾ ಉಪ್ಪಾರ ಯುವಕರ ಸಂಘದ ವತಿಯಿಂದ ಸನ್ಮಾನಿಸಲಾಯಿತು.

ನಗರದ ಭ್ರಮರಾಂಬ ಬಡಾವಣೆಯ ಕವೇರಿಯೊಂದರಲ್ಲಿ ನಡೆದ ಸರಳ ಸಮಾರಂಭದಲ್ಲಿ ಸಂಘದ ವಾರ್ಷಿಕ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಸನ್ಮಾನಿಸಿದ ಗ್ರಾಮಾಂತರ ಪೊಲಿಸ್ ಠಾಣೆಯ ವೃತ್ತ ನಿರೀಕ್ಷಕ ಚಿಕ್ಕರಾಜಶೆಟ್ಟಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಸಮುದಾಯದ ವಿದ್ಯಾರ್ಥಿಗಳು ಉನ್ನತ ಹುದ್ದೆಗಳ ಅಲಂಕರಿಸುತ್ತಿರುವುದು ತುಂಬಾ ಸಂತಸ ತಂದಿದೆ ಎಂದರು. ಶ್ರಮಪಟ್ಟು ಓದಿದರೆ ಏನನ್ನು ಸಾಧಿಸಬಹುದು ಎಂಬುವುದನ್ನು ಸಮುದಾಯದ ವಿದ್ಯಾರ್ಥಿ ಸಾಧನೆ ಮಾಡಿ ತೋರಿಸಿಕೊಟ್ಟಿದ್ದಾರೆ ಅ ನಿಟ್ಟಿನಲ್ಲಿ ತಾಲೂಕಿನ ಚಿಕ್ಕಮೂಡಹಳ್ಳಿ ಗ್ರಾಮದ ಒಂದೇ ಕುಟುಂಬದ ಮೂವರಾದ ರಾಮಕೃಷ್ಣನ್, ದಿವ್ಯಸೌಂದರಿ, ಶಿವರಂಜಿನಿ ಎಂಬಿಬಿಎಸ್ ಪಾಸ್ ಮಾಡಿದ್ದಾರೆ. ಅದೇ ರೀತಿಯಲ್ಲಿ ಚಂದುಕಟ್ಟೆಮೋಳೆ ಗ್ರಾಮದ ಶಂಕರ ಸತತ ಪರಿಶ್ರಮದ ಮೂಲಕ ನ್ಯಾಯಾಧೀಶರಾಗಿ ಆಯ್ಕೆಯಾಗಿದ್ದು, ಜನರ ಸೇವೆಗೆ ಮುಂದಾಗಿರುವುದು ಸಮಾಜದ ಹಿರಿಮೆ ಹೆಚ್ಚಿದೆ ಇವರನ್ನು ಆದರ್ಶವಾಗಿಟ್ಟುಕೊಂಡು ಸಮುದಾಯದ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಬೇಕು ಎಂದು ಮನವಿ ಮಾಡಿದರು. ಸಂಘದ ಅಧ್ಯಕ್ಷ ಜಯಕುಮಾರ್ ಮಾತನಾಡಿ, ಸಂಘದ ಕಾರ್ಯಕ್ರಮಗಳು ಮತ್ತು ಕೊಡುಗೆಗಳನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ವೃತ್ತ ನಿರೀಕ್ಷಕ ಕೆ.ಎಂ. ಮಹದೇವಶೆಟ್ಟಿ, ಸಬ್‌ಇನ್‌ಪೆಕ್ಟರ್ ಹನುಮಂತ ಉಪ್ಪಾರ್, ಐಟಿಐ ಕಾಲೇಜು ಪ್ರಾಂಶುಪಾಲ ಟಿ.ಎಂ. ರಂಗಸ್ವಾಮಿ, ಈರೋಡ್ ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯಂ, ತಾಲೂಕು ಉಪ್ಪಾರ ನೌಕರರ ಸಂಘದ ಅಧ್ಯಕ್ಷ ಸೋಮಣ್ಣ ರಾಮಸಮುದ್ರ, ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಸ್. ನಾಗರಾಜು, ಉಪಾಧ್ಯಕ್ಷ ಸ್ವಾಮಿ, ಶಿವಕುಮಾರ್, ಮಹದೇವಸ್ವಾಮಿ, ಬಾಗಳಿ ಮಹದೇವಸ್ವಾಮಿ, ಬಂಗಾರು, ಮಂಜುನಾಥ್, ಕೋಡಿಮೋಳೆ ರಂಗಸ್ವಾಮಿ, ಸಂಪತ್, ಗೋವಿಂದ, ನಿಟ್ರೆ ನಾಗರಾಜು, ಬ್ಯಾಡಮೂಡ್ಲು ಮರಿಸ್ವಾಮಿ ಇತರರು ಹಾಜರಿದ್ದರು.

ಕೇಂದ್ರೀಯ ವಿದ್ಯಾಲಯದಲ್ಲಿ ಶಾಲಾ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ

ಚಾಮರಾಜನಗರ, ಜ.22– ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ಜನ್ಮ ವರ್ಷಾಚರಣೆ ಅಂಗವಾಗಿ ಆಚರಿಸಲಾಗುವ 'ಪರಾಕ್ರಮ ದಿನ'ದ ಭಾಗವಾಗಿ ನಗರದ ಹೊರವಲಯದ ಮಾದಾಪುರದಲ್ಲಿರುವ ಕೇಂದ್ರಿಯ ವಿದ್ಯಾಲಯದಲ್ಲಿ ಸೋಮವಾರ ಶಾಲಾ ಮಕ್ಕಳಿಗಾಗಿ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದೆ.

'ಮಕ್ಕಳಲ್ಲಿರುವ ಸೃಜನಶೀಲ ಯೋಚನೆಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಕೇಂದ್ರ ಶಿಕ್ಷಣ ಇಲಾಖೆ ದೇಶದಾದ್ಯಂತ ಸೋಮವಾರ ವಿವಿಧ ಚಟುವಟಿಕೆಗಳನ್ನು ಆಯೋಜಿಸಿದೆ. ಮಕ್ಕಳು ಪರೀಕ್ಷಾ ಒತ್ತಡವನ್ನು ನಿಭಾಯಿಸಲು ನೆರವು ನೀಡುವುದಕ್ಕಾಗಿ ದೇಶದಾದ್ಯಂತ 500 ಕೇಂದ್ರೀಯ ವಿದ್ಯಾಲಯಗಳಲ್ಲಿ ಸೋಮವಾರ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದೆ' ಎಂದು ಕೇಂದ್ರೀಯ ವಿದ್ಯಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಬರೆದಿರುವ 'ಎಕ್ಸಾಮ್ ವಾರಿಯರ್' (ಪರೀಕ್ಷಾ ಯೋಧ) ಆಧಾರಿತವಾಗಿ ಚಿತ್ರಕಲಾ ಸ್ಪರ್ಧೆ ನಡೆಯಲಿದೆ. ರಾಜ್ಯ ಪಠ್ಯ ಕ್ರಮ, ಸಿಬಿಎಸ್‌ಇ ಸೇರಿದಂತೆ ಜಿಲ್ಲೆಯಾದ್ಯಂತ ವಿವಿಧ ಶಾಲೆಗಳ 70, ಕೇಂದ್ರೀಯ ವಿದ್ಯಾಲಯದ 20 ಹಾಗೂ ನವೋದಯ ಶಾಲೆಯ 10 ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ. ಬೆಳಿಗ್ಗೆ 10ರಿಂದ 12ರವರೆಗೆ ಸ್ಪರ್ಧೆ ನಡೆಯಲಿದೆ.

ಐದು ಅತ್ಯುತ್ತಮ ಚಿತ್ರಗಳಿಗೆ ಸ್ವಾತಂತ್ರ ಸೇನಾನಿಗಳು, ರಾಷ್ಟ್ರೀಯ ಮಹತ್ವದ ಕುರಿತ ಪುಸ್ತಕಗಳು ಹಾಗೂ ಪ್ರಮಾಣ ಪತ್ರ ನೀಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ರಸ್ತೆ ದುರಸ್ತಿಗೆ ಆಗ್ರಹಿಸಿ ಕಾಂಗ್ರೆಸ್ ಪ್ರತಿಭಟನೆ



ಯಳಂದೂರು, ಜ.22– ತಾಲೂಕಿನ ಗುಂಬಳ್ಳಿ ಗ್ರಾಮದಿಂದ ಕೊಳ್ಳೇಗಾಲ ತಾಲೂಕಿನ ಮುಡಿಗುಂಡ ಗ್ರಾಮದವರೆಗಿನ ರಸ್ತೆಯನ್ನು ದುರಸ್ತಿಪಡಿಸುವಂತೆ ಒತ್ತಾಯಿಸಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಮಾಜಿ ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಸ್. ಬಾಲರಾಜು ನೇತೃತ್ವದಲ್ಲಿ ತಾಲೂಕಿನ ಶಿವಕಳ್ಳಿ ಗ್ರಾಮದಲ್ಲಿ ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಈ ರಸ್ತೆ ಹಲವು ವರ್ಷಗಳಿಂದಲೂ ನೆನೆಗುದಿಗೆ ಬಿದ್ದಿದೆ. ಇದರ ದುರಸ್ತಿಗೆ ಹಾಲಿ ಶಾಸಕ ಎನ್. ಮಹೇಶ್ ನಿರ್ಲಕ್ಷ್ಯ ವಹಿಸಿದ್ದಾರೆ. ಇವರು ಕ್ಷೇತ್ರಕ್ಕೆ ಹೊಸದಾಗಿ ಸಾಕಷ್ಟು ಪ್ರಮಾಣದಲ್ಲಿ ಅನುದಾನವನ್ನು ತರುವಲ್ಲಿ ವಿಫಲವಾಗಿದ್ದಾರೆ. ಇವರ ಕಾಲದಲ್ಲಿ ನಡೆದಿರುವ ಬಹುತೇಕ ಕಾಮಗಾರಿಗಳು ಈ ಹಿಂದಿನ ಸಿದ್ಧರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಮಾಜಿ ಶಾಸಕ ಎಸ್. ಜಯಣ್ಣ ತಂದಿದ್ದ ಕೆಲಸಗಳೇ ಸೇರಿವೆ. ಈ ರಸ್ತೆ ತುಂಬೆಲ್ಲಾ ಗುಂಡಿಗಳು ಬಿದ್ದಿದ್ದು ಈ ಭಾಗದಲ್ಲಿ ವಾಹನ ಸಂಚಾರ ದುಸ್ತರವಾಗಿದೆ ಎಂದರು.

ಮಾಜಿ ಶಾಸಕ ಎಸ್. ಬಾಲರಾಜು ಮಾತನಾಡಿ, ಕ್ಷೇತ್ರದ ಶಾಸಕರು ಜನರ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ರಾಜ್ಯದ ಬಿಜೆಪಿ ಸರ್ಕಾರದಂತೆ ಇವರೂ ಕೂಡ 40 ಪರ್ಸೆಂಟ್ ಶಾಸಕರಾಗಿ ಪರಿವರ್ತನೆಯಾಗಿದ್ದಾರೆ. ಅಧಿಕಾರದ ಆಸೆಗಾಗಿ ಪಕ್ಷಾಂತರ ಮಾಡಿರುವ ಇವರಿಂದ ಕ್ಷೇತ್ರದ ಜನರು ಅಭಿವೃದ್ಧಿ ನಿರೀಕ್ಷಿಸುವುದು ಕಷ್ಟವಾಗಿದೆ. ಇಷ್ಟು ವರ್ಷ ಸುಮ್ಮನಿದ್ದ ಇವರು ಈಗ ಕ್ಷೇತ್ರ ಸಂಚಾರ ಮಾಡುತ್ತಿದ್ದಾರೆ. ಆದರೆ ಜನರು ಇವರನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದು ಮುಂದಿನ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ಗೌಡಹಳ್ಳಿ ಗ್ರಾಪಂ ಉಪಾಧ್ಯಕ್ಷ ರಘು, ಸದಸ್ಯರಾದ ಸುಂದರ್, ಉಮೇಶ್ ಮುಖಂಡರಾದ ಪ್ರಭುಸ್ವಾಮಿ, ಕಿನಕಹಳ್ಳಿ ಪ್ರಭುಪ್ರಸಾದ್, ನಾಗೇಂದ್ರ, ಸತೀಶ್, ಆನಂದ್, ಪಂಜು, ಮಹದೇವಸ್ವಾಮಿ, ಚಂದ್ರು, ರಾಘವೇಂದ್ರ, ರಾಜೇಶ್, ಮಾದೇಗೌಡ, ಚಂದ್ರು, ಯೋಗೇಂದ್ರ ಗೌಡ ಸೇರಿದಂತೆ ಮುಖಂಡರು ಹಾಜರಿದ್ದರು.

ಇಂದು ಸರ್ಕಾರಿ ಸವಲತ್ತುಗಳ ಅದಾಲತ್

ಮೈಸೂರು, ಜ.22– ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ಹಮ್ಮಿಕೊಂಡಿರುವ ವಿಶೇಷ ಸರ್ಕಾರಿ ಸೌಲಭ್ಯಗಳ ಅದಾಲತ್ ನಾಳೆ(ಜ.23) 53ನೇ ವಾರ್ಡ್‌ನಲ್ಲಿ ನಡೆಯಲಿದೆ. ಸಿದ್ಧಾರ್ಥನಗರ, ಎಂಆರ್‌ಸಿ ಕಣ್ಣಿನ ಆಸ್ಪತ್ರೆ ರಸ್ತೆ, ವಿನಯ ಮಾರ್ಗದ ಸಿಐಟಿಬಿ ಛತ್ರದಲ್ಲಿ ಬೆಳಗ್ಗೆ 10.30ಕ್ಕೆ ಸರ್ಕಾರಿ ಸವಲತ್ತುಗಳ ಅದಾಲತ್, ವಾರ್ಡಿನ ಸಮಸ್ಯೆಗಳ ಪರಿಹಾರ ಕಾರ್ಯಕ್ರಮದ ಜೊತೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನೂ ಏರ್ಪಡಿಸಲಾಗಿದೆ. ವಿಧವಾವೇತನ, ಇಂದಿರಾಗಾಂಧಿ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ, ವಿಕಲಚೇತನರ ಪಿಂಚಣಿ, ಇ–ಶ್ರಮ್ ಕಾರ್ಡ್ ಸೇರಿದಂತೆ ವಿವಿಧ ಸೌಕರ್ಯಗಳ ಬಗ್ಗೆ ಮಾಹಿತಿ ತಿಳಿಯುವುದರ ಜೊತೆಗೆ ಅಗತ್ಯ ದಾಖಲೆಗಳನ್ನು ಹೊಂದಿದ್ದರೆ ಸೌಲಭ್ಯಕ್ಕೆ ಅರ್ಜಿ ಹಾಕಬಹುದು ಎಂದು ಪ್ರಕಟಣೆ ತಿಳಿಸಿದೆ.

ಒಂದನೇ ಪುಟದಿಂದ

ಸುಸಂಸ್ಕೃತ ಸಮಾಜ ಸಾಧ್ಯ

ಕೀಳುಮಟ್ಟದಲ್ಲಿ ಮಾತನಾಡುವುದು ಯಾವ ಧರ್ಮ? ಯಾವ ಆದರ್ಶ? ವಿರೋಧಗಳನ್ನೂ ಸಹ ಸುಸಂಸ್ಕೃತವಾಗಿ ಮಾಡಬಹುದು. ಅದನ್ನು ಬಿಟ್ಟು ಅವಹೇಳಕಾರಿಯಾಗಿ ಮಾತನಾಡುವುದು ಯಾವ ಭಾಷೆ. ನುಡಿದರೆ ಮುತ್ತಿನ ಹಾರದಂತಿರಬೇಕು ಎಂದು ಬಸವಣ್ಣರವರು ಹೇಳುತ್ತಾರೆ. ಈ ನೀತಿಯನ್ನು 800 ವರ್ಷಗಳ ಹಿಂದೆಯೇ ಮನುಷ್ಯ ಜೀವನದಲ್ಲಿ ಅಳವಡಿಸಿಕೊಳ್ಳವಂತೆ ಹೇಳಿದ್ದಾರೆ. ನಮ್ಮ ಭಾವನೆಗಳನ್ನು ಘಾಸಿಗೊಳಿಸುವುದು ನೆನ್ನೆ ಮೊನ್ನೆಯದಲ್ಲ ಬಹಳ ಹಿಂದಿನಿಂದಲೂ ಬೆಳೆದು ಬಂದಿದೆ. ಬಸವಣ್ಣನವರನ್ನು ಕಲ್ಯಾಣದಿಂದ ಓಡಿಸಿದರೂ ಸಹ ಅವರ ವಿಚಾರ ಇಂದಿಗೂ ಜೀವಂತವಾಗಿದೆ. ಅವರ ವಿಚಾರಗಳಲ್ಲಿ ಜಯವಿದೆ ಎಂಬುದನ್ನು ಅರಿಯಬೇಕು.

ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್ ಜೀ ಮಾತನಾಡಿ, ಶ್ರೀಲಂಕಾ ದೇಶದಲ್ಲಿ ಸಂಸ್ಕೃತಿಗೆ ಧಕ್ಕೆಯಾಯಿತು ಎಂಬ ಕಾರಣಕ್ಕಾಗಿ ಜನರು ಧಂಗೆ ಎದ್ದು ಹೋರಾಟ ನಡೆಸಿ ಸರ್ಕಾರವನ್ನು ಕಿತ್ತಾಕಿ ರಾಷ್ಟ್ರಾಧ್ಯಕ್ಷರನ್ನು ಬದಲಾವಣೆ ಮಾಡಿದರು. ಭಾರತ ದೇಶದಲ್ಲಿ ಅಂತಹ ಪ್ರಸಂಗ ಎದುರಾಗುವುದಿಲ್ಲ, ಅವರ ಭಾವನೆಗಳಿಗೆ ಧಕ್ಕೆಯಾದರೂ ಸಹ ಚುನಾವಣೆ ಬರುವವರೆಗೆ ಕಾದು ಆರೋಗ್ಯ ಕರ ರೀತಿಯಲ್ಲಿ ಸಮಾಜವನ್ನು ಬದಲಾವಣೆ ಮಾಡುತ್ತಾರೆ. ಕೊರೋನಾ ಕಾಲದಲ್ಲಿ ರಾಜ್ಯದಿಂದ ರಾಜ್ಯಕ್ಕೆ ನೂರಾರು ಕಿಮೀ ದೂರ ಕಲ್ನಡಿಗೆಯಲ್ಲಿ ನಡೆದರೂ ಸಹ ಶಾಂತಿ ಕಳೆದುಕೊಳ್ಳಲಿಲ್ಲ, ಎಲ್ಲೂ ಗೋಲಿಬಾರ್ ನಡೆಯಲಿಲ್ಲ, ದುಃಖದ ಮಧ್ಯೆ ದಲ್ಲಿಯೂ ಕೂಡ ಸಮಾಧಾನದಿಮದ ವರ್ತಿಸಿದ್ದಾರೆ. ಬೇರೆ ದೇಶದಲ್ಲಿ ಇಂತಹ ಪ್ರಸಂಗ ನಡೆದಿದ್ದರೆ ದಾರಿಯಲ್ಲಿ ಬೆಂಕಿ ಹಚ್ಚುತ್ತಿದ್ದರು. ಕೇವಲ ಸರ್ಕಾರದ ಆಡಳಿತ, ಕಾನೂನಿನ ಪೊಲೀಸರ ಹೆದರಿಕೆಯಿಂದ ಸಮಾಜ ಶಾಂತವಾಗಿಲ್ಲ, ಎಲ್ಲರೂ ಧರ್ಮದ ತಳಹದಿಯ ಮೇಲೆ ಕೆಲಸ ಮಾಡುತ್ತಿರುವ ಕಾರಣ ಸಮಾಜ ಶಾಂತವಾಗಿದೆ. ಭಾರತ ದೇಶದಲ್ಲಿ ಸುತ್ತೂರು ಕ್ಷೇತ್ರಗಳಂತಹ ಲಕ್ಷಾಂತರ ಮಠಮಾನ್ಯಗಳು, ಶ್ರದ್ಧಾ ಭಕ್ತಿ ಕೇಂದ್ರಗಳು ಜಾತಿ ಗಡಿಯನ್ನು ಮೀರಿ, ಬೌಗೋಳಿಕ ಸೇಮೆ ಗಡಿಯನ್ನೂ ದಾಟಿ ಸಾಮಾಜಿಕ ಸಂದೇಶ ಸಾರುವ ಮೂಲಕ ಸದಾಚಾರ, ದುರಾಚಾರಗಳನ್ನು ತಿಳಿಸಿ ಮನುಷ್ಯನ ಮಾನಸಿಕತೆಯ ಸುಸ್ಥಿರತೆಯನ್ನು ಕಾಪಾಡುವಂತಹ ಕೆಲಸ ಮಾಡುತ್ತಿವೆ. ಆದ್ದರಿಂದಲೇ ದೇಶದಲ್ಲಿ ಶಾಂತಿ ನೆಲೆಸಿದೆ. ಸುತ್ತೂರು ಜಾತ್ರೆ ಜಾತಿ ಧರ್ಮದ ಎಲ್ಲೆಯನ್ನು ಮೀರಿ ಸಮಾಜವನ್ನು ಒಗ್ಗೂಡಿಸಿದೆ. ಸಮಾಜವನ್ನು ಸಂಘ ಟಿಸಲು ಇಂತಹ ಚಟುವಟಿಕೆಗಳು ಬೇಕು ಇಂತಹ ಜಾತ್ರೆ ಸಂಘಟಿಸಿರುವ ಸುತ್ತೂರು ಶ್ರೀಗಳಿಗೆ ಸಾಷ್ಟಾಂಗ ನಮಸ್ಕಾರ ಸಲ್ಲಿಸುತ್ತೇನೆ ಎಂದರು.

ನೈತಿಕ ಶಿಕ್ಷಣ ಅಳವಡಿಕೆ: ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಮಾತ ನಾಡಿ, ಮಠಾಧೀಶರು. ಶಿಕ್ಷಣದಲ್ಲಿ. ಮೌಲ್ಯಾಧಾರಿತ, ನೈತಿಕ ಶಿಕ್ಷಣವನ್ನು ಅಳವಡಿಸು ವಂತೆ ಸಲಹೆ ನೀಡಿದ್ದಾರೆ. ಅದರಂತೆ ಮುಂದಿನ ಪಠ್ಯ ವಿಷಯದಲ್ಲಿ ಮನುಷ್ಯನ ಜೀವನಕ್ಕೆ ಬೇಕಾದ ಧಾರ್ಮಿಕತೆ, ಯೋಗ, ಜ್ಞಾನ ಶಿಕ್ಷಣ, ನೈತಿಕ ಶಿಕ್ಷಣವನ್ನು ಅಳವಡಿಸಲಾಗು ವುದು ಎಂದರು.

ವಸತಿ ಸಚಿವ ವಿ.ಸೋಮಣ್ಣ ಮಾತನಾಡಿ, ರಾಜ್ಯದಲ್ಲಿ ಸಿದ್ದಗಂಗ ಮಠ, ಆದಿಚುಂಚನ ಗಿರಿ ಮಠ, ಸುತ್ತೂರು ಮಠಗಳು ಎಲ್ಲಾ ವರ್ಗಗಳಿಗೂ ಜಾತ್ಯಾತೀತವಾಗಿ ಸಮಾನ ಅವಕಾಶ ನೀಡಿವೆ. ಸುತ್ತೂರು ಮಠ ಜೀವನದ ನೈತಿಕ ಮೌಲ್ಯಗಳನ್ನು ಎತ್ತಿಹಿಡಿ ಯುತ್ತಾ ಲಿಂಗ ಬೇಧವಿಲ್ಲದೆ ಎಲ್ಲರಿಗೂ ಸಮಾನ ಅವಕಾಶ ನೀಡುವ ಮೂಲಕ ಸಮಾಜ ಮತ್ತು ಸಮುದಾಯದ ಅಂತರವನ್ನು ಗಟ್ಟಿಗೊಳಿಸುವಂತಹ ಕೆಲಸಮಾಡುತ್ತಿದೆ. ಅಲ್ಲದೆ ವಿಶ್ವಮಟ್ಟದಲ್ಲಿ ದಾಸೋಹ, ಕಾಯಕ, ಧಾರ್ಮಿಕತೆಯನ್ನು ಪ್ರಚಾರ ಮಾಡುತ್ತಿದೆ ಎಂದರು.

ಪ್ರಧಾನಿ ಮೋದಿ ತುಮಕೂರಿನ ಕಾರ್ಯಕ್ರಮ ಉದ್ಘಾಟನೆಗೆ ಆಗಮಿಸಿದ್ದ ವೇಳೆ ಸಿದ್ದಗಂಗೆ ಮಠಕ್ಕೆ ಬೇಟಿ ನೀಡುವ ಇಂಗಿತ ವ್ಯಕ್ತಪಡಿಸಿದರು. ನಾನು ಶ್ರೀಗಳನ್ನು ಬೇಟಿ ಮಾಡಿ ಮಧ್ಯಾಹ್ನ ಪ್ರಧಾನಿ ಮೋದಿ ಬರುವುದಾಗಿ ತಿಳಿಸಿದೆ. ಶ್ರೀಗಳು ಈ ಮೊದಲೇ ಭಕ್ತರ ಮನೆಯಲ್ಲಿ ಕಾರ್ಯಕ್ರಮ ನಿಯೋಜಿತವಾಗಿರುವ ಕಾರಣ ಕಾರ್ಯಕ್ರಮ ತಪ್ಪಿಸುವುದು ಸರಿಯಲ್ಲ, ಅವರ ಬೇಟಿ ವೇಳೆ ನಾನು ಹಾಜರಿರಲು ಸಾದ್ಯವಿಲ್ಲ, ಬೆಳಿಗ್ಗೆ ಬರುವಂತೆ ತಿಳಿಸಿದರು. ವಿಚಾರ ತಿಳಿದ ಮೋದಿರವರು ಕಾರ್ಯಕ್ರಮ ಉದ್ಘಾಟನೆಗೂ ಮುನ್ನವೇ ಮಠಕ್ಕೆ ಬೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆದರು. ನಾಡಿನ ಧಾರ್ಮಿಕ ಸಂಸ್ಥೆಗಳು, ಧರ್ಮ, ಮಠಗಳ ಪರಂಪರೆ ಬಗ್ಗೆ ಅಪಾರ ಶ್ರದ್ಧೆ, ಶಕ್ತಿ ಹೊಂದಿರುವ ಸರಳ ಪ್ರಧಾನಿಯನ್ನು ಹೊಂದಿರುವುದು ನಮ್ಮ ಭಾಗ್ಯ ಎಂದರು.

ಕಾರ್ಯಕ್ರಮದಲ್ಲಿ ಮಂಡ್ಯ ಜಿಲ್ಲೆಯ ಆರತಿಪುರ ಜೈನ ಮಠದ ಸಿದ್ಧಾಂತ ಕೀರ್ತಿ ಭಟ್ಟಾರಕ ಸ್ವಾಮಿಗಳು, ಬೆಂಗಳೂರು ಭವಾನಿ ಪೀಠ, ಗೋಸಾಯಿ ಮಹಾಸಂಸ್ಥಾನ ಮಠದ ಮಂಜುನಾಥ ಮಹಾಸ್ವಾಮೀಜಿ ಶುಭ ಸಂದೇಶ ನೀಡಿದರು. ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮಂಜುನಾಥ ಶಾಂತಮುನಿ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು. ಸಮಾರಂಭದಲ್ಲಿ ಕಂದಾಯ ಸಚಿವ ಆರ್.ಅಶೋಕ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಸಚಿವ ಡಾ.ಕೆ.ಸುಧಾಕರ್, ಶಾಸಕರಾದ ಬಿ.ಹರ್ಷವರ್ಧನ, ಎನ್.ನಾಗೇಂದ್ರ, ತನ್ವೀರ್ ಸೇಠ್, ನಿರಂಜನ್ ಕುಮಾರ್, ಮಾಜಿ ಶಾಸಕ ಮಾರುತಿರಾವ್ ಪವಾರ್, ಜಗದೀಶ್ ಗುಡಗುಂಟಿ, ಸ್ವಪನ್ ಸರ್ಕಾರ್, ಮೈಸೂರು ಮೇಯರ್ ಶಿವಕುಮಾರ್, ಯಶಸ್ವಿನಿ ಸೋಮಶೇಖರ್ ಇದ್ದರು.

2 ಬಾರಿ ರಾಜ್ಯಕ್ಕೆ ಭೇಟಿ

ಕಾರ್ಯಕ್ರಮಗಳಲ್ಲಿ ಭಾಗವಹಿಸಲು ರಾಜ್ಯಕ್ಕೆ ಬರುತ್ತಿದ್ದಾರೆ. ಅಂದು ಧಾರವಾಡದಲ್ಲಿ ಐಐಟಿ ಉದ್ಘಾಟನೆ ಮತ್ತು ತುಮಕೂರಿನಲ್ಲಿ ಹೆಲಿಕಾಪ್ಟರ್ ಘಟಕದ ಉದ್ಘಾಟನೆ ಮಾಡಲಿದ್ದಾರೆ. ವರ್ಷದ ಆರಂಭದಲ್ಲಿ ರಾಷ್ಟ್ರೀಯ ಯುವಜನೋತ್ಸವಕ್ಕೆ ಹುಬ್ಬಳ್ಳಿಗೆ ಆಗಮಿಸಿ ನಂತರ ಕಲ್ಯಾಣ ಕರ್ನಾಟಕ ಭಾಗ ಯಾದಗಿರಿ, ಕಲಬುರಗಿ ಜಿಲ್ಲೆಗಳಿಗೆ ಭೇಟಿ ನೀಡಿದ್ದ ಮೋದಿಯವರು ಈ ಬಾರಿ ಹಳೆ ಮೈಸೂರು ಭಾಗದತ್ತ ಮುಖ ಮಾಡುತ್ತಿದ್ದಾರೆ. ಫೆಬ್ರವರಿ 27ರಂದು ಶಿವಮೊಗ್ಗ ವಿಮಾನ ನಿಲ್ದಾಣ ಉದ್ಘಾಟನೆಗೆ ಪ್ರಧಾನಿ ಮೋದಿ ಆಗಮಿಸಲಿದ್ದಾರೆ. ಇದು ಚುನಾವಣೆ ಘೋಷಣೆಗೂ ಮುನ್ನ ಪ್ರಧಾನಿಯವರ ಕರ್ನಾಟಕ ಟೂರ್‌ನ ವಿವರ, ಇನ್ನು ಚುನಾವಣೆ ದಿನಾಂಕ ಘೋಷಣೆ ಆದ ಮೇಲೆ ಕರ್ನಾಟಕದಲ್ಲಿ ರಾಜಕೀಯ ಪಕ್ಷಗಳ, ನಾಯಕರ ಪ್ರಚಾರ ಮತ್ತಷ್ಟು ಜೋರಾಗಲಿದೆ.

ನಾಳೆ ಬಸ್ ಸಂಚಾರದಲ್ಲಿ ವ್ಯತ್ಯಯ

ನೌಕರರಿಂದ ಫ್ರೀಡಂ ಪಾರ್ಕ್‌ನಲ್ಲಿ ಸತ್ಯಾಗ್ರಹ ನಡೆಸಲು ಮುಂದಾಗಿದ್ದು, ಈ ವೇಳೆ ಸಾವಿರಾರು ನೌಕರರು ಧರಣಿ ಭಾಗಿಯಾಗುತ್ತಿರುವುದರಿಂದ ಬಸ್ ಸಂಚಾರದಲ್ಲಿ ವ್ಯತ್ಯಯ ಆಗುವ ಸಾಧ್ಯತೆಯಿದೆ. ವೇತನ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ 2021ರ ಏಪ್ರಿಲ್‌ನಲ್ಲಿ ನೌಕರರು 15 ದಿನಗಳ ಕಾಲ ಮುಷ್ಕರ ನಡೆಸಿದ್ದರು. ಆದರೂ ಇಲ್ಲಿವರೆಗೆ ನೌಕರರ ಬೇಡಿಕೆ ಈಡೇರಿಸಲು ಸರ್ಕಾರ ಮೀನಾಮೇಷ ಎಣಿಸುತ್ತಿದೆ. ಹೀಗಾಗಿ ಮತ್ತೆ ಮಂಗಳವಾರ ಧರಣಿ ಸತ್ಯಾಗ್ರಹ ನಡೆಸಲು ಪ್ಲ್ಯಾನ್ ಮಾಡಿದೆ.

ಪ್ರತಿ ನಾಲ್ಕು ವರ್ಷಕ್ಕೊಮ್ಮೆ ವೇತನ ಪರಿಷ್ಕರಣೆ ಮಾಡುತ್ತಿದ್ದ ನಿಗಮಗಳು 6 ವರ್ಷ ಕಳೆದರೂ ವೇತನ ಪರಿಷ್ಕರಣೆ ಬಗ್ಗೆ ಪ್ರಸ್ತಾಪ ಇಲ್ಲ. ನಿಯಮಬದ್ಧವಾಗಿ 2020 ಮಾರ್ಚ್‌ನಲ್ಲಿ ವೇತನ ಪರಿಷ್ಕರಣೆಯಾಗಬೇಕಿತ್ತು. ಹೀಗಾಗಿ ನಿಗಮಗಳ ನಿರ್ಧಾರಕ್ಕೆ ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ವಾಯುವ್ಯ ಹಾಗೂ ಕಲ್ಯಾಣ ಸಾರಿಗೆ ನಿಗಮಗಳ 1,20,000 ನೌಕರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. 2016ರಲ್ಲಿ ಶೇ 12.5ರಷ್ಟು ವೇತನ ಪರಿಷ್ಕರಣೆ ಆಗಿತ್ತು. ಆದರೆ ವೇತನ ಹೆಚ್ಚಳಕ್ಕೆ ಆಗ್ರಹಿಸಿ ಹೋರಾಟ ನಡೆಸಿ ಒಂದೂವರೆ ವರ್ಷ ಕಳೆದರೂ ಬೇಡಿಕೆಯನ್ನು ಸರ್ಕಾರ ಈಡೇರಿಸಿಲ್ಲ. ಈ ಹಿನ್ನೆಲೆಯಲ್ಲಿ ಸತ್ಯಾಗ್ರಹಕ್ಕೆ ಸಿದ್ಧತೆಯನ್ನು ನೌಕರರು ಮಾಡಿಕೊಂಡಿದ್ದಾರೆ.

ವಿಶೇಷ ಟಾಸ್ಕ್‌ಫೋರ್ಸ್: ಸಿಎಂ

ಅದು ದಾಳಿ ಮಾಡಿ 11 ವರ್ಷದ ಯುವಕನೊಬ್ಬನನ್ನು ಕೊಂದಿದೆ. ಸುಮಾರು ಎರಡು ಕಿಮೀ ವ್ಯಾಪ್ತಿಯಲ್ಲೇ ನಾಲ್ಕು ಜನರನ್ನು ಕೊಂದಿದೆ. ಬಾಲಕನ ಮೃತದೇಹದ ಪರಿಸ್ಥಿತಿ ಕಂಡು ನೋವಾಗಿದೆ. ಹೀಗಾಗಿ ಬೆಳಗ್ಗೆಯೇ ಅರಣ್ಯ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ, ಘಟನೆ ನಡೆದ ಸ್ಥಳದಿಂದ 2–3 ಕಿಮೀ ವ್ಯಾಪ್ತಿಯಲ್ಲಿ ಕೂಂಬಿಂಗ್ ನಡೆಸುವಂತೆ ಸೂಚಿಸಲಾಗಿದೆ. ಬೇರೆ ಬೇರೆ ಜಿಲ್ಲೆಯಲ್ಲಿರುವ ಸಿಬ್ಬಂದಿಗಳನ್ನು ಕೂಂಬಿಂಗ್ ಕಾರ್ಯಾಚರಣೆಗೆ ಬಳಸಿಕೊಳ್ಳಲು ಆದೇಶಿಸಿದ್ದೇನೆ. ಪದೇ ಪದೇ ದಾಳಿ ನಡೆಸುತ್ತಿರುವ ಚಿರತೆ ಸೆರೆಗೆ ವಿಶೇಷ ತಂಡ ರಚಿಸುವಂತೆ ಸೂಚಿಸಿದ್ದೇನೆ ಎಂದರು.

ಇಂತಹ ಪ್ರಕರಣ ಮರುಕಳಿಸದಂತೆ ಕಟ್ಟೆಚ್ಚರ ವಹಿಸಲು ಸೂಕ್ಷ್ಮ ಪ್ರದೇಶಗಳಲ್ಲಿ ವಿಶೇಷ ಕಾವಲುಗಾಗಿ ಸಿಬ್ಬಂದಿಗಳನ್ನು ನಿಯೋಜಿಸಿ, ಜನರಲ್ಲಿ ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳಲು ತಿಳಿಸಿದ್ದೇನೆ. ಸಂಜೆ ವೇಳೆ ಜನರು ಹೊರ ಬರದಂತೆ ತಿಳುವಳಿಕೆ ನೀಡಬೇಕು. ಪೊಲೀಸರನ್ನು ಗಡಿ ಪ್ರದೇಶದಲ್ಲಿ ಬಂದೂಕುಧಾರರಾಗಿ ಕಾವಲು ಹಾಕಿ ವಿಶೇಷ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ. ಪರಿಹಾರ ಹಣವನ್ನೂ ಹೆಚ್ಚಿಸಿದ್ದು, ಕೂಡಲೇ ನೀಡುವಂತೆ ಜಿಲ್ಲಾಧಿಕಾರಿಗೆ ಸೂಚಿಸಲಾಗಿದೆ. ಈ ಪ್ರಕರಣ ಗಂಭೀರವಾಗಿ ಪರಿಗಣಿಸಿದ್ದು, ಆದಷ್ಟು ಬೇಗ ಈ ಚಿರತೆಯನ್ನೂ ಕೂಡಲೇ ಸೆರೆ ಹಿಡಿಯಲಾಗುವುದು ಎಂದು ತಿಳಿಸಿದರು.

ಬೀಡಾಡಿ, ನಿರ್ಲಕ್ಷಿತ, ಗೋಹತ್ಯೆ ನಿಷೇಧದಡಿ ವಶಪಡಿಸಿಕೊಳ್ಳಲಾದ ಗೋವುಗಳಿಗೆ ಆಶ್ರಯ, ಚಿಕಿತ್ಸೆ ನೀಡುವ ಉದ್ದೇಶ

ಆಯರಹಳ್ಳಿ ಬಳಿ ಉದ್ಘಾಟನೆಗೆ ಸಿದ್ಧವಾಗಿರುವ ಸರ್ಕಾರಿ ಗೋಶಾಲೆ



- ಜಿಲ್ಲೆಗೊಂದು ಗೋಶಾಲೆ ಯೋಜನೆಯಡಿ 10 ಎಕರೆ ಪ್ರದೇಶದಲ್ಲಿ ನಿರ್ಮಾಣ
- ಕುಡಿಯುವ ನೀರು, ಮೇವು, ಔಷಧಿ ಇತ್ಯಾದಿ ವ್ಯವಸ್ಥೆ

ರಾಜಕುಮಾರ್ ಭಾವಸಾರ್

ಮೈಸೂರು, ಜ.22– ಪ್ರತಿ ಜಿಲ್ಲೆಗೊಂದು ಗೋಶಾಲೆ ತೆರೆಯುವ ರಾಜ್ಯ ಸರ್ಕಾರದ ಯೋಜನೆಯಡಿ ಮೈಸೂರು ತಾಲೂಕಿನ ಆಯರಹಳ್ಳಿ ಗ್ರಾಮದ ಬಳಿ ನೂರಾರು ಗೋವುಗಳಿಗೆ ಆಶ್ರಯ, ಚಿಕಿತ್ಸೆ ನೀಡುವ ಗೋಶಾಲೆ ನಿರ್ಮಾಣಗೊಂಡಿದ್ದು, ಪಶುಪಾಲನಾ ಸಚಿವರಿಂದ ಉದ್ಘಾಟನೆಗೆ ಸಿದ್ಧಗೊಂಡಿದೆ.

ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿರುವಂತೆ ಗೋಶಾಲೆ ನಿರ್ಮಿಸಲಾಗಿದೆ. ಮೈಸೂರು ಜಿಲ್ಲೆಯ ಸರ್ವೆ ನಂಬರ್ 212ರ 10 ಎಕರೆ ಪ್ರದೇಶದಲ್ಲಿ ಪಶುಪಾಲನಾ ಇಲಾಖೆಗೆ ಸೇರಿದ ಜಾಗದಲ್ಲಿ ಈಗಾಗಲೇ ಪ್ರಥಮ ಹಂತದ ಗೋಶಾಲೆ ನಿರ್ಮಾಣಗೊಂಡಿದೆ. ಎರಡು ಎಕರೆ ಪ್ರದೇಶದಲ್ಲಿ 100 ರಾಸುಗಳಿಗೆ ಅವಕಾಶವಾಗುವಂತೆ ಕೊಟ್ಟಿಗೆ ನಿರ್ಮಿಸಿ, ಈಗಾಗಲೇ 35ಕ್ಕೂ ಹೆಚ್ಚು ಗೋವುಗಳಿಗೆ ಆಶ್ರಯ ನೀಡಿ, ಸಂರಕ್ಷಿಸಲಾಗಿದೆ.

ರಾಸುಗಳ ಸಂಖ್ಯೆಗೆ ಅನುಗುಣವಾಗಿ ಇನ್ನೂ ಒಂದೆರಡು ಕೊಟ್ಟಿಗೆಗಳನ್ನು ನಿರ್ಮಿಸುವ ಉದ್ದೇಶವಿದ್ದು, ಮತ್ತೊಂದು ಕೊಟ್ಟಿಗೆ ನಿರ್ಮಿಸಿ, ಗೋಶಾಲೆ ವಿಸ್ತರಿಸಲು ಅವಕಾಶವಿದೆ.

ಮೈಸೂರು ತಾಲೂಕಿನ ಇಮ್ಮಾವು ಕೈಗಾರಿಕಾ ಪ್ರದೇಶ ಸಮೀಪ, ವರುಣಾ ಹೋಬಳಿಯ ಆಯರಹಳ್ಳಿ ಬಳಿ 10 ಎಕರೆ ಪ್ರದೇಶವನ್ನು ಗೋಶಾಲೆಗಾಗಿ ಬಳಸಿಕೊಳ್ಳಲಾಗಿದೆ. 2 ಎಕರೆ ಪ್ರದೇಶದಲ್ಲಿ ಕಚೇರಿ ಕಟ್ಟಡ ಸೇರಿದಂತೆ ಗೋವುಗಳು



> ಗೋಶಾಲೆಯಲ್ಲಿ ಗೋವುಗಳಿಂದ ಉತ್ಪತ್ತಿಯಾಗುವ ಸಗಣಿ, ಗಂಜಲದಿಂದ ಗವ್ಯ ಸೇರಿ ಉಪ ಉತ್ಪನ್ನಗಳನ್ನು ತಯಾರಿಸುವ ಉದ್ದೇಶವಿದ್ದು ಈ ಮೂಲಕ ಗೋಶಾಲೆಗಳಿಗೆ ಆದಾಯದ ಮೂಲವನ್ನೂ ಕ್ರೋಡೀಕರಿಸುವ ಉದ್ದೇಶವೂ ಇದೆ. ಗೋವುಗಳ ದತ್ತು ಪಡೆದು ಗೋಶಾಲೆ ಉತ್ತಮ ನಿರ್ವಹಣೆಗೆ ಇದಕ್ಕೆ ಸಾರ್ವಜನಿಕರು ಸಹಕಾರ ಅಗತ್ಯ.
> – ಷಡಕ್ಷರಸ್ವಾಮಿ, ಉಪನಿರ್ದೇಶಕ, ಪಶುಪಾಲನಾ ಇಲಾಖೆ

ಸ್ವಚ್ಛಂದವಾಗಿ ಓಡಾಡಲು ಅನುಕೂಲವಾಗುವಂತೆ ಮುಳ್ಳು ತಂತಿ ಬೇಲಿ ಹಾಕಲಾಗಿದೆ. ಉಳಿದ 8 ಎಕರೆ ಪ್ರದೇಶದಲ್ಲಿ ನೆರಳಿಗಾಗಿ ಮರಗಳನ್ನು ಬೆಳೆಸಿ, ಅದರ ಕೆಳಗೆ ಗೋಶಾಲೆ ರೀತಿ ಮಾಡಲಾಗುವುದು. ಅಲ್ಲದೆ ಸುತ್ತಲೂ ಸಿಸಿ ಕ್ಯಾಮರಾಗಳನ್ನು ಅಳವಡಿಸಿದ್ದು, ಹತ್ತಿರದ ದೇವಲಾಪುರ ಪಶು ಆಸ್ಪತ್ರೆ ವೈದ್ಯರಾದ ಡಾ.ಅಪೂರ್ವ ಅವರಿಗೆ ಗೋಶಾಲೆಯ ನಿರ್ವಹಣೆ ಜವಾಬ್ದಾರಿ ವಹಿಸಲಾಗಿದೆ. ಜೊತೆಗೆ ಮೂವರು ಕಾವಲುಗಾರರನ್ನು ನೇಮಕ ಮಾಡಲಾಗಿದೆ.

ರಾಸುಗಳಿಗೆ ಬೇಕಾಗುವ ಮೇವು, ನೀರು, ಔಷಧಿಗಳಿಗೆ ವ್ಯವಸ್ಥೆ ಮಾಡಲಾಗಿದ್ದು, ನೀರಿಗಾಗಿ ಕೊಳವೆಬಾವಿ ಕೊರೆಸಿ, 1 ಲಕ್ಷ ಲೀಟರ್ ಸಾಮರ್ಥ್ಯದ ಸಂಪು, 5 ಸಾವಿರ ಲೀಟರ್ ಸಾಮರ್ಥ್ಯದ ಓವರ್‌ಹೆಡ್ ಟ್ಯಾಂಕ್ ಸಹ ಅಳವಡಿಸಲಾಗಿದೆ. ಒಟ್ಟಾರೆ ಗೋವುಗಳಿಗೆ ಮೇವು, ಕುಡಿಯುವ ನೀರಿನ ತೊಂದರೆ ಆಗದಂತೆ ವ್ಯವಸ್ಥೆ ಕಲ್ಪಿಸಲಾಗಿದೆ.

ರಸ್ತೆ ಅಪಘಾತ, ಬೀಡಾಡಿ ದನಗಳು, ರೈತರಿಗೆ ಸಾಕಲು ಕಷ್ಟವಾಗಿರುವ ಜಾನುವಾರುಗಳು, ಗೋಹತ್ಯೆ ನಿಷೇಧ ಕಾಯ್ದೆಯಡಿ ಪೊಲೀಸರು ವಶಪಡಿಸಿಕೊಂಡಿರುವ ಜಾನುವಾರುಗಳನ್ನು ಸಾಕಲು ಇಲ್ಲಿ ವ್ಯವಸ್ಥೆ ಮಾಡಲಾಗಿದೆ. ಒಟ್ಟು ಎರಡು ಎಕರೆಯಲ್ಲಿ ಗೋ ಶಾಲೆ, 8 ಎಕರೆಯಲ್ಲಿ ಮೇವು ಬೆಳೆಯಲು ಜಾಗ ಮೀಸಲಿರಿಸಲಾಗಿದೆ.

ಉಪ ಉತ್ಪನ್ನಗಳ ತಯಾರಿಕೆಗೆ ಒತ್ತು: ಸರ್ಕಾರದ ಅನುದಾನದಲ್ಲಿ ನಿರ್ವಹಿಸಲಾಗುವ ಈ ಸರ್ಕಾರಿ ಗೋಶಾಲೆಯನ್ನು ಆತ್ಮನಿರ್ಭರ್ ಗೋಶಾಲೆಯಾಗಿ ಮಾಡಿ, ಇಲ್ಲಿ ಗೋವು ಗಳಿಂದ ಉತ್ಪತ್ತಿಯಾಗುವ ಸಗಣಿಯಿಂದ ಕಾಂಪೋಸ್ಟ್ ಗೊಬ್ಬರ, ಗಂಜಲದಿಂದ ಜೀವಾಮೃತ, ದೀಪ, ಧೂಪ, ಪೆನಾಯಿಲ್ ಇತ್ಯಾದಿ ಉಪ ಉತ್ಪನ್ನಗಳನ್ನು ತಯಾರಿಸಿ, ಅದರಿಂದ ಬರುವ ಹಣದಿಂದ ಆತ್ಮ ನಿರ್ಭರ ರೀತಿ ಸ್ವತಂತ್ರ ವಾಗಿ ಗೋಶಾಲೆ ನಿರ್ವಹಿಸುವ ಯೋಜನೆ ಇದಾಗಿದೆ.

ಪುಣ್ಯಕೋಟಿ ಗೋವು ದತ್ತು ಕಾರ್ಯಕ್ರಮ: ಗೋಶಾಲೆಗಳ ನಿರ್ವಹಣೆಗೆ ಅಗತ್ಯ ಆದಾಯ ರೂಢಿಸಿಕೊಳ್ಳಲು ಪುಣ್ಯಕೋಟಿ ದತ್ತು ಕಾರ್ಯಕ್ರಮ ಇದಕ್ಕೆ ಒಳಪಡಿಸಲಾಗಿದೆ. ಪ್ರಾಣಿ ಸಂಗ್ರಹಾಲಯಗಳಲ್ಲಿ ಪ್ರಾಣಿಗಳನ್ನು ದತ್ತು ತೆಗೆದುಕೊಳ್ಳುವ ಮಾದರಿ ಗೋಶಾಲೆಯಲ್ಲಿರುವ ರಾಸುಗಳನ್ನೂ ದತ್ತು ತೆಗೆದುಕೊಳ್ಳಲು ಈ ಕಾರ್ಯಕ್ರಮದಡಿ ಅವಕಾಶ ಮಾಡಿಕೊಡ ಲಾಗಿದೆ. ಪ್ರತಿ ಗೋವಿಗೆ ವರ್ಷಕ್ಕೆ 11 ಸಾವಿರ ರೂ. ನಿಗದಿಪಡಿಸಲಾಗಿದ್ದು, ಪ್ರತಿ ದಿನಕ್ಕೆ ರೂ.70 ದೇಣಿಗೆ ನೀಡಲು ಅವಕಾಶವಿದೆ. ಆಸಕ್ತರು ತಮ್ಮ ಶಕ್ತಾನುಸಾರ ಹಣವನ್ನು ದೇಣಿಗೆಯಾಗಿ ನೀಡಬಹುದು. ಆನ್‌ಲೈನ್ ಮೂಲಕವೂ ಹಣ ಪಾವತಿಸಲು ಅವಕಾಶವಿದೆ ಎಂದು ಪಶುಪಾಲನಾ ಮತ್ತು ಪಶು ವೈದ್ಯಕೀಯ ಇಲಾಖೆ ಉಪನಿರ್ದೇಶಕ ಡಾ.ಷಡಕ್ಷರ ಸ್ವಾಮಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಗೋಶಾಲೆಯ ಅಗತ್ಯಕ್ಕೆ ತಕ್ಕಂತೆ ಸರ್ಕಾರ ಒಂದು ಕೋಟಿ ರೂ. ಅನುದಾನ ಒದಗಿಸಿದ್ದು, ಈ ಹಣದಲ್ಲಿ ಗೋಶಾಲೆ ನಿರ್ಮಿಸ ಲಾಗಿದೆ. 2ನೇ ಕೊಟ್ಟಿಗೆಗೆ ಎನ್‌ಆರ್‌ಇಜಿ ಯೋಜನೆಯಡಿ 48 ಲಕ್ಷ ರೂ. ಬಿಡುಗಡೆ ಆಗಿದೆ. ಮುಖ್ಯ ರಸ್ತೆಯಿಂದ ಗೋಶಾಲೆವರೆಗೆ ರಸ್ತೆ ಕಾಮಗಾರಿ ಕೈಗೊಳ್ಳಲಾಗಿದೆ. ಅಲ್ಲದೆ ಮೇವಿನ ಸಂಗ್ರಹಣೆಗೆ ಶೆಡ್ ನಿರ್ಮಿಸಲಾಗುವುದು. ಈಗಾಗಲೇ ಗೋಶಾಲೆಯಲ್ಲಿ ಪ್ರತೀ ಹಸುವಿಗೆ 11 ಸಾವಿರ ರೂ.ಗಳಂತೆ 18 ರಾಸುಗಳನ್ನು ಆಸಕ್ತರು ದತ್ತು ಪಡೆದಿದ್ದಾರೆ. ಸಚಿವರು ಮತ್ತು ಶಾಸಕರ ದಿನಾಂಕ ಗೊತ್ತುಪಡಿಸಿಕೊಂಡು ಗೋಶಾಲೆಯನ್ನು ವಿಧ್ಯುಕ್ತವಾಗಿ ಉದ್ಘಾಟಿಸಲಾಗುವುದು ಎಂದು ಅವರು ಹೇಳಿದರು.

ಮುಂದೂಡಲ್ಪಟ್ಟ ಗೋಶಾಲೆ ಉದ್ಘಾಟನಾ ಕಾರ್ಯಕ್ರಮ

ಗೋಶಾಲೆ ಉದ್ಘಾಟನಾ ಕಾರ್ಯಕ್ರಮ ಜ.22ರ ಭಾನುವಾರ ನಿಗದಿಯಾಗಿತ್ತು. ಪಶು ಸಂಗೋಪನಾ ಸಚಿವ ಪ್ರಭು ಚೌಹಾಣ್ ಅವರು ಉದ್ಘಾಟನೆ ನೆರವೇರಿಸಲಿದ್ದಾರೆಂದು ಮಾಹಿತಿ ನೀಡಲಾಗಿತ್ತು ಗೋಶಾಲೆ ಆವಾಣದಲ್ಲಿ ಇಲಾಖೆ ಅಧಿಕಾರಿಗಳು ಶಾಮಿಯಾನ ಹಾಕಿ ಕಾರ್ಯಕ್ರಮಕ್ಕೆ ಸಿದ್ಧತೆಯನ್ನು ಮಾಡಿಕೊಂಡಿದ್ದರು. ಇಲಾಖೆ ಅಧಿಕಾರಿಗಳು ಹಾಗೂ ಪತ್ರಕರ್ತರಿಗೆ ಮಾಹಿತಿಯನ್ನೂ ನೀಡಲಾಗಿತ್ತು. ಆದರೆ ಕೊನೆ ಗಳಿಗೆಯಲ್ಲಿ ಸಚಿವರ ಬದಲಾದ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಗೋಶಾಲೆಯ ಉದ್ಘಾಟನಾ ಕಾರ್ಯಕ್ರಮ ರದ್ದಾಯಿತು.

ಮಾಜಿ ಸಚಿವರಿಂದ ನವೀಕೃತ ಮಹಿಳಾ ವಿದ್ಯಾರ್ಥಿ ನಿಲಯ ಉದ್ಘಾಟನೆ

ಮೈಸೂರು, ಜ.22(ಆರ್‌ಕೆಬಿ)– ಮೈಸೂರಿನ ಸರಸ್ವತಿಪುರಂನಲ್ಲಿ ಯೋಗಿ ನಾರೇಯಣ ಬಲಿಜ ಸಂಘದಿಂದ ನಿರ್ಮಿಸಲಾಗಿರುವ ನವೀಕೃತ ಡಾ.ಎಂ.ಎಸ್. ರಾಮಯ್ಯ ಮಹಿಳಾ ವಿದ್ಯಾರ್ಥಿ ನಿಲಯವನ್ನು ಮಾಜಿ ಸಚಿವ ಎಂ.ಆರ್. ಸೀತಾರಾಂ ಭಾನುವಾರ ಉದ್ಘಾಟಿಸಿದರು.



ನಂತರ ಮಾತನಾಡಿದ ಅವರು, ಶಿಕ್ಷಣ ಬಹಳ ಮಹತ್ವವಾದದ್ದು. ಮೈಸೂರು ವಿದ್ಯಾವಂತರ ಕ್ಷೇತ್ರ. ಮಹಿಳೆಯರು ಹೆಚ್ಚು ವಿದ್ಯಾವಂತರಾಗಲು ಮಹಿಳಾ ವಿದ್ಯಾರ್ಥಿ ನಿಲಯ ಹೆಚ್ಚು ಪ್ರಯೋಜನಕಾರಿಯಾಗಲಿದೆ ಎಂದು ತಿಳಿಸಿದರು.

ರಾಮಕೃಷ್ಣ ಆಶ್ರಮದ ಸ್ವಾಮಿ ಮಹಾಮೇದಾನಂದ ಮಾತನಾಡಿ, ಶಿಕ್ಷಣದಿಂದ ವ್ಯಕ್ತಿತ್ವ ವಿಕಸನಗೊಳ್ಳಲಿದೆ. ಜ್ಞಾನವೆಂಬುದೇ ಬೇರೆ, ವಿದ್ಯಾರ್ಜನೆಯೇ ಬೇರೆ. ಕೌಶಲ್ಯಾಧಾರಿತ ಶಿಕ್ಷಣ ಇದ್ದರೆ ಅದಕ್ಕೆ ಮನ್ನಣೆ ಜಾಸ್ತಿ ಎಂದರು.

ವಿದ್ಯಾರ್ಥಿ ನಿಲಯದ ಗೌರವಾಧ್ಯಕ್ಷ ಹೆಚ್.ಎ. ವೆಂಕಟೇಶ್ ಮಾತನಾಡಿ, ಭಾರತದ ಆಧ್ಯಾತ್ಮಿಕ ವಿಚಾರಗಳನ್ನು ವಿದೇಶಿಯರೇ ಹೆಚ್ಚಾಗಿ ಪಾಲಿಸುತ್ತಿದ್ದಾರೆ. ನಮ್ಮಲ್ಲಿ ಅದು ಕಡಿಮೆ ಆಗುತ್ತಿದೆ. ವಿದ್ಯಾರ್ಥಿನಿಯರ ವ್ಯಾಸಂಗಕ್ಕೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಮಹಿಳಾ ವಿದ್ಯಾರ್ಥಿ ನಿಲಯಗಳು ಹೆಚ್ಚು ಸಹಕಾರಿಯಾಗಲಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಂಘದ ಕಾರ್ಯದರ್ಶಿ ಹೆಚ್.ಎ.ಗೋಪಾಲಕೃಷ್ಣ, ಪದಾಧಿಕಾರಿಗಳಾದ ಕೆ.ಆರ್.ಪ್ರಕಾಶ್, ಎನ್.ಹೇಮಂತ್ ಕುಮಾರ್, ಗೋಪಾಲಕೃಷ್ಣ ಕುರಟ್ಟಿ, ಡಾ. ಪಿರವೀಶ್ ಇನ್ನಿತರರು ಉಪಸ್ಥಿತರಿದ್ದರು.

ಮಹಿಳೆ ಹೊಟ್ಟೆಯಲ್ಲಿ 6 ಕೆಜಿ ಗೆಡ್ಡೆ; ಯಶಸ್ವಿ ಶಸ್ತ್ರಚಿಕಿತ್ಸೆ ಮೂಲಕ ತೆರವು

ಮೈಸೂರು, ಜ.22– ಮಹಿಳೆ ಹೊಟ್ಟೆಯಲ್ಲಿದ್ದ 6 ಕೆ.ಜಿ. ತೂಕದ ಬೃಹತ್ ಗೆಡ್ಡೆಯನ್ನು ಶಸ್ತ್ರಚಿಕಿತ್ಸೆ ಮೂಲಕ ಹೊರ ತೆಗೆಯುವಲ್ಲಿ ಮೈಸೂರಿನ ಕಾವೇರಿ ಹಾರ್ಟ್ ಅಂಡ್ ಮಲ್ಟಿ ಸ್ಪೆಷಾಲಿಟಿ ಹಾಸ್ಪಿಟಲ್ ವೈದ್ಯರು ಯಶಸ್ವಿಯಾಗಿದ್ದಾರೆ.

ತೀವ್ರ ಹೊಟ್ಟೆ ನೋವಿನಿಂದ ಬಳಲುತ್ತಿದ್ದ 39 ವರ್ಷದ ಮಹಿಳೆಯೊಬ್ಬರು ಹಲವು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದರಾದರೂ ಗುಣವಾಗಿರಲಿಲ್ಲ. ಪರಿಚಿತರೊಬ್ಬರು ತಿಳಿಸಿದಂತೆ ಅವರು ಕಾವೇರಿ ಆಸ್ಪತ್ರೆಗೆ ಭೇಟಿ ನೀಡಿದರು. ಇಲ್ಲಿನ ಕನ್ಸಲ್ಟೆಂಟ್ ಆಂಕೊಸರ್ಜನ್ ಡಾ.ಗಿರೀಶ್ ಸಮಾಲೋಚಿಸಿದ ನಂತರ ಆ ಮಹಿಳೆಗೆ ಸ್ಕ್ಯಾನಿಂಗ್ ಸೇರಿದಂತೆ ಇನ್ನಿತರ ಪರೀಕ್ಷೆಗಳನ್ನು ನಡೆಸಿದಾಗ ಹೊಟ್ಟೆಯಲ್ಲಿ ಗೆಡ್ಡೆಯಿರುವುದು ಖಚಿತವಾಯಿತು.

CAUVERY Heart & Multi-Speciality Hospital — Caring for life

ಬಳಿಕ ರೋಗಿಯ ಅನುಮತಿ ಮೇರೆಗೆ ಶಸ್ತ್ರ ಚಿಕಿತ್ಸೆಗೆ ಒಳಪಡಿಸಲಾಯಿತು. 4 ಗಂಟೆಗೂ ಅಧಿಕ ಸಮಯ ಶಸ್ತ್ರಚಿಕಿತ್ಸೆ ನಡೆಸಿದ ವೈದ್ಯರ ತಂಡ, ಮಹಿಳೆಯ ಅಂಡಾಶಯದಿಂದ 6 ಕೆಜಿ. ಗೆಡ್ಡೆಯನ್ನು ಹೊರ ತೆಗೆಯುವಲ್ಲಿ ಯಶಸ್ವಿಯಾಯಿತು. ನಂತರ ಪರೀಕ್ಷೆಗೆ ಒಳಪಡಿಸಿದಾಗ ಅದು ಕ್ಯಾನ್ಸರ್ ಗೆಡ್ಡೆ ಎಂದು ತಿಳಿದು ಬಂದಿದೆ. ಶಸ್ತ್ರ ಚಿಕಿತ್ಸೆಯ ನಂತರ ಮಹಿಳೆ ಬಹುಬೇಗ ಗುಣಮುಖರಾಗಿದ್ದು, ಕ್ಯಾನ್ಸರ್‌ನ ಸಂಪೂರ್ಣ ಚಿಕಿತ್ಸೆಗಾಗಿ ಕೀಮೋಥೆರಪಿ ನಡೆಸಲಾಗುತ್ತಿದೆ.

ವೈದ್ಯರಾದ ಕನ್ಸಲ್ಟೆಂಟ್ ಆಂಕೋಸರ್ಜನ್ ಡಾ.ಎಂ.ಎಸ್.ಗಿರೀಶ್, ಕನ್ಸಲ್ಟೆಂಟ್ ಲ್ಯಾಪ್ರೋಸ್ಕೋಪಿಕ್ ಸರ್ಜನ್ ಡಾ.ಅರವಿಂದ್, ಡಾ.ಕೇಶವಮೂರ್ತಿ, ಡಾ.ಹರೀಶ್ ಕುಮಾರ್, ಅರಿವಳಿಕೆ ತಜ್ಞರ ಪರಿಶ್ರಮದಿಂದ ಶಸ್ತ್ರ ಚಿಕಿತ್ಸೆ ಯಶಸ್ವಿಯಾಗಿದ್ದು, ಮಹಿಳೆಗೆ ಮರುಜನ್ಮ ಸಿಕ್ಕಂತಾಗಿದೆ.

ಸಂತೇಬಾಚಹಳ್ಳಿ ಬಳಿ ಚಿರತೆ ದಾಳಿಗೆ ರೈತ ಬಲಿ

ಸಂತೇಬಾಚಹಳ್ಳಿ: ರಾತ್ರಿಯ ವೇಳೆ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ರೈತರೊಬ್ಬರ ಮೇಲೆ ಚಿರತೆ ದಾಳಿ ಮಾಡಿರುವ ಪರಿಣಾಮ ಆತ ಸಾವನ್ನಪ್ಪಿರುವ ಘಟನೆ ಬಿ.ಗಂಗನಹಳ್ಳಿ ಗ್ರಾಮದಲ್ಲಿ ಜರುಗಿದೆ.

ತಡವಾಗಿ ವರದಿಯಾದ ಪ್ರಕಟಣೆ

ಮರೀಗೌಡರ ಮಗ ಮಾಯಪ್ಪ (37) ಮೃತದೇಹ ಕೊಳೆತ ಸ್ಥಿತಿಯಲ್ಲಿ ಜಮೀನಿನ ಪಕ್ಕದ ಗುಡ್ಡದ ಬಳಿ ಇತ್ತೀಚೆಗೆ ಪತ್ತೆಯಾಗಿತ್ತು. ಕೃಷಿಯ ಜೊತೆಗೆ ಗಾರೆ ಕೆಲಸ ಮಾಡುತ್ತಿದ್ದ ಅವರು ಕಳೆದೊಂದು ವಾರದಿಂದ ಮನೆಗೆ ಬಂದಿರಲಿಲ್ಲ. ಕೆಲಸಕ್ಕೆ ತೆರಳಿರಬಹುದು ಎಂದು ಮನೆಯವರು ಭಾವಿಸಿದ್ದರು. ಸರ್ವೆ 31ರ ಗುಡ್ಡದ ಬಳಿ ಮೃತದೇಹ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಇದು ಮಾಯಪ್ಪ ಅವರ ಮೃತ ದೇಹ ಎಂದು ಅವರ ಪತ್ನಿ ರೇಖಾ ಹಾಗೂ ಕುಟುಂಬಸ್ಥರು ಗುರುತಿಸಿದರು. ಸ್ಥಳಕ್ಕೆ ಭೇಟಿ ನೀಡಿದ್ದ ಕಿಕ್ಕೇರಿ ಠಾಣೆ ಪೊಲೀಸರು ಪ್ರಕರಣ ದಾಖಲು ಮಾಡಿಕೊಂಡಿದ್ದರು. ಚಿರತೆ ದಾಳಿಯಿಂದ ಅವರು ಮೃತಪಟ್ಟಿದ್ದಾರೆ ಎಂದು ಕುಟುಂಬಸ್ಥರು ದೂರು ನೀಡಿದ್ದರು. ಈ ಭಾಗದಲ್ಲಿ ಚಿರತೆ ಕಾಣಿಸಿಕೊಂಡ ಕಾರಣ ಬೋನು ಇಡಲಾಗಿತ್ತು ಆಗಾಗ ಚಿರತೆ ಓಡಾಡುವ ಬಗ್ಗೆ ಅಕ್ಕಪಕ್ಕದ ಗ್ರಾಮಸ್ಥರು ಅರಣ್ಯ ಇಲಾಖೆಗೆ ದೂರು ನೀಡಿದ್ದರು.

ವಲಯ ಅರಣ್ಯಾಧಿಕಾರಿ ಎಚ್.ಎಸ್. ಗಂಗಾಧರ್ ಗ್ರಾಮಕ್ಕೆ ಭೇಟಿ ನೀಡಿ ಮಾಯಪ್ಪ ಕುಟುಂಬಕ್ಕೆ ಸಾಂತ್ವನ ಹೇಳಿದರು. ಇಲಾಖೆಯಿಂದ ಪರಿಹಾರ ಕೊಡಿಸುವುದಾಗಿ ಭರವಸೆ ನೀಡಿದರು. ಈ ಭಾಗದಲ್ಲಿ ಕಾಣಿಸಿಕೊಳ್ಳುತ್ತಿರುವ ಚಿರತೆ ದಾಳಿ ತಡೆಯುವಂತೆ ಅಕ್ಕಪಕ್ಕದ ಗ್ರಾಮಸ್ಥರು ಒತ್ತಾಯಿಸಿದರು.



ಮೈಸೂರು ತಾಲೂಕು ಜಯಪುರ ಗ್ರಾಮದ ಜನಸೇವಾ ಸಂಘದ ವತಿಯಿಂದ ಆಯೋಜಿಸಿರುವ ಕ್ರಿಕೆಟ್ ಪಂದ್ಯಾವಳಿಯ ಟ್ರೋಫಿಯನ್ನು ಉದ್ಯಮಿ ಎಸ್.ಶ್ರೀಕಾಂತ್ ಅನಾವರಣಗೊಳಿಸಿದರು. ಈ ವೇಳೆ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರಿದ್ದರು.

ಮೈಸೂರಲ್ಲಿ ಪ್ರೇಕ್ಷಕರ ಮನಸೂರೆಗೊಂಡ 'ಸಾಂಸ್ಕೃತಿಕ ವೈಭವ'

ವಚನ ಗಾಯನ, ಜಾನಪದ ಕುಣಿತ, ಗೀತೆಗಳ ಗಾಯನ, ಫ್ಯಾಷನ್ ಶೋ ಅನಾವರಣ





ಮೈಸೂರು, ಜ.22(ಎಸ್‌ಪಿಎನ್)–ನಗರದ ಕಲಾಮಂದಿರದಲ್ಲಿ ಭಾನುವಾರ ನಡೆದ 'ಸಾಂಸ್ಕೃತಿಕ ವೈಭವ' ಪ್ರೇಕ್ಷಕರ ಮನ ಸೂರೆಗೊಂಡವು.

ಬೆಂಗಳೂರು ಸಮರ್ಥ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ, ಮೈಸೂರು ವಾಸವಿ ಯುವಜನ ಸಂಘ, ಮೈಸೂರು ಹಳ್ಳೂರು ಹನುಮಂತಪ್ಪ ಚಾರಿಟಬಲ್ ಟ್ರಸ್ಟ್, ಮೈಸೂರಿನ ಎಲ್ಲಾ ಆರ್ಯವೈಶ್ಯ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಹಿರಿಯ ರಂಗಕರ್ಮಿ ಡಿ.ವಿ.ಎಸ್.ಗುಪ್ತಾ ಪರಿಕಲ್ಪನೆ ಮತ್ತು ನೇತೃತ್ವದಲ್ಲಿ ನ್ಯಾಯಮೂರ್ತಿ ಕೆ.ವಿ.ವಾಸುದೇವಮೂರ್ತಿ ಸ್ಮಾರಕ ವೇದಿಕೆಯಲ್ಲಿ ಸಾಂಸ್ಕೃತಿಕ ವೈಭವದ ರಾಜ್ಯ ವಿವಿಧೆಡೆ ಯಿಂದ ಆಗಮಿಸಿದ್ದ ಕಲಾತಂಡಗಳು ಸಾಂಸ್ಕೃತಿಕ ವೈಭವದಲ್ಲಿ ಭಾನುವಾರ ಅದ್ಧೂರಿ ಪ್ರದರ್ಶನ ನೀಡಿದವು.

ಸಾಂಸ್ಕೃತಿಕ ವೈಭವದ ಮುಕ್ತಾಯ ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ತುಮಕೂರಿನ ಉದ್ಯಮಿ ಆರ್.ಎಲ್.ರಮೇಶ್ ಬಾಬು ಮಾತನಾಡಿ, ನಾವು ಪರಸ್ಪರ ನಂಬಿಕೆ ಮೇಲೆ ಬದುಕುತ್ತಿದ್ದೇವೆ. ಸಮಾಜವೂ ಪರಸ್ಪರ ನಂಬಿಕೆ ಮೇಲೆ ಸಾಕಷ್ಟು ವಿಶ್ವಾಸವಿಟ್ಟಿದೆ. ಈ ಸಂಬಂಧಕ್ಕೆ ನಮ್ಮ ಚ್ಯುತಿ ಬಾರದಂತೆ ವಿವಿಧ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ನಮ್ಮ ಸಮಾಜದ ಬಂಧುಗಳು ತಮ್ಮ ಬದುಕು ರೂಪಿಸಿಕೊಳ್ಳಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ನಾವು ಎಷ್ಟು ದಿನ ಬದುಕುತ್ತೇವೆ ಎಂಬುದು ಮುಖ್ಯವಲ್ಲ. ಆದರೆ, ನಾವು ಬದುಕಿರುವವರೆಗೆ ಬೇರೆ ಸಮುದಾಯಗಳೊಂದಿಗೆ ಬೆರೆತು ಬದುಕು ನಡೆಸುವುದು ಮುಖ್ಯ. ಸಮಾಜದಲ್ಲಿರುವ ಅನೇಕ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸಲು ಸಾಧ್ಯವಿಲ್ಲ. ಹಾಗಾಗಿ ತೊಂದರೆಯಲ್ಲಿರುವವರಿಗೆ ತಮ್ಮ ಕೈಲಾದಷ್ಟು ನೆರವು ನೀಡಿ, ಬದುಕಿನ ಶ್ರೇಷ್ಠತೆ ಬೆಳೆಸಿಕೊಳ್ಳುವಂತೆ ಮನವಿ ಮಾಡಿದರು.

ಇದಕ್ಕೂ ಮುನ್ನ ಸಾಂಸ್ಕೃತಿಕ ವೈಭವಕ್ಕೆ ಶಾಸಕ ಎಲ್.ನಾಗೇಂದ್ರ ಚಾಲನೆ ನೀಡಿ, ಶುಭ ಹಾರೈಸಿದರು. ಲಕ್ಷ್ಮಿ ಸತೀಶ್ ಪಾಂಚಜನ್ಯ ಮೊಳಗಿಸಿದರು. ಮೈಸೂರಿನ ಶ್ರೀ ಸಾಯಿ ಪ್ರಣತಿ ಸೇವಾ ಟ್ರಸ್ಟ್‌ನ ವಿದ್ಯಾರ್ಥಿಗಳು ವೇದಘೋಷ ಪಠಿಸಿದರು. ಹರ್ಷಿತ ಮತ್ತು ತಂಡದವರು ನಾಡಗೀತೆ ಹಾಡಿದರು. ನಂತರ ಮೈಸೂರಿನ ವಿದುಷಿ ಕೆ.ಆರ್.ಶ್ರಾವಣಿ ಶಿಷ್ಯವೃಂದದಿಂದ 'ಚಾರಿ ಡಿವೈನ್ ಸ್ಟೇಪ್ಸ್ ಟು ಡ್ಯಾನ್ಸ್' ಪ್ರದರ್ಶನ ಎಲ್ಲರ ಗಮನ ಸೆಳೆಯಿತು. ಚಿಕ್ಕಮಗಳೂರಿನ ರಾಗ–ತಾಳ ತಂಡದ ಕಲಾವಿದರು ದಾಸರ ಪದಗಳನ್ನು ಹಾಡಿ ಎಲ್ಲರ ಮನಸೂರೆಗೊಂಡರು.

ಕಡೂರು ಶ್ರೀವಾರಿ ಭಜನಾ ಸಂಘದ ಕಲಾವಿದರು ವಚನಗಳ ಗಾಯನ ಎಲ್ಲರ ಗಮನ ಸೆಳೆಯಿತು. ಶಿವಮೊಗ್ಗದ ಭಾವ–ಬಿಂದು ತಂಡ ಸಂಪ್ರದಾಯ ಗೀತೆಗಳನ್ನು ಹಾಡಿತು. ವೀರಗಾಸೆ, ಪಟಕುಣಿತ, ಪೂಜಾ ಕುಣಿತ, ಕರಗ, ಸುಗ್ಗಿ ಕುಣಿತ, ಸಾಗರದ ವಾಸವಿ ಚಂಡೆ ಬಳಗದ ಕಲಾವಿದರಿಂದ ಚಂಡೆ ವಾದನ ಎಲ್ಲರ ಗಮನ ಸೆಳೆಯಿತು.

ಬೆಂಗಳೂರಿನ ಸ್ವರ ಮಾಧುರ್ಯ ತಂಡದವರಿಂದ ಮುಕ್ತಕಗಳ ಗಾಯನ, ಮೈಸೂರಿನ ಪುಟಾಣಿಗಳಿಂದ ಕೋಲಾಟ, ಯಲ್ಲಮ್ಮನ ಕುಣಿತ, ಕಂಸಾಳೆ, ಮೈಸೂರು ಗೌರವ್ ಸುಧಾ ಮುರಳಿ ನಿರ್ದೇಶನದ 94ನೇ ಅಮೋಘ ಪ್ರದರ್ಶನ ನೀಡಿ, ಪ್ರೇಕ್ಷಕರ ಮೆಚ್ಚುಗೆ ಗಳಿಸಿದ್ದರು.

ಮೈಸೂರಿನ ಮಹಿಳಾ ಕಲಾವಿದರು ವಿವಿಧ ಜಾನಪದ ಗೀತೆಗಳನ್ನು ಹಾಡಿ, ಪ್ರೇಕ್ಷಕರ ಮನಗೆದ್ದರಲ್ಲದೆ, ಶಿಲ್ಪ ಸಂದೀಪ್ ತಂಡದಿಂದ ವಿವಿಧ ನೃತ್ಯ ಪ್ರಾಕಾರಗಳ ಪ್ರದರ್ಶಿಸಿದರು. ತಾಯಿ ಮತ್ತು ಮಗು ದೇಸೀ ಫ್ಯಾಷನ್ ಶೋ, ವಾಸವಿ ಯುವಜನ ಸಂಘದಿಂದ ಚಂಡೆ ವಾದನ, ಪುಟಾಣಿಗಳಿಂದ ಫ್ಯಾಷನ್ ಶೋ ಸೇರಿದಂತೆ ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳು ಅಮೋಘವಾಗಿ ಮೂಡಿ ಬಂದಿತು.

ಈ ವೇಳೆ ಕರ್ನಾಟಕ ಆರ್ಯವೈಶ್ಯ ಮಹಿಳಾ ಮಹಾಸಭಾ ಉಪಾಧ್ಯಕ್ಷೆ ವಿನೋದಾ ವರದರಾಜ್, ಧಾತ್ರಿಹವನ ಸಮಾರಾಧನದ ಅಧ್ಯಕ್ಷ ಎಂ.ಎಸ್.ನಾಗರಾಜು ಗುಪ್ತ ಸಮರ್ಥ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ರಾ.ವಿಜಯಸಮರ್ಥ, ಹಿರಿಯ ರಂಗಕರ್ಮಿ ಡಿವಿಎಸ್ ಗುಪ್ತಾ, ವನ್ಯಜೀವಿ ಛಾಯಾಗ್ರಾಹಕ ತಿಪ್ಪೇಸ್ವಾಮಿ, ಮುಖಂಡರಾದ ಡಾ.ಪಿ.ಎಚ್.ರಾಘವೇಂದ್ರ ಶೆಟ್ಟಿ, ಕೆ.ವಿ. ವಿಶ್ವನಾಥ ಖರೀಧಿ, ವಾಸವಿ ಯುವಜನ ಸಂಘದ ಅಧ್ಯಕ್ಷ ಬಿ.ನಾಗೇಶ್, ಶ್ರೀ ಕನ್ಯಾಕುಮಾರಿ ಕೋ –ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಹೆಚ್.ಎಂ.ಸಂದೀಪ್, ಮಾಜಿ ಅಧ್ಯಕ್ಷ ಎಂ.ಬದರೀಶ್, ಮೈಸೂರಿನ ವಾಸವಿ ಮಹಿಳಾ ಮಂಡಳಿಗಳ ಒಕ್ಕೂಟದ ಅಧ್ಯಕ್ಷೆ ಲಕ್ಷ್ಮಿ ದಿನೇಶ್ ಸೇರಿದಂತೆ ಇತರೆ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಮತದಾರರಿಗೆ ಸರ್ಕಾರದ ಯೋಜನೆಗಳನ್ನು ತಿಳಿಸಿ

ಕಾರ್ಯಕರ್ತರಿಗೆ ರಾಜ್ಯ ಬಿಜೆಪಿ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಕರೆ

ತಿ.ನರಸೀಪುರ, ಜ.22– ಕಾರ್ಯಕರ್ತರು ಕ್ಷೇತ್ರದ ಪ್ರತಿ ಮನೆ, ಮತಗಟ್ಟೆಗಳಿಗೆ ಭೇಟಿ ನೀಡಿ ಮತದಾರರಿಗೆ ಸರ್ಕಾರದ ಯೋಜನೆಗಳನ್ನು ತಿಳಿಸಬೇಕು ಎಂದು ರಾಜ್ಯ ಬಿಜೆಪಿ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಕರೆ ನೀಡಿದರು.

ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಗರ್ಲೆ ಗ್ರಾಮದಲ್ಲಿ ವಿಜಯ ಸಂಕಲ್ಪ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಳೆದ 9 ವರ್ಷಗಳಿಂದ ಅಧಿಕಾರ ನಡೆಸುತ್ತಿರುವ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರ ಅಭಿವೃದ್ಧಿ ಹಾಗೂ ಸಮಾಜದ ದೃಷ್ಟಿಯಿಂದ ಉತ್ತಮ ಪ್ರಗತಿ ಸಾಧಿಸಿದೆ. ಸಣ್ಣ ರೈತರ ಕೃಷಿ ಚಟುವಟಿಕೆಗಳಿಗೆ ಕಿಸಾನ್ ಸಮ್ಮಾನ್ ಯೋಜನೆಯಡಿ ಪ್ರತಿ ವರ್ಷ ರೈತರ ಖಾತೆಗಳಿಗೆ 3 ಕಂತಿನಲ್ಲಿ 10 ಸಾವಿರ ರೂ. ಜಮಾ ಮಾಡುತ್ತಾ ಬಂದಿದೆ. ಯೋಜನೆ ಲಾಭ ಪಡೆಯಲು ಯಾವುದೇ ರೈತ ಅರ್ಜಿ ಹಾಕಲಿಲ್ಲ ಬ್ಯಾಂಕುಗಳ ಮುಂದೆ ಕ್ಯೂ ನಿಲ್ಲಲಿಲ್ಲ ಅಥವಾ ಇದನ್ನು ಪಡೆಯಲೂ ಯಾರಿಗೂ ಲಂಚ ನೀಡಲಿಲ್ಲ. ಸಹಾಯ ಧನದ ಹಣ ನೇರವಾಗಿ ರೈತನ ಖಾತೆ ಜಮೆಯಾಗುತ್ತಿದೆ ಎಂದರು.

ಬಿಜೆಪಿ ಸರ್ಕಾರ ಇತ್ತೀಚೆಗೆ ಪ.ಜಾತಿ ಮತ್ತು ಪ.ವರ್ಗದವರ ಮೀಸಲಾತಿಯನ್ನು ಶೇ.7ರಷ್ಟು ಹೆಚ್ಚಿಸುವ ಮೂಲಕ ಹಿಂದುಳಿದವರ ಆರ್ಥಿಕ ಮತ್ತು ಸಾಮಾಜಿಕ, ಶೈಕ್ಷಣಿಕ ಪ್ರಗತಿಗೆ ಸಹಕಾರ ನೀಡಿದೆ. ಮೀಸಲಾತಿ ಹೆಚ್ಚು ಮಾಡಲು ಸರ್ಕಾರ ಯಾವುದೇ ಹೊಸ ಜಾತಿ ಸೇರಿಸಲಿಲ್ಲ. ಇರುವ ಜಾತಿಗಳಿಗೆ ನ್ಯಾಯ ಕೊಡಲು ಮೀಸಲಾತಿ ಹೆಚ್ಚು ಮಾಡಿದೆ ಎಂದರು.

ಜಾತಕ ಪುರಾಣ ಸಾಕಷ್ಟಿದೆ: ವರುಣಾದಲ್ಲಿ ಕಳೆದ



70 ವರ್ಷದಿಂದ ಆಯ್ಕೆಯಾಗಿರುವ ಜನಪ್ರತಿನಿಧಿಗಳು ಯಾರು ನ್ಯಾಯ ದೊರಕಿಸಿಕೊಟ್ಟರು. ಯಾರು ಅನ್ಯಾಯ ಮಾಡಿದ್ದಾರೆ ಎಂಬುದು ಗೊತ್ತಿದೆ. ಅವರ ಜಾತಕ, ಪುರಾಣ ಬಿಚ್ಚಿಟ್ಟರೆ ನಾವು ತುಂಬಾ ಸಂಗತಿ ಹೇಳುತ್ತಾ ಹೋಗಬಹುದು. ವ್ಯಕ್ತಿಗತ ಅಹಂಕಾರದಿಂದ, ಜಾತಿಗಳ ಮಧ್ಯೆ ಸಂಘರ್ಷ ತಂದಿಡುವುದರಿಂದ ಹಿಡಿದು ಅಭಿವೃದ್ಧಿ ಕೆಲಸ ಬಿಟ್ಟು ಉಳಿದೆಲ್ಲವನ್ನು ಮಾಡುವ ಶಾಸಕರು ಮತ್ತು ಸಂಸದರು ಸಿಕ್ಕಿದ್ದರು ಎಂದು ಸಿದ್ದರಾಮಯ್ಯ ಹೆಸರೇಳದೇ ವ್ಯಂಗ್ಯವಾಡಿದರು. ಅದರೀಗ ನಮ್ಮ ಸಂಸದರು ಜನಕ್ಕೆ ಬೇಕಾದ ಉಪಯುಕ್ತ ಕೆಲಸ ಮಾಡುತ್ತಾ ಬಂದಿದ್ದಾರೆ. ಬಿಜೆಪಿ ಸರ್ಕಾರ ಈ ನಿಟ್ಟಿನಲ್ಲಿ ಉತ್ತಮ ಯೋಜನೆಗಳೊಂದಿಗೆ ಜನಮೆಚ್ಚುವ ಕೆಲಸ ಮಾಡುತ್ತಾ ಬಂದಿದೆ. ಇದನ್ನು ನಮ್ಮ ಕಾರ್ಯಕರ್ತರು ಜನರಿಗೆ ಹೇಳುವ ಕೆಲಸ ಮಾಡಬೇಕಿದೆ. ಪ್ರತಿ ಮನೆಗೆ ಹೋಗಿ ಕರಪತ್ರ ಹಂಚುವ, ಸ್ಟಿಕ್ಕರ್ ಅಂಟಿಸುವ ಜೊತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳ ಬಗ್ಗೆ ಮತದಾರರಿಗೆ ಮನದಟ್ಟು ಮಾಡಬೇಕು. ಆ ಮೂಲಕ ಮತ್ತಷ್ಟು ಕೆಲಸ ಮಾಡಲು ಆಶೀರ್ವಾದ ಕೇಳಬೇಕು ಎಂದು ಮನವಿ ಮಾಡಿದರು.

ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಮಾತನಾಡಿ, ಸರ್ಕಾರದ ಸಾಧನೆಗಳ ಬಗ್ಗೆ ಜನರಿಗೆ ತಿಳಿಸುವ ಜೊತೆಗೆ ಪ್ರತಿಯೊಬ್ಬ ಮತದಾರರನ್ನು ಬಿಜೆಪಿಯೊಂದಿಗೆ ಜೋಡಿಸುವ ಯತ್ನ ಮಾಡಬೇಕು. ಕಾರ್ಯಕರ್ತರು ಯಾವುದೇ ಮನೆಗಳನ್ನು ಬಿಡದೇ ಮನೆ ಮನೆಗೆ ತೆರಳಿ ಸರ್ಕಾರದ ಸಾಧನೆಗಳನ್ನು ತಿಳಿಸುವಂತೆ ಮನವಿ ಮಾಡಿದರು.

ರಾಜ್ಯ ಪ್ರವಾಸೋದ್ಯಮ ನಿಗಮದ ಅಧ್ಯಕ್ಷ ಕಾಪು ಸಿದ್ದಲಿಂಗಸ್ವಾಮಿ, ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಕ್ಷೇತ್ರಾಧ್ಯಕ್ಷ ಕಲ್ಮಳ್ಳಿ ವಿಜಯಕುಮಾರ್, ಪ್ರಧಾನ ಕಾರ್ಯದರ್ಶಿ ಎ.ಎನ್.ರಂಗೂನಾಯಕ್, ಸಂಚಾಲಕ ವೆಂಕಟರಮಣಶೆಟ್ಟಿ, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಸಿ.ಎಂ. ಮಹದೇವಯ್ಯ, ತಾಪಂ ಮಾಜಿ ಅಧ್ಯಕ್ಷ ಕೃಷ್ಣಮೂರ್ತಿ, ಎಪಿಎಂಸಿ ಮಾಜಿ ಅಧ್ಯಕ್ಷ ಚಿನ್ನಂಬಳ್ಳಿ ಮಂಜು, ಮಾಜಿ ಜಿಪಂ ಅಧ್ಯಕ್ಷ ಕಾಪು ಸಿದ್ದವೀರಪ್ಪ, ಕುಪ್ಪರವಳ್ಳಿ ಬಿ. ಶಿವಣ್ಣ ಸೇರಿದಂತೆ ಮುಖಂಡರು, ಕಾರ್ಯಕರ್ತರು ಹಾಜರಿದ್ದರು.

ಬಿ.ಎಲ್.ಸಂತೋಷ್ ಸುತ್ತೂರು ಜಾತ್ರೆಯಲ್ಲಿ ಪಾಲ್ಗೊಳ್ಳುವ ಮೊದಲು ನಗರ್ಲೆ ಗ್ರಾಮಕ್ಕೆ ಆಗಮಿಸಿ ವಿಜಯ ಸಂಕಲ್ಪ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ ಎಂಬ ಸುದ್ದಿ ತಿಳಿಯುತ್ತಿದ್ದಂತೆ ಕ್ಷೇತ್ರದ ಟಿಕೆಟ್ ಆಕಾಂಕ್ಷಿಗಳ ದಂಡೇ ಅವರ ಬರುವಿಕೆಗಾಗಿ ಕಾದು ಕುಳಿತ್ತಿತ್ತು.

ಎಂಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಬಿ.ಎನ್.ಸದಾನಂದ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಾಗೂ ಸಂಚಾಲಕ ದೇವನೂರು ಪ್ರತಾಪ್, ಕುಪ್ಪರವಳ್ಳಿ ಶಿವಣ್ಣ, ತೋಟದಪ್ಪ ಬಸವರಾಜು, ಮಾಜಿ ಜಿಪಂ ಸದಸ್ಯೆ ಮಮತ, ಕಾಪು ಸಿದ್ದಲಿಂಗಸ್ವಾಮಿ, ಮಂಗಳಾ ಸೋಮಶೇಖರ್, ಶರತ್ ಪುಟ್ಟಬುದ್ದಿ ಸೇರಿದಂತೆ ಮತ್ತಿತರ ಆಕಾಂಕ್ಷಿಗಳು ಬೆಳಗ್ಗೆಯೇ ಗ್ರಾಮಕ್ಕೆ ಆಗಮಿಸಿದ್ದರು. ಸಂತೋಷ್ ಬರುತ್ತಿದ್ದಂತೆ ನಾಮುಂದೆ ತಾಮುಂದೆ ಎಂಬಂತೆ ತಮ್ಮ ಇರುವಿಕೆ ಗುರುತಿಸಿಕೊಳ್ಳಲು ಮುಂದಾಗಿದ್ದು ಕಂಡು ಬಂತು.

ರಸ್ತೆ, ಸೇತುವೆ ನಿರ್ಮಾಣಕ್ಕೆ ಗುದ್ದಲಿ ಪೂಜೆ



ಕಂಪಲಾಪುರ, ಜ.22– ತಾಲೂಕಿನ ಅಭಿವೃದ್ಧಿ ಕೆಲಸಗಳನ್ನು ನಾನು ಬಿಟ್ಟು ಹೋದ 90 ಕೋಟಿ ರೂ.ನಲ್ಲಿ ಮಾಡಲಾಗುತ್ತಿದೆ ಎಂದು ಮಾಜಿ ಶಾಸಕರು ಸುಳ್ಳು ಹೇಳುವ ಮೂಲಕ ನನ್ನ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಶಾಸಕ ಕೆ.ಮಹದೇವ್ ತಿಳಿಸಿದರು.

ಗ್ರಾಮದಲ್ಲಿ 20 ಲಕ್ಷ ವೆಚ್ಚದ ಸಿಸಿ ರಸ್ತೆಗೆ ಹಾಗೂ ಬಸಲಾಪುರ ಗೇಟ್‌ನಲ್ಲಿ 30 ಲಕ್ಷ ವೆಚ್ಚದ ಸೇತುವೆ ನಿರ್ಮಾಣಕ್ಕೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಗುದ್ದಲಿ ಪೂಜೆ ಮಾಡಿ ಜನರ ಕಿವಿಗೆ ಹೂ ಮುಡಿಸಿ ಹೋಗುವ ಜಾಯಮಾನ ನನ್ನದಲ್ಲ. ನಿಮ್ಮ ವಯಸ್ಸಿಗೆ, ಅನುಭವಕ್ಕೆ ತಕ್ಕಂತೆ ಮಾತನಾಡಿ. ಒಬ್ಬ ಜನಪ್ರತಿನಿಧಿ ಜನರಿಗೆ ಸುಳ್ಳು ಹೇಳಬಾರದು. ಕಾಳಜಿ ಇಲ್ಲದ ಮೇಲೆ ಜನಸೇವೆಗೆ ಬರಬಾರದು. ಸರ್ಕಾರ ಬೇರೆ ಇದ್ದರೂ ಕ್ಷೇತ್ರದ ಜನರಿಗೆ ಅನ್ಯಾಯವಾಗದಂತೆ ಸರ್ಕಾರದಿಂದ ಅನುದಾನ ತಂದು ಕೆಲಸ ಮಾಡಿದ್ದೇನೆ. ಬೇರೆಯವರ ಅನುದಾನವನ್ನು ನಾನೇಕೆ ಬಳಸಿಕೊಳ್ಳಲಿ. ವರ್ಷದ ಮಾರ್ಚ್‌ನಿಂದ ಮಾರ್ಚ್‌ವರೆಗೆ ಬರುವ ಅನುದಾನವನ್ನು ಕಡ್ಡಾಯವಾಗಿ ಶಾಸಕರು ಬಳಸಿಕೊಳ್ಳಬೇಕು. ಇಲ್ಲವಾದರೆ ಸರ್ಕಾರಕ್ಕೆ ಅನುದಾನ ವಾಪಸ್ ಹೋಗುತ್ತದೆ. ಮಾಜಿ ಶಾಸಕರು ಕನಿಷ್ಠ ಪ್ರಜ್ಞೆ ಇಟ್ಟುಕೊಂಡು ಮಾತಾಡಬೇಕು ಎಂದರು.

ನಾನು ಮಾಡುತ್ತಿರುವ ಅಭಿವೃದ್ಧಿ ಕಾಮಗಾರಿಗಳಲ್ಲಿ ಯಾವುದೇ ಲೋಪವಿದ್ದರೆ ಸರ್ಕಾರದ ಗಮನಕ್ಕೆ ತಂದು ಅಂಕಿಅಂಶಗಳನ್ನು ತರಿಸಿ ತನಿಖೆ ಮಾಡಿಸಿ, ನಿಜವಾದರೆ ರಾಜಕೀಯ ನಿವೃತ್ತಿ ಹೊಂದುತ್ತೇನೆ ಎಂದು ಸವಾಲು ಹಾಕಿದರು.

ಕಂಪಲಾಪುರ ತಾಲೂಕಿಗೆ ದೊಡ್ಡ ಗ್ರಾಮ. 2007ರಲ್ಲಿ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಈ ಊರಿಗೆ ಸುವರ್ಣ ಗ್ರಾಮ ಯೋಜನೆಯಡಿ 1 ಕೋಟಿ ಬಿಡುಗಡೆ ಮಾಡಿಸಿದ್ದೆ. ಆದ್ದರಿಂದ ತಾಲೂಕಿನ ಬೇರೆ ಗ್ರಾಮಕ್ಕೆ ಕೊಟ್ಟ ಅನುದಾನಕ್ಕಿಂತ ಹೆಚ್ಚು ನೀಡಿದ್ದು ಇದು ನನ್ನ ತವರುಮನೆ ಎಂದರು.

ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಟಿಎಪಿಸಿಎಂಎಸ್ ಅಧ್ಯಕ್ಷ ನಾಗೇಂದ್ರ, ನಿರ್ದೇಶಕ ಕೆ.ಕುಮಾರ್, ಡೇರಿ ಅಧ್ಯಕ್ಷ ಕೃಷ್ಣೇಗೌಡ, ಜೆಇ ಚಂದ್ರಶೇಖರ್, ಕೊಪ್ಪಲು ಡೇರಿ ಅಧ್ಯಕ್ಷ ಕೆ.ಎಂ.ಲಕ್ಷ್ಮಣ್, ಸಹಕಾರ ಸಂಘದ ಅಧ್ಯಕ್ಷ ಕೆ.ಎನ್.ಜಯಣ್ಣ, ಪಿಡಿಓ ಪರಮೇಶ್, ಕಾರ್ಯದರ್ಶಿ ಸುಷ್ಮಾ, ನಾಗೇಗೌಡ, ರವಿ, ಅಲ್ಪ ಸಂಖ್ಯಾತರ ಘಟಕದ ಸೈಪುಲ್ಲಾ, ಗ್ರಾಪಂ ಸದಸ್ಯೆ ಕವಿತಾ, ಪ್ರತಿಭಾ, ನಾಗರಾಜ್, ಮಾಜಿ ಅಧ್ಯಕ್ಷ ಕೃಷ್ಣ, ಗಿರೀಶ್, ಲಕ್ಷ್ಮೀ, ಆಸೀಫ್, ಲೋಕೇಶ್, ರಿಜ್ವಾನ್, ಮುಜಾಮಿಲ್ ಮತ್ತಿತರರಿದ್ದರು.

ಸಿ.ವಿನಯ್ ಕುಮಾರ್‌ಗೆ ಪಿಹೆಚ್.ಡಿ



ಮೈಸೂರು, ಜ.22– ಡಾ.ಎಂ. ಕುಮಾರಸ್ವಾಮಿ ಅವರ ಮಾರ್ಗದರ್ಶನದಲ್ಲಿ ಸಿ. ವಿನಯ್ ಕುಮಾರ್ ಅವರು ವಾಣಿಜ್ಯ ಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ



ಸರಗೂರು, ಜ.22– ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇಲ್ಲದಿದ್ದರೂ, ಕ್ಷೇತ್ರದ ಅಭಿವೃದ್ಧಿಗೆ ಶಕ್ತಿಮೀರಿ ಶ್ರಮಿಸುತ್ತಿರುವುದಾಗಿ ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ದಡದಹಳ್ಳಿ ಗೇಟ್ ರಸ್ತೆ, ಸಾಗರೆ, ಹಂಚೀಪುರ, ಸಿದ್ದಾಪುರ, ಬಂಕವಾಡಿ, ಮುಗುತನಮೂಲೆ, ಶಿವಪುರ, ಕುರ್ಣೇಗಾಲ ಗ್ರಾಮಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ಕ್ಷೇತ್ರದ ಅಭಿವೃದ್ಧಿ ಕೈಗೊಳ್ಳುವ ಮೂಲಕ ಹಿಂದುಳಿದ ತಾಲೂಕು ಎಂಬ ಹಣೆಪಟ್ಟಿ ತೊಡೆದು ಹಾಕಲು ಮುಂದಾಗುತ್ತಿದ್ದೇನೆ ಎಂದರು.

ಜಾತಿ, ಮತ, ಭೇದ ಎಣಿಸದೇ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿ ವೀರಶೈವರು, ಪರಿಶಿಷ್ಟರು ಸೇರಿದಂತೆ ಸರ್ವ ಜನಾಂಗ ವಾಸಿಸುವ ಎಲ್ಲಾ ಗ್ರಾಮಗಳಿಗೆ ಮೂಲಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಪೂರಕವಾದ ಕೆಲಸ ಮಾಡಲಾಗುತ್ತಿದೆ. ಇದಕ್ಕಾಗಿ ಕೋಟ್ಯಾಂತರ ರೂ. ಅನುದಾನ ನೀಡಲಾಗಿದೆ ಎಂದರು.

ಜಿಪಂ ಮಾಜಿ ಸದಸ್ಯ ಪಿ.ರವಿ ಮಾತನಾಡಿದರು. ಈ ವೇಳೆ ದಡದಹಳ್ಳಿ ಮಠದ ಷಡಕ್ಷರ ಸ್ವಾಮೀಜಿ, ಹಂಚೀಪುರ ಗ್ರಾಪಂ ಅಧ್ಯಕ್ಷೆ ಗೀತಾ, ಉಪಾಧ್ಯಕ್ಷೆ ಮಂಜುಳಾ, ಜಿಪಂ ಮಾಜಿ ಸದಸ್ಯರಾದ ಪಿ.ರವಿ, ತಾಪಂ ಮಾಜಿ ಸದಸ್ಯ ಮಹದೇವಸ್ವಾಮಿ, ಶಿವಪ್ಪಾಜಿ, ಪುಟ್ಟಣ್ಣ ಯೂತ್ ಕಾಂಗ್ರೆಸ್ ಅಧ್ಯಕ್ಷ ಶಿವರಾಜು, ಅಭಿಕುಮಾರ್, ಪಪಂ ಸದಸ್ಯರಾದ ಶ್ರೀನಿವಾಸ್, ಚಲುವಕೃಷ್ಣ, ಎಪಿಎಂಸಿ ಮಾಜಿ ಸದಸ್ಯ ಸಿದ್ದರಾಜು, ಹೆಚ್.ಜೆ.ಸುರೇಶ್, ಗ್ರಾಪಂ ಸದಸ್ಯರಾದ ನಾಗರಾಜು, ವೆಂಕಟರಾಮು, ಬೆಟ್ಟಸ್ವಾಮಿ, ಮುಖಂಡರಾದ ಆನಂದ್, ಸಂತೋಷ್, ಭೀಮರಾಜ್, ಅಣ್ಣಯ್ಯಸ್ವಾಮಿ, ಹರಿದಾಸ್, ಲೋಕೋಪಯೋಗಿ ಇಲಾಖೆ ಇಂಜಿನಿಯರ್ ರಘು, ನೀರಾವರಿ ಇಲಾಖೆ ಇಂಜಿನಿಯರ್ ತಾಸಿಂಯಾ, ಮಧುಸೂದನ್, ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಗಜೇಂದ್ರ, ವನಸಿರಿ ಉಮೇಶ್, ಶಾಸಕರ ಆಪ್ತ ಸಹಾಯಕ ಮಂಜುನಾಥ ಸೇರಿದಂತೆ ಕಾಂಗ್ರೆಸ್ ಮುಖಂಡರು ಹಾಜರಿದ್ದರು.

ಕೋಟೆಯಲ್ಲಿ ಶಿವಕುಮಾರ ಶ್ರೀ, ಸಿದ್ದೇಶ್ವರ ಸ್ವಾಮೀಜಿ ಸ್ಮರಣೆ



ಹೆಚ್.ಡಿ.ಕೋಟೆ, ಜ.22– ಪಟ್ಟಣದ ಹಳೆ ಆಸ್ಪತ್ರೆ ಆವರಣದಲ್ಲಿ ತಾಲೂಕು ವೀರಶೈವ ಯುವ ಘಟಕದಿಂದ ಕಾಯಕಯೋಗಿ ಶಿವಕುಮಾರ ಸ್ವಾಮೀಜಿ ಹಾಗೂ ಸಿದ್ದೇಶ್ವರ ಸ್ವಾಮೀಜಿ ಅವರ ಪುಣ್ಯಸ್ಮರಣೆ ಹಾಗೂ ನಿತ್ಯ ದಾಸೋಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಸ್ವಾಮೀಜಿಗಳ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಶಾಸಕ ಅನಿಲ್ ಚಿಕ್ಕಮಾದು, ಈ ಹಿಂದೆ ಲಿಂಗೈಕ್ಯ ಶಿವಕುಮಾರ ಸ್ವಾಮೀಜಿ ಹಾಗೂ ಸಿದ್ದೇಶ್ವರ ಸ್ವಾಮೀಜಿಗಳು ತಾಲೂಕಿಗೆ ಭೇಟಿ ನೀಡಿದ್ದು, ಅವರ ಆಶೀರ್ವಾದದಿಂದ ತಾಲೂಕಿನ ಜನರು ಪುನೀತರಾಗಿದ್ದಾರೆ ಎಂದರು.

ಶಿವಕುಮಾರ ಸ್ವಾಮೀಜಿಗಳು ಬಡವರ್ಗದ ಮಕ್ಕಳಿಗೆ ವಿದ್ಯಾದಾನ, ಅನ್ನದಾನ ಹಾಗೂ ಜ್ಞಾನದಾನ ಮಾಡುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದು ಸ್ಮರಿಸಿದರು.

ಸಿದ್ದೇಶ್ವರ ಸ್ವಾಮೀಜಿಗಳು ನಾಡಿನಾದ್ಯಂತ ಸಂಚರಿಸಿ ತಮ್ಮ ವಚನಗಳ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಮುಂದಾಗಿದ್ದರು. ಸ್ವಾಮೀಜಿಗಳು ಉತ್ತಮ ವಾಗ್ಮಿಗಳಾಗಿ ದೇಶ ವಿದೇಶಗಳಲ್ಲಿ ಪ್ರವಚನ ನೀಡಿದ್ದರು. ಸಿದ್ದೇಶ್ವರ ಸ್ವಾಮಿಗಳು ಸುತ್ತೂರು ಶ್ರೀಗಳ ಜೊತೆ ಉತ್ತಮ ಒಡನಾಟ ಇಟ್ಟುಕೊಂಡಿದ್ದರು ಎಂದು ಸ್ಮರಿಸಿದರು. ರಾಜ್ಯದ ಮಠ ಮಾನ್ಯಗಳು ಶಿಕ್ಷಣ ಹಾಗೂ ದಾಸೋಹಕ್ಕೆ ಒತ್ತು ನೀಡುತ್ತಿರುವುದು ದೇಶದ ಬೆಳವಣಿಗೆಗೆ ಪೂರಕ ಎಂದರು.

ಕಾರ್ಯಕ್ರಮದಲ್ಲಿ ಬಿಡಗಲು ವಿರಕ್ತ ಪಡುವಲ ಮಠದ ಮಹದೇವಸ್ವಾಮೀಜಿ ಆಶೀರ್ವಚನ ನೀಡಿದರು. ಜಂಗಲ್ ಲಾಡ್ಜ್ ಅಂಡ್ ರೆಸಾರ್ಟ್ ಮಾಜಿ ಅಧ್ಯಕ್ಷ ಎಂ.ಅಪ್ಪಣ್ಣ, ಬಿಜೆಪಿ ಮುಖಂಡ ಡಾ.ಹೆಚ್.ವಿ.ಕೃಷ್ಣಸ್ವಾಮಿ, ಜೆಡಿಎಸ್ ಮುಖಂಡ ಜಯಪ್ರಕಾಶ್ ಚಿಕ್ಕಣ್ಣ, ಜಿಪಂ ಮಾಜಿ ಸದಸ್ಯ ಬಿ.ವಿ.ಬಸವರಾಜು, ರುದ್ರಪ್ಪ ರವಿ, ಟಿಎಪಿಸಿಎಂಎಸ್ ಅಧ್ಯಕ್ಷ ಮೊತ್ತ ಬಸವರಾಜಪ್ಪ ತಾಪಂ ಮಾಜಿ ಅಧ್ಯಕ್ಷ ಸಿ.ಕೆ.ಗಿರೀಶ್, ವೀರಶೈವ ಯುವ ಘಟಕದ ಅಧ್ಯಕ್ಷ ಅಭಿಕುಮಾರ್, ಕೆಂಡಗಣ್ಣಸ್ವಾಮಿ, ಸತೀಶ್ ಬಹದ್ದೂರ್, ಸುಂದರರಾಜು, ಮಂಜುಳ, ಶಿವರಾಜಪ್ಪ ಪುರಸಭಾ ಸದಸ್ಯರಾದ ಹೆಚ್.ಸಿ. ನರಸಿಂಹಮೂರ್ತಿ, ಮಧುಕುಮಾರ್, ನಂದೀಶ್, ಕನ್ನಡ ಪ್ರಮೋದ್, ವಿನಯ್ ಭಜರಂಗಿ, ಡೈರಿ ಶ್ರೀಕಾಂತ್, ಗಿರೀಶ್ ಮೂರ್ತಿ, ಸ್ವಾಮಿ, ಸಂತೋಷ್ ಇದ್ದರು.

ಜಗತ್ತು ಕಂಡ ಜ್ಞಾನಜ್ಯೋತಿ ಸಿದ್ಧಗಂಗಾಶ್ರೀಗಳು



ತಿ.ನರಸೀಪುರ, ಜ.22– ನಡೆದಾಡುವ ದೇವರಾಗಿ, ಅಕ್ಷರ ದಾಸೋಹದ ಮೂಲಕ ಲಕ್ಷಾಂತರ ಮಕ್ಕಳ ಭವಿಷ್ಯ ರೂಪಿಸಿದ ತುಮಕೂರು ಸಿದ್ಧಗಂಗಾ ಮಠದ ಡಾ.ಶಿವಕುಮಾರ ಸ್ವಾಮೀಜಿಗಳು ಜಗತ್ತು ಕಂಡ ಜ್ಞಾನಜ್ಯೋತಿ ಎಂದು ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಯುವ ಘಟಕದ ಅಧ್ಯಕ್ಷ ಬೆನಕನಹಳ್ಳಿ ವಿಜಯಕುಮಾರ್ ಬಣ್ಣಿಸಿದರು.

ಪಟ್ಟಣದ ವಿದ್ಯೋದಯ ಕಾಲೇಜು ವೃತ್ತದಲ್ಲಿ ನಡೆದ ಸಿದ್ಧಗಂಗಾ ಮಠದ ಡಾ.ಶಿವಕುಮಾರ ಸ್ವಾಮೀಜಿ ಅವರ ಪುಣ್ಯಸ್ಮರಣೆ ಹಾಗೂ ನಿತ್ಯ ದಾಸೋಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಧಾರ್ಮಿಕ ಮಠವೊಂದರ ಶ್ರೀಗಳಾಗಿ ಶಿವಕುಮಾರ ಸ್ವಾಮೀಜಿ ಅವರು ಜೀವನದ ಸಂಪೂರ್ಣ ಬದುಕನ್ನು ತ್ರಿವಿಧ ದಾಸೋಹಕ್ಕೆ ಮೀಸಲಿಟ್ಟು ಲಕ್ಷಾಂತರ ಮಕ್ಕಳ ಉಜ್ವಲ ಭವಿಷ್ಯಕ್ಕೆ ಭದ್ರ ಬುನಾದಿಯಾಗಿದ್ದಾರೆ ಎಂದರು.

ಪುರಸಭೆ ಸದಸ್ಯ ಎಸ್.ಕೆ.ಕಿರಣ್ ಮಾತನಾಡಿ, ಅಕ್ಷರ ದಾಸೋಹ ಕಾರ್ಯಕ್ರಮದ ಮೂಲಕ ಸಿದ್ಧಗಂಗಾ ಮಠದ ಖ್ಯಾತಿಯನ್ನು ಉತ್ತುಂಗಕ್ಕೆ ಏರಿಸಿದ ಕಾಯಕ ತಪಸ್ವಿ ಶ್ರೀಗಳು ಎಂದರು. ಇದೇ ವೇಳೆ ಸಿದ್ಧಗಂಗಾಶ್ರೀಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಲಾಯಿತು. ನಂತರ ಸಾರ್ವಜನಿಕರಿಗೆ ಉಪಹಾರ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಎಂ.ಎಲ್.ಹುಂಡಿ ಗೌರಿಶಂಕರ ಶ್ರೀಗಳು, ಗವಿಮಠದ ಮಲ್ಲಿಕಾರ್ಜುನ ಶ್ರೀಗಳು, ಸೇತುವೆ ಮಠದ ಸಹಜಾನಂದ ಶ್ರೀಗಳು, ಪ್ರಧಾನ ಕಾರ್ಯದರ್ಶಿ ಕಿರಗಸೂರು ಮಹದೇವಸ್ವಾಮಿ, ಉಪಾಧ್ಯಕ್ಷ ಅಡಿಗೆ ಪ್ರಭು, ಶಾಮಿಯಾನ ನಾಗೇಶ್, ಯೋಗೇಶ್, ಕಾರ್ಯದರ್ಶಿಗಳಾದ ಮಂಜುನಾಥ್, ಶಿವಪ್ರಸಾದ್, ಮಣಿಕಂಠ, ಕೀರ್ತಿ, ನಿರ್ದೇಶಕರಾದ ಸುನೀಲ್, ಮಹದೇವ ಪ್ರಸಾದ್, ಆನಂದ, ಗುರುಪ್ರಸಾದ್ ಮತ್ತಿತರರಿದ್ದರು.




ನಂಜನಗೂಡು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಕ್ಯಾಲೆಂಡರ್ ಅನ್ನು ಕೆಪಿಸಿಸಿ ಕಾರ್ಯದರ್ಶಿ ಗುರುಪಾದಪ್ಪ ಬಿಡುಗಡೆಗೊಳಿಸಿದರು. ಈ ವೇಳೆ ರೈತ ಸಂಘದ ಮುಖಂಡ ಹರತಲೆ ಕೆಂಪಣ್ಣ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಡಿವೈಎಸ್ಪಿ ಗೋವಿಂದರಾಜು, ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾ ಸಾಗರ್, ಆಯುಕ್ತ ರಾಜಣ್ಣ, ತಾಪಂ ಇಓ ಶ್ರೀನಿವಾಸ್, ಶ್ರೀಕಂಠೇಶ್ವರ ದೇವಾಲಯದ ಜಗದೀಶ್ ಕುಮಾರ್, ಸಂಘದ ಉಪಾಧ್ಯಕ್ಷ ಚಂದ್ರು, ಕಾರ್ಯದರ್ಶಿ ಮಹದೇವಸ್ವಾಮಿ, ಸದಸ್ಯರಾದ ವೆಂಕಟೇಶ್, ಬಸವರಾಜು, ನವೀನ್, ಸುಗಂಧರಾಜು ಮೂರ್ತಿ, ಪಿ.ಮಹೇಶ್, ಶಿವಕುಮಾರ್ ಇನ್ನಿತರರಿದ್ದರು.

ಸುತ್ತೂರಲ್ಲಿ ರಾಷ್ಟ್ರಮಟ್ಟದ ಕುಸ್ತಿ ಪಂದ್ಯಾವಳಿಗೆ ಸಿಎಂ ಚಾಲನೆ

ಬೆಳಗಾವಿಯ ಪೈ.ನಾಗರಾಜುಗೆ 'ಸುತ್ತೂರು ಕೇಸರಿ' ಪ್ರಶಸ್ತಿ, ಶ್ರೀರಂಗಪಟ್ಟಣದ ಮಂಜುಗೆ 'ಸುತ್ತೂರು ಕುಮಾರ' ಪ್ರಶಸ್ತಿ

ನಂಜನಗೂಡು, ಜ.22– ತಾಲೂಕಿನ ಸುತ್ತೂರು ಶ್ರೀಕ್ಷೇತ್ರದಲ್ಲಿ ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ 41ನೇ ರಾಷ್ಟ್ರಮಟ್ಟದ ಕುಸ್ತಿ ಪಂದ್ಯಾವಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪೈಲ್ವಾನರ ಬೆನ್ನುತಟ್ಟಿ ಶುಭ ಹಾರೈಸುವ ಮೂಲಕ ಚಾಲನೆ ನೀಡಿದರು.

ಪಂದ್ಯಾವಳಿಯಲ್ಲಿ 60 ಜೊತೆ ನಾಡ ಕುಸ್ತಿ ಪಂದ್ಯಾವಳಿ ಏರ್ಪಡಿಸಲಾಗಿತ್ತು ಸುತ್ತೂರು ಕೇಸರಿ 2023ರ ಪ್ರಶಸ್ತಿಗೆ ಹರಿಯಾಣದ ಪೈ.ಬಂಟಿ ಹಾಗೂ ಬೆಳಗಾವಿಯ ಪೈ.ನಾಗರಾಜು ನಡುವೆ ನಡೆದ ಮಾರ್ಫಿಟ್ ಕುಸ್ತಿಯಲ್ಲಿ ಇಬ್ಬರು ಪರಸ್ಪರ ಒಂದು ಗಂಟೆ ಕಾಲ



ಸೆಣಸಾಡಿದರೂ, ಯಾರಿಗೂ ಗೆಲುವು ಸಿಗಲಿಲ್ಲ. ಬಳಿಕ ತೀರ್ಪುಗಾರರು ಅಂತಿಮವಾಗಿ 10 ನಿಮಿಷಗಳ ಕಾದಾಟಕ್ಕೆ ಸಮಯ ನಿಗದಿಪಡಿಸಿದಾಗ ಪೈ.ನಾಗರಾಜು 1–0 ಅಂತರದಲ್ಲಿ ಪೈ.ಬಂಟಿ ಅವರನ್ನು ಮಣಿಸಿ ಬೆಳ್ಳಿಗದೆ, ಪಾರಿತೋಷಕ ಹಾಗೂ 25 ಸಾವಿರ ರೂ. ಬಹುಮಾನ ತಮ್ಮದಾಗಿಸಿಕೊಂಡರು.



ಪೈ.ನಾಗರಾಜು

ಇನ್ನು ಸುತ್ತೂರು ಕುಮಾರ ಪ್ರಶಸ್ತಿಗೆ ರಮ್ಮನಹಳ್ಳಿ ರವಿ ಹಾಗೂ ಶ್ರೀರಂಗಪಟ್ಟಣದ ಮಂಜು ನಡುವೆ ಎರಡೂವರೆ ಗಂಟೆಗಳ ಕಾಲ ಸೆಣಸಾಟ ನಡೆದರೂ ಗೆಲುವು ಯಾರಿಗೂ ದೊರೆಯಲಿಲ್ಲ. ಬಳಿಕ ಅವರಿಗೂ 10 ನಿಮಿಷ ನಿಗದಿ ಮಾಡಿದಾಗ 7–6 ಅಂತರದಲ್ಲಿ ಪೈ.ಮಂಜು ಅವರು ಪೈ.ರವಿ ಅವರನ್ನು ಮಣಿಸಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡರು.

ಕುಸ್ತಿ ಪಂದ್ಯಾವಳಿಯಲ್ಲಿ 60 ಜೊತೆ ನಾಡ ಕುಸ್ತಿಪಟುಗಳು ಸೆಣಸಾಡಿದರು. ಎಲ್ಲರಿಗೂ ತಲಾ 5 ನಿಮಿಷ ನಿಗದಿ ಮಾಡಿ ಕಣಕ್ಕೆ ಬಿಡಲಾಗಿತ್ತು. ಭಾಗವಹಿಸಿದವರಿಗೆ ಪ್ರಮಾಣ ಪತ್ರ ಹಾಗೂ ಪಾರಿತೋಷಕ ನೀಡಿ ಗೌರವಿಸಲಾಯಿತು. ಕುಸ್ತಿ ಕಣ್ತುಂಬಿಕೊಳ್ಳಲು ಆಗಮಿಸಿದ್ದ ಸಾವಿರಾರು ಜನರು ಶಿಳ್ಳೆ, ಚಪ್ಪಾಳೆ ಮೂಲಕ ಪೈಲ್ವಾನರನ್ನು ಹುರಿದುಂಬಿಸಿದರು. ಈ ವೇಳೆ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕಂದಾಯ ಸಚಿವ ಆರ್.ಅಶೋಕ್, ಆರೋಗ್ಯ ಸಚಿವ ಡಾ.ಸುಧಾಕರ್ ಸೇರಿದಂತೆ ಹಲವರಿದ್ದರು.

ಹುಣಸೂರು: ನಾಲ್ವರು ಕಳ್ಳರ ಬಂಧನ

ಹುಣಸೂರು, ಜ.22– ಜನರೇಟರ್, ಬೋರ್‌ವೆಲ್ ಮೋಟಾರ್ ಸೇರಿದಂತೆ ಮತ್ತಿತರ ವಸ್ತುಗಳನ್ನು ಕಳ್ಳತನ ಮಾಡಿದ್ದ ನಾಲ್ವರು ಆರೋಪಿಗಳನ್ನು ಬಂಧಿಸಿರುವ ನಗರ ಠಾಣೆ ಪೊಲೀಸರು ಒಂದೂವರೆ ಲಕ್ಷ ರೂ. ಮೌಲ್ಯದ ವಸ್ತುಗಳನ್ನು ವಶಕ್ಕೆ ಪಡೆದು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆ.

ನಗರದ ಒಂಟೆಪಾಳ್ಯ ಬೋರೆ ನಿವಾಸಿಗಳಾದ ಮೊಹಮದ್ ಕೈಸರ್ ಅಲಿಯಾಸ್ ಕೈಸರ್, ಮೊಹಮದ್ ಜುಬೇರ್, ಮೊಹಮದ್ ಫರ್ದಿನ್, ರೋಷನ್ ಬಂಧಿತ ಆರೋಪಿಗಳು. ಇವರಿಂದ ಒಂದು ಡಿಸೇಲ್ ಜನರೇಟರ್, ಸಿಮೆಂಟ್ ಇಟ್ಟಿಗೆ ತಯಾರಿಸುವ ಡೈಮಿಸೇನ್‌ಗಳು ಹಾಗೂ ಬೋರ್‌ವೆಲ್ ಮೋಟಾರ್, ಒಂದು ಗ್ಯಾಸ್ ಸಿಲಿಂಡರ್ ಅನ್ನು ವಶಪಡಿಸಿಕೊಂಡಿದ್ದಾರೆ. ಇತ್ತೀಚೆಗೆ ನಗರ ವ್ಯಾಪ್ತಿಯಲ್ಲಿ ಕಳ್ಳತನ ಹೆಚ್ಚಾಗುತ್ತಿದ್ದ ಹಿನ್ನೆಲೆಯಲ್ಲಿ ಡಿವೈಎಸ್‌ಪಿ ಎಂ.ಕೆ.ಮಹೇಶ್ ಮಾರ್ಗದರ್ಶನದಲ್ಲಿ ಇನ್ಸ್‌ಪೆಕ್ಟರ್ ಶ್ರೀನಿವಾಸ್ ನೇತೃತ್ವದಲ್ಲಿ ಆರೋಪಿಗಳ ಪತ್ತೆಗೆ ತಂಡ ರಚಿಸಲಾಗಿತ್ತು. ತನಿಖೆ ಕೈಗೊಂಡಿದ್ದ ಪೊಲೀಸರಿಗೆ ಬಂದ ಖಚಿತ ಮಾಹಿತಿ ಮೇರೆಗೆ ಶುಕ್ರವಾರ ಬೆಳಗ್ಗೆ ನಗರದ ಐ.ಕೆ.ಕಲ್ಯಾಣ ಮಂಟಪದ ಬಳಿ ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಿದ ವೇಳೆ ನಾಲ್ಕು ಕಳ್ಳತನ ಪ್ರಕರಣ ಪತ್ತೆಯಾಗಿದ್ದು, ಆರೋಪಿಗಳಿಂದ ಕಳ್ಳತನ ಮಾಡಿದ್ದ ಮಾಲನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೊಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ನಗರ ಠಾಣೆ ಅಪರಾಧ ವಿಭಾಗದ ಎಸ್‌ಐ ನಾಗಯ್ಯ, ಎಎಸ್‌ಐ ಪುಟ್ಟನಾಯಕ, ಸಿಬ್ಬಂದಿಗಳಾದ ಪ್ರಭಾಕರ್, ಅರುಣ್, ಇರ್ಫಾನ್, ರಘು ಮತ್ತು ಗುಪ್ತಮಾಹಿತಿ ಸಿಬ್ಬಂದಿ ಪ್ರಸಾದ್ ಭಾಗವಹಿಸಿದ್ದರು.

ಚಿರತೆ ದಾಳಿ: ರೈತನಿಗೆ ಗಂಭೀರ ಗಾಯ

ನಂಜನಗೂಡು, ಜ.22– ಜಮೀನಿಗೆ ತೆರಳಿದ್ದ ರೈತನ ಮೇಲೆ ಚಿರತೆ ದಾಳಿ ನಡೆಸಿ ಗಂಭೀರವಾಗಿ ಗಾಯಗೊಳಿಸಿರುವ ಘಟನೆ ತಾಲೂಕಿನ ನಂದಿಗುಂದಪುರ ಗ್ರಾಮದಲ್ಲಿ ಶನಿವಾರ ಸಂಜೆ ನಡೆದಿದೆ. ಗ್ರಾಮದ ರೈತ ಶಿವಕುಮಾರ್(50) ಗಾಯಗೊಂಡವರು. ಶನಿವಾರ ಸಂಜೆ ಗ್ರಾಮದ ಹೊರವಲಯದಲ್ಲಿರುವ ಜಮೀನಿಗೆ ತೆರಳಿ, ವಾಪಸ್ ಮನೆಗೆ ಹಿಂದಿರುಗುವಾಗ ಚಿರತೆ ದಾಳಿ ಮಾಡಿ ಗಂಭೀರವಾಗಿ ಗಾಯಗೊಳಿಸಿದೆ. ದಾಳಿಯಿಂದ ಶಿವಕುಮಾರ್ ಕೈ ಹಾಗೂ ಎದೆ ಭಾಗಕ್ಕೆ ಪೆಟ್ಟಾಗಿದೆ. ಗಾಯಾಳುವಿನ ಚೀರಾಟ ಕೇಳಿ ಸ್ಥಳಕ್ಕಾಗಮಿಸಿದ ಸ್ಥಳೀಯರು ಗಾಯಾಳುವನ್ನು ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದಾರೆ.

ಆರ್‌ಎಫ್‌ಓ ಕಿರಣ್ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿ ಘಟನೆ ನಡೆದ ಸ್ಥಳದಲ್ಲಿ ಚಿರತೆ ಸೆರೆಗಾಗಿ ಬೋನು ಇರಿಸಲಾಗಿದೆ.

ಕೆಂಪೇಗೌಡ ನಿಧನ



ಹೆಬ್ಬಾಳು, ಜ.22– ಕೆ.ಆರ್.ನಗರ ತಾಲೂಕಿನ ಹೆಬ್ಬಾಳು ಬಡಾವಣೆ ನಿವಾಸಿ ಗಾಡಿ ಕೆಂಪೇಗೌಡ(88) ಭಾನುವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ ಗೌರಮ್ಮ, ಎಪಿಎಂಸಿ ಮಾಜಿ ನಿರ್ದೇಶಕ ರಾಜಶೇಖರ್ ಸೇರಿದಂತೆ ಇಬ್ಬರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ 11 ಗಂಟೆಗೆ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.




ಸುತ್ತೂರು ಜಾತ್ರಾ ಮಹೋತ್ಸವದ ಅಂಗವಾಗಿ ಇದೇ ಪ್ರಥಮ ಬಾರಿಗೆ ಯುವ ಬ್ರಿಗೇಡ್ ವತಿಯಿಂದ ಭಾನುವಾರ ರಾತ್ರಿ ಆಯೋಜಿಸಲಾಗಿದ್ದ ಕಪಿಲಾ ಆರತಿ ಕಾರ್ಯಕ್ರಮಕ್ಕೆ ಸುತ್ತೂರು ಶ್ರೀಗಳು ಚಾಲನೆ ನೀಡಿದರು. ಈ ವೇಳೆ ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮಿ, ವಿನಯ್ ಗುರೂಜೀ ಸೇರಿದಂತೆ ವಿವಿಧ ಮಠಾಧೀಪತಿಗಳು, ಯುವ ಬ್ರಿಗೇಡ್ ಸಂಚಾಲಕ ಸುನೀಲ್ ಇನ್ನಿತರರು ಉಪಸ್ಥಿತರಿದ್ದರು. ಬಲಚಿತ್ರದಲ್ಲಿ ಸುತ್ತೂರಿನಲ್ಲಿ ಭಾನುವಾರ ರಾತ್ರಿ ನಡೆದ ತೆಪ್ಪೋತ್ಸವವನ್ನು ಕಾಣಬಹುದು.

ನಿತ್ಯ ಲಕ್ಷಾಂತರ ಭಕ್ತರಿಗೆ ದಾಸೋಹ

ಸುತ್ತೂರು: ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಮಹಾ ದಾಸೋಹದ ಮೂಲಕ ನಿತ್ಯ ಲಕ್ಷಾಂತರ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿದೆ.

ಸುತ್ತೂರಿನ ವಿವಿಧೆಡೆ ತಾತ್ಕಾಲಿಕ ದಾಸೋಹ ಕೇಂದ್ರಗಳನ್ನು ಸ್ಥಾಪಿಸಿ, ಜಾತ್ರಾ ಮಹೋತ್ಸವ ಆರಂಭದಿಂದ(ಜ.17)ಲೂ ಪ್ರತಿದಿನ ಭಕ್ತರಿಗೆ ಬೆಳಗಿನ ಉಪಾಹಾರ, ಮಧ್ಯಾಹ್ನ ಹಾಗೂ ರಾತ್ರಿ ಊಟದ ವ್ಯವಸ್ಥೆ ಕಲ್ಪಿಸಲಾಗಿದೆ. ನಿತ್ಯ 1.50 ಲಕ್ಷದಿಂದ 2 ಲಕ್ಷ ಮಂದಿ ಪ್ರಸಾದ ಸೇವಿಸುತ್ತಿದ್ದಾರೆ ಎನ್ನಲಾಗಿದ್ದು, ನಿರ್ವಹಣೆ ತುಂಬಾ ಅಚ್ಚುಕಟ್ಟಾಗಿದೆ. ಉಪಾಹಾರಕ್ಕೆ ಕೇಸರಿ ಬಾತ್, ಖಾರಾಬಾತ್, ಸಿಹಿ ಹಾಗೂ ಖಾರ ಪೊಂಗಲ್, ಬಿಸಿ ಬೇಳೆ ಬಾತ್ ಹಾಗೂ ಮೈಸೂರು ಪಾಕ್, ಬಾದೂಷ, ಬೂಂದಿ, ಲಾಡು, ಪಾಯಸ ನೀಡಲಾಗುತ್ತಿದೆ. ರಾಯಚೂರು ಜಿಲ್ಲೆಯ ಸಿಂಧನೂರಿನಿಂದ 1 ಸಾವಿರ ಕ್ವಿಂಟಾಲ್ ಸಣ್ಣ ಅಕ್ಕಿ, 50 ಸಾವಿರ ತೆಂಗಿನ ಕಾಯಿ, 1,600 ಟಿನ್ ರೀಫೈಂಡ್ ಅಡುಗೆ ಎಣ್ಣೆ 200 ಕೆಜಿ ಬೇಳೆ, 50 ಕೆಜಿ ಹಲಸಂದೆ, 30 ಟನ್ ಬೆಲ್ಲವನ್ನು ತರಿಸಲಾಗಿದೆ.

ನಂಜನಗೂಡು ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ವತಿಯಿಂದ 150 ಕ್ವಿಂಟಾಲ್ ಸಕ್ಕರೆಯನ್ನು ದೇಣಿಗೆ ನೀಡಲಾಗಿದೆ. ಮೈಸೂರು, ನಂಜನಗೂಡು, ಗುಂಡ್ಲುಪೇಟೆ, ಪಾಂಡವಪುರ, ಊಟಿ ಮಾರುಕಟ್ಟೆಗಳಿಂದ ಟನ್ ಗಟ್ಟಲೆ ತರಕಾರಿ ಕಳುಹಿಸಲಾಗುತ್ತಿದೆ. ಶಿವಮೊಗ್ಗ ಸೇರಿದಂತೆ ದೂರದ ಊರುಗಳಿಂದಲೂ ಭಕ್ತರೂ ಟನ್‌ಗಟ್ಟಲೆ ತರಕಾರಿ ಕಳುಹಿಸಿದ್ದಾರೆ. ಸುತ್ತೂರಿನ ಬಸವೇಶ್ವರ ಹೈಸ್ಕೂಲ್, ವಸ್ತು ಪ್ರದರ್ಶನ ಕೇಂದ್ರ, ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಮಹಿಳೆಯರು, ಪುರುಷರು ಹಾಗೂ ಸ್ವಯಂ ಸೇವಕರಿಗಾಗಿ ಪ್ರತ್ಯೇಕ ಆಹಾರ ಕೌಂಟರ್ ತೆರೆಯಲಾಗಿದೆ. 500 ಮಂದಿ ಬಾಣಸಿಗರು, 300 ಮಂದಿ ಸ್ವಚ್ಛತಾ ನಿರ್ವಾಹಕರು, ಸುತ್ತೂರಿನ ಸುತ್ತಮುತ್ತಲ ಗ್ರಾಮಸ್ಥರು, ಸಾವಿರಾರು ಸ್ವಯಂಸೇವಕರು ದಾಸೋಹಕ್ಕಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಪ್ರಜಾಧ್ವನಿ ಅಲ್ಲ, ಅಧಿಕಾರಕ್ಕಾಗಿ ಕಾಂಗ್ರೆಸ್ ಧ್ವನಿ: ಕುಮಾರಸ್ವಾಮಿ

ವಿಜಯಪುರ, ಜ.22– ಪಂಚರತ್ನ ರಥಯಾತ್ರೆ ಬಗ್ಗೆ ಟೀಕೆ ವ್ಯಕ್ತಪಡಿಸಿರುವ ಸಿದ್ದರಾಮಯ್ಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು, ಕಾಂಗ್ರೆಸ್ ನಡೆಸುತ್ತಿರುವುದು ಏನು? ನಿಮ್ಮದು ಪ್ರಜಾಧ್ವನಿ ಅಲ್ಲ, ಅಧಿಕಾರಕ್ಕಾಗಿ ನಡೆಸುತ್ತಿರುವ ಧ್ವನಿ ಎಂದು ಚಾಟಿ ಬೀಸಿದರು.



ಮುದ್ದೇಬಿಹಾಳ ವಿಧಾನಸಭೆ ಕ್ಷೇತ್ರದ ಬಳವಾಟ ಗ್ರಾಮದಲ್ಲಿ ಪಂಚರತ್ನ ರಥಯಾತ್ರೆ ನಿಮಿತ್ತ ಗ್ರಾಮ ವಾಸ್ತವ್ಯ ಹೂಡಿದ್ದ ಮಾಜಿ ಮುಖ್ಯಮಂತ್ರಿ ಅವರು ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದರು.

ಪಂಚರತ್ನ ರಥಯಾತ್ರೆ 50 ದಿನ ದಾಟಿ ಮುನ್ನಡೆಯುತ್ತಿದೆ. ಅದು ಇವರೆಲ್ಲರ ನಿದ್ದೆಗೆಡಿಸಿದೆ. ಹೋದ ಕಡೆ ಎಲ್ಲಾ ನಮಗೆ ಉತ್ತಮ ಸ್ಪಂದನೆ ದೊರೆಯುತ್ತಿದೆ. ಸಹಿಸಿಕೊಳ್ಳುವುದು ಅವರಿಗೆ ಆಗುತ್ತಿಲ್ಲ ಎಂದರು.

ನನ್ನ ನೇತೃತ್ವದ ಮೈತ್ರಿ ಸರ್ಕಾರವನ್ನು ಕೆಡವಲು ಧರ್ಮಸ್ಥಳದ ಸಿದ್ದವನದಲ್ಲಿ ನಡೆಸಿದ ಷಡ್ಯಂತ್ರವನ್ನು ಬಿಚ್ಚಿಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಜನರು ಕಷ್ಟ ಹೇಳಿಕೊಂಡು ನಮ್ಮ ಬಳಿ ನಿರಂತರವಾಗಿ ಜನ ಬರುತ್ತಾರೆ. ಸುಮ್ಮನೆ ಜೆಡಿಎಸ್ ಪಕ್ಷದ ಬಗ್ಗೆ ಏನೇನು ಮಾತನಾಡಬೇಡಿ ಎಂದರು.

ಮುಖ್ಯಮಂತ್ರಿ ಆಸೆಗಾಗಿ ಪಕ್ಷ ಬಿಟ್ಟು ಹೋಗಿದ್ದು ನೆನಪು ಇದೆಯಾ ನಿಮಗೆ? ನಿಮ್ಮಿಂದ ನಾನು ಪಾಠವನ್ನು ಹೇಳಿಸಿಕೊಳ್ಳುವ ಅಗತ್ಯ ನನಗೆ ಇಲ್ಲ. ಲೋಕನಾಯಕ ಜಯಪ್ರಕಾಶ್ ನಾರಾಯಣ್ ಅವರು ಕಟ್ಟಿದ ಪಕ್ಷವನ್ನು ಉಳಿಸಿಕೊಂಡು ಹೊರಟಿದ್ದೇವೆ ನಾವು. ಅಂಥ ಪಕ್ಷವನ್ನು, ಅವರ ಸಿದ್ದಾಂತವನ್ನು ಗಾಳಿಗೆ ಬಿಟ್ಟು ಸಿಎಂ ಕುರ್ಚಿ ಹಿಂದೆ ಓಡಿ ಹೋದವರು ಯಾರು? ನಿಮ್ಮ ಯೋಗ್ಯತೆ ಏನು ಅಂತಾ ಗೊತ್ತಿದೆ ಎಂದು ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು.

ನನ್ನ ನೇತೃತ್ವದ ಮೈತ್ರಿ ಸರ್ಕಾರ ಕೆಡವಲು ನೀವು ಏನು ಮಾಡಿದಿರಿ ಎನ್ನುವುದು ಗೊತ್ತಿದೆ. ಎಲ್ಲಿ ಕೂತು, ಯಾರ ಜತೆ ಕೂಡಿ ಕುತಂತ್ರ ಮಾಡಿದಿರಿ ಎನ್ನುವುದು ನನಗೆ ತಿಳಿದಿದೆ. ಬಿಜೆಪಿಗೆ ಅಧಿಕಾರ ಹೋಗಬಾರದು ಎಂದು ನಿಮ್ಮ ಪಕ್ಷದ ವರಿಷ್ಠರು ನಮ್ಮ ಮನೆ ಬಾಗಿಲಿಗೆ ಬಂದಿದ್ದರು. ಖರ್ಗೆ, ಪರಮೇಶ್ವರ್, ಡಿಕೆ ಶಿವಕುಮಾರ್ ಇದ್ದಾರೆ. ಅವರಿಗೆ ಇದೆಲ್ಲಾ ಗೊತ್ತಿಲ್ಲವೇ? ಆಗ ನೀವು ಎಲ್ಲಿದ್ದೀರಿ? ಎಂದು ಕಿಡಿಕಾರಿದರು.

ನನ್ನ ಸರ್ಕಾರ ಹೇಗೆ ಹೋಯಿತು? ಅದನ್ನು ತೆಗೆಯಲು ನಿಮ್ಮ ಕಾಣಿಕೆ ಏನು? ಬಿಜೆಪಿಯವರ ಜತೆ ಹೇಗೆಲ್ಲಾ ಕುಮ್ಮಕ್ಕಾಗಿದ್ದಿರಿ? ಯಾರನ್ನೆಲ್ಲ ಎಲ್ಲೆಲ್ಲಿಗೆ ಕಳಿಸಿದಿರಿ ಎನ್ನುವುದು ನನಗೆ ಮಾಹಿತಿ ಇದೆ. ಆದರೆ, ಜಾತ್ಯತೀತ ತತ್ವ ತಮ್ಮ ಆಸ್ತಿ ಎನ್ನುವ ರೀತಿ ವರ್ತಿಸುತ್ತಿದ್ದಿರಿ. ಜಯಪ್ರಕಾಶ್ ನಾರಾಯಣ್ ಅವರ ಸಿದ್ಧಾಂತಕ್ಕೆ ನೀವು ಬದ್ಧರಾಗಿ ಇದ್ದಿದರೆ ನೀವು ಅಧಿಕಾರಕ್ಕಾಗಿ ಮಾತೃಪಕ್ಷವನ್ನು ಕಾಲಿನಲ್ಲಿ ಒದ್ದು ಹೋಗುತ್ತಿರಲಿಲ್ಲ ಎಂದು ಕುಮಾರಸ್ವಾಮಿ ಅವರು ಸಿದ್ದರಾಮಯ್ಯ ವಿರುದ್ಧ ಗುಡುಗಿದರು.

ಅಪರಿಚಿತ ಶವ ಪತ್ತೆ

ಮೈಸೂರು, ಜ.22– ನಂಜನಗೂಡು ಸಿಂಧುವಳ್ಳಿ ಗ್ರಾಮದ ಸಂತಾನ ಗಣಪತಿ ದೇವಸ್ಥಾನದ ಮುಂಭಾಗ ಸುಮಾರು 60–65 ವರ್ಷದ ಅಪರಿಚಿತ ವ್ಯಕ್ತಿಯು ರಸ್ತೆ ಅಪಘಾತಕ್ಕೆ ಒಳಗಾಗಿರುತ್ತಾನೆ. ಚಿಕಿತ್ಸೆಗಾಗಿ ಮೈಸೂರಿನ ಕೆಆರ್ ಆಸ್ಪತ್ರೆಗೆ ದಾಖಲಿಸಲಾಗಿದ್ದು ಚಿಕಿತ್ಸೆ ಫಲಕಾರಿಯಾಗದೆ ವ್ಯಕ್ತಿ ಮೃತ ಪಟ್ಟಿದ್ದು ಪ್ರಕರಣ ನಂಜನಗೂಡು ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. 5.2 ಅಡಿ ಎತ್ತರ, ಸಾಧಾರಣ ಶರೀರ, ಗೋಧಿ ಮೈ ಬಣ್ಣ, ಒಂದು ಕ್ರೀಂ ಕಲರ್ ಬಣ್ಣದ ಶರ್ಟ್ ಹಾಗೂ ಬಿಳಿ ಬಣ್ಣದ ಪಂಚೆ ಧರಿಸಿರುತ್ತಾರೆ. ಮೃತ ವ್ಯಕ್ತಿಯ ಬಗ್ಗೆ ಮಾಹಿತಿ ದೊರೆತಲ್ಲಿ ನಂಜನಗೂಡು ಪೊಲೀಸ್ ಠಾಣೆ ದೂ.ಸಂ: 08221–228383, ಕಂಟ್ರೋಲ್ ರೂಮ್ ನಂ: 0821–2444800, ನಂ.ಗೂಡು ಸಂಚಾರ ಪೊಲೀಸ್ ಠಾಣೆ ಸಂ: 9480805055 ಅನ್ನು ಸಂಪರ್ಕಿಸಿ ಎಂದು ನಂಜನಗೂಡು ಪೊಲೀಸ್ ಠಾಣೆ ಪ್ರಕಟಣೆಯಲ್ಲಿ ತಿಳಿಸಿದೆ.

ಚುನಾವಣೆಯಲ್ಲಿ ನನ್ನ ಗೆಲುವು ಶತಸಿದ್ಧ: ಎಲ್‌ಆರ್‌ಎಸ್



ಮದ್ದೂರು, ಜ.22– ಮುಂಬರುವ ಚುನಾವಣೆಯಲ್ಲಿ ನನ್ನ ಗೆಲುವು ಶತಸಿದ್ಧ. ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಮಾಜಿ ಸಂಸದ ಎಲ್.ಆರ್. ಶಿವರಾಮೇಗೌಡ ಭರವಸೆ ವ್ಯಕ್ತಪಡಿಸಿದರು.

ತಾಲೂಕಿನ ಕೊಪ್ಪದಲ್ಲಿ ಎಲ್.ಆರ್. ಶಿವರಾಮೇಗೌಡ ಸ್ವಾಭಿಮಾನ ಪರ್ವ–2023 ಬೃಹತ್ ಸಭೆ ಉದ್ಘಾಟಿಸಿ ಮಾತನಾಡಿದ ಅವರು, 2008ರಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಪ್ರಯತ್ನಿಸಿದ್ದೆ. ಆಗ ಟಿಕೆಟ್ ಸಿಗದಿದ್ದಾಗ ಪಕ್ಷೇತರವಾಗಿ ಸ್ಪರ್ಧಿಸಲು ಒತ್ತಡ ಬಂತು. ಆ ವೇಳೆ ಎಸ್.ಎಂ. ಕೃಷ್ಣ ಸೇರಿದಂತೆ ಹಿರಿಯರ ಸಲಹೆಯಂತೆ ಚುನಾವಣೆಗೆ ಸ್ಪರ್ಧಿಸದೆ ತಟಸ್ಥನಾದೆ ಎಂದರು.

ನಾಗಮಂಗಲದಲ್ಲಿ ಕಾಂಗ್ರೆಸ್ ಕಟ್ಟಿದ್ದು ನಾನು. ನಾನು ಮಾಡಿದ ಅಡುಗೆ ಉಂಡಿದ್ದು ಸುರೇಶ್‌ಗೌಡ. ಆಗ ನನ್ನ ಬಿಟ್ಟು ಸುರೇಶ್ ಗೌಡರಿಗೆ ಟಿಕೆಟ್ ಕೊಟ್ಟರು. ನಾನು ಆಗ ಚುನಾವಣೆಗೆ ನಿಲ್ಲಲು ಪ್ರಯತ್ನಿಸಿದ್ದರೆ ಸುರೇಶ್‌ಗೌಡ ಶಾಸಕನಾಗುತ್ತಿರಲ್ಲ ಎಂದರು.

ನನಗೆ ರಾಜಕೀಯದಲ್ಲಿ ನಿರಂತರವಾಗಿ ಮೋಸ ಮಾಡಿದರು. ನಾನು ಸುಮ್ಮನೇ ಕೂರಲಿಲ್ಲ. ಕಳೆದ 6 ತಿಂಗಳಿಂದ ಕ್ಷೇತ್ರದ ಎಲ್ಲಾ ಪಡೆ ಪ್ರವಾಸ ಮಾಡ್ತಿದ್ದೀನಿ. 25 ವರ್ಷದಿಂದ ಚುನಾವಣೆಯಿಂದ ಹೊರಗಿದ್ದೆ. ಈಗ ಪಕ್ಷೇತರವಾಗಿ ಸ್ಪರ್ಧಿಸಲು ತೀರ್ಮಾನಿಸಿದ್ದೇನೆ. ಕೊಪ್ಪ ಭಾಗದಲ್ಲಿ ಸಾಕಷ್ಟು ಸಮಸ್ಯೆಗಳಿದ್ದು, ನಾನು ಶಾಸಕನಾದರೆ ಕೊಪ್ಪ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತೇನೆ ಹಾಗೂ ವಾರಕ್ಕೆ ಒಂದು ಬಾರಿ ತಾಲೂಕು ಮಟ್ಟದ ಅಧಿಕಾರಿಗಳ ಸಭೆ ಕರೆದು ಈ ಭಾಗದ ಜನರು ಸರ್ಕಾರಿ ಕಚೇರಿಗಳಿಗೆ ಅಲೆಸುವುದನ್ನು ತಪ್ಪಿಸುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೊಪ್ಪ ಹೋಬಳಿ ಮತದಾರರು ಚೆಲುವರಾಯಸ್ವಾಮಿ ಹಾಗೂ ಸುರೇಶ್‌ಗೌಡರನ್ನು ಶಾಸಕರನ್ನಾಗಿ ನೋಡಿದ್ದೀರಿ, ಅವರಿಂದ ಕೊಪ್ಪ ಹೋಬಳಿ ಯಾವುದೇ ಅಭಿವೃದ್ಧಿ ಕಂಡಿಲ್ಲ. ಇದರಿಂದ ಕೊಪ್ಪ ಹೋಬಳಿ ಮತದಾರರು ಅತಂತ್ರರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಚುನಾವಣೆಯಲ್ಲಿ ನಿಮ್ಮಸೇವೆ ಮಾಡಲು ಒಂದು ಅವಕಾಶ ಕೊಡಿ ಎಂದರು. ನಾನು ಸ್ವಾಭಿಮಾನದ ಹೆಸರಲ್ಲಿ ನಿಮ್ಮ ಮುಂದೆ ಬಂದಿದ್ದೇನೆ. ಸ್ಥಳೀಯ ಮುಖಂಡರು ನನ್ನ ಜೊತೆ ನಿಂತಿದ್ದಾರೆ. ದಯವಿಟ್ಟು ನನ್ನನ್ನ ಗೆಲ್ಲಿಸಿ ಎಂದರು.

ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡರ ಪುತ್ರ ಚೇತನ್‌ಗೌಡ ಮಾತನಾಡಿದರು. ಕಾರ್ಯಕ್ರಮಕ್ಕೂ ಮುನ್ನ ಗ್ರಾಮದ ಪಟ್ಟಲದಮ್ಮ ದೇವಸ್ಥಾನದಿಂದ ಎಲ್.ಆರ್. ಶಿವರಾಮೇಗೌಡರನ್ನು ವಿವಿಧ ಜಾನಪದ ಕಲಾತಂಡಗಳೊಂದಿಗೆ ತೆರೆದ ವಾಹನದಲ್ಲಿ ವೇದಿಕೆವರೆಗೆ ಮೆರವಣಿಗೆಯಲ್ಲಿ ಕರೆ ತರಲಾಯಿತು.

ಕಾರ್ಯಕ್ರಮದಲ್ಲಿ ಮುಖಂಡರಾದ ಜಯಲಕ್ಷ್ಮಮ್ಮ, ರಮೇಶ್, ನಾಗರಾಜು, ನಾಗರಾಜು, ಪಾಪಣ್ಣ, ಚಿಕ್ಕೀರಣ್ಣ, ಕೃಷ್ಣೇಗೌಡ, ಯೋಗರಾಜು, ಸತೀಶ್, ಶಿವರಾಮು, ಅಫ್ಸರ್, ಸಿದ್ದಲಿಂಗು, ರಾಮೇಗೌಡ, ಉಮೇಶ್, ಪುಟ್ಟಸ್ವಾಮಿ, ಮಧು ಸೇರಿದಂತೆ ಇತರರು ಇದ್ದರು.

ಟಿಕೆಟ್ ಕೇಳಲು ಡಿಕೆಶಿ ಮನೆಗೆ ಹೋಗಿರಲಿಲ್ಲ

ಮದ್ದೂರು: ಮುಂಬರುವ ಚುನಾವಣೆಗೆ ನಾಗಮಂಗಲ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಕೇಳಲು ನಾನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮನೆಗೆ ಹೋಗಿರಲಿಲ್ಲ ಎಂದು ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡ ತಿಳಿಸಿದರು.

ತಾಲೂಕಿನ ಕೊಪ್ಪದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇತ್ತೀಚಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನಿವಾಸಕ್ಕೆ ಸುಮ್ಮನೆ ಹೋಗಿದ್ದೆ. ಅವರು ನಾವು ಹತ್ತಿರದ ಸಂಬಂಧಿಗಳು. ಹಾಗಾಗಿ ಅವರು ನಮ್ಮ ಮನೆಗೆ ಬರುತ್ತಾರೆ. ನಾನು ಅವರ ಮನೆಗೆ ಹೋಗುತ್ತೇನೆ ಅಷ್ಟೇ. ಅದಕ್ಕೆ ನಾನು ಕಾಂಗ್ರೆಸ್ ಟಿಕೆಟ್ ಕೇಳಲು ಹೋಗಿದ್ದೆ ಎನ್ನುವುದು ಸುಳ್ಳು. ನಾನು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತೇನೆ ಎಂದರು. ಕಾಂಗ್ರೆಸ್ ಪಕ್ಷವೇ ಟಿಕೆಟ್ ನೀಡುತ್ತೇನೆ ಎಂದರೆ ಅಭಿಮಾನಿಗಳ ಅಭಿಪ್ರಾಯ ಪಡೆಯುತ್ತೇನೆ. ನಿಮ್ಮ ಹಾಗೂ ಮಾಜಿ ಸಚಿವ ಎನ್.ಚೆಲುವರಾಯಸ್ವಾಮಿ ಮಧ್ಯೆ ಹೊಂದಾಣಿಕೆ ಮಾತುಕತೆ ಏನಾದರೂ ಆಗಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು ಹಾಗೇನಿಲ್ಲ. ನಾನು ಅವರು ಸ್ನೇಹಿತರು ಅಷ್ಟೇ, ಮುಂದಿನ ಚುನಾವಣೆಯಲ್ಲಿ ನಾನು ಗೆಲ್ಲುವುದು ಖಚಿತ ಎಂದರು.




ಮೈಸೂರಿನ ಮಂಡಿ ಮೊಹಲ್ಲಾದ ಎಸ್.ಕೆಗ್ರೂಪ್ಸ್ ಕಛೇರಿ ಬಳಿ ಸಮಾಜ ಸೇವಕ ಹೆಚ್.ಎಸ್.ಸುಜಿತ್ ಕುಮಾರ್ ಹುಟ್ಟುಹಬ್ಬ ಹಿನ್ನೆಲೆಯಲ್ಲಿ ಅವರ ಬೆಂಬಲಿಗರು ದಿವಂಗತ ಪುನೀತ್ ರಾಜ್‌ಕುಮಾರ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಸಿಹಿ ಹಂಚಿದರು. ಈ ವೇಳೆ ಸುಜಿತ್ ಕುಮಾರ್, ಒಡನಾಡಿ ಅಮರ್, ರಾಘವ್, ಅರ್ಜುನ್, ಗೋಪಿನಾಥ್, ಶಂಕರ್ ಮತ್ತಿತರರಿದ್ದರು. ನಂತರ ವಿಜಯನಗರದ ಸವಿನೆನಪು ಫೌಂಡೇಷನ್ ಸೇವಾಶ್ರಮದ 25 ಮಕ್ಕಳಿಗೆ ಪುಸ್ತಕಗಳು, ಬಟ್ಟೆ ವಿತರಿಸಿ, ಊಟದ ವ್ಯವಸ್ಥೆ ಕಲ್ಪಿಸಿದರು.

ಗುರುವಾಯೂರು ದೇಗುಲದಲ್ಲಿದೆ 260 ಕೆ.ಜಿ. ಚಿನ್ನ

ತ್ರಿಶ್ಶೂರ್, ಜ.22– ಮಧ್ಯ ಕೇರಳದ ಪ್ರಸಿದ್ಧ ಗುರುವಾಯೂರು ದೇವಸ್ಥಾನದಲ್ಲಿ 263.637 ಕೆ.ಜಿ. ಚಿನ್ನದ ಸಂಗ್ರಹವಿದೆ ಎಂದು ದೇಗುಲದ ಆಡಳಿತ ಮಂಡಳಿ ತಿಳಿಸಿದೆ. ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಮೂಲಕ ಕೇಳಿದ ಪ್ರಶ್ನೆಗೆ ಉತ್ತರಿಸಿರುವ ದೇವಾಲಯದ ಆಡಳಿತ ಮಂಡಳಿಯು, ಅಮೂಲ್ಯ ರತ್ನಗಳು, ಚಿನ್ನದ ನಾಣ್ಯಗಳು, 20 ಸಾವಿರ ಚಿನ್ನದ ಪದಕಗಳು ಸೇರಿ ಒಟ್ಟು 263.637 ಕೆ.ಜಿ. ಚಿನ್ನದ ಸಂಗ್ರಹವಿದೆ ಎಂದು ಹೇಳಿದೆ. 5,359 ಬೆಳ್ಳಿಯ ಪದಕಗಳು ಸೇರಿ ದೇಗುಲದಲ್ಲಿ ಒಟ್ಟು 6,605 ಕೆ.ಜಿ. ಬೆಳ್ಳಿಯ ಸಂಗ್ರಹವಿದೆ ಎಂಬುದು ಆರ್‌ಟಿಐ ದಾಖಲೆಗಳಿಂದ ಬಹಿರಂಗೊಂಡಿದೆ. ಸ್ಥಳೀಯ ನಿವಾಸಿ ಹಾಗೂ 'ಪ್ರಾಪರ್‌ಚಾನೆಲ್' ಸಂಘಟನೆಯ ಅಧ್ಯಕ್ಷ ಎಂ.ಕೆ.ಹರಿದಾಸ್ ಎಂಬುವವರು ದೇಗುಲದ ಆಸ್ತಿಯ ಕುರಿತು ಆರ್‌ಟಿಐ ಮೂಲಕ ಮಾಹಿತಿ ಕೋರಿದ್ದರು.

70 ವರ್ಷದ ವ್ಯಕ್ತಿಯನ್ನು ಬಾನೆಟ್ ಮೇಲೆ 8 ಕಿ.ಮೀ. ಎಳೆದೊಯ್ದು ಕೆಳಗೆ ಬೀಳಿಸಿ ಕಾರು ಹತ್ತಿಸಿ ಕೊಂದ ದುರುಳ!

ಚಂಪಾರಣ್ (ಬಿಹಾರ), ಜ.22– ದೆಹಲಿಯ ಕಂಝಾವಾಲಾದಂತಹ ಘಟನೆ ಬಿಹಾರದಲ್ಲಿ ಬೆಳಕಿಗೆ ಬಂದಿದೆ. ಇಲ್ಲಿ ವೇಗವಾಗಿ ಬಂದ ಕಾರು 70 ವರ್ಷದ ವೃದ್ಧರೊಬ್ಬರಿಗೆ ಡಿಕ್ಕಿ ಹೊಡೆದಿದೆ.

ಇದಾದ ಬಳಿಕ ಬಾನೆಟ್ ಮೇಲೆ ಸಿಲುಕಿದ್ದ ವೃದ್ಧನನ್ನು ಕಾರು ಸವಾರ ಸುಮಾರು 8 ಕಿ.ಮೀ.ವರೆಗೆ ಎಳೆದೊಯ್ದಿದ್ದು ನಂತರ ಕೆಳಗೆ ತಬ್ಬಿ ಆತನ ಮೇಲೆ ಕಾರು ಹತ್ತಿಸಿ ಕೊಂದಿರುವ ದಾರುಣ ಘಟನೆ ನಡೆದಿದೆ. ಘಟನೆಯ ನಂತರ ಆರೋಪಿ ಚಾಲಕ ಕೂಡ ಸ್ಥಳದಿಂದ ಪರಾರಿಯಾಗಿದ್ದು ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಆರೋಪಿ ಚಾಲಕ 70 ವರ್ಷದ ವ್ಯಕ್ತಿಯನ್ನು 8 ಕಿ.ಮೀ ಎಳೆದೊಯ್ದಿದ್ದು ನಂತರ ಬ್ರೇಕ್ ಹಾಕಿ ವ್ಯಕ್ತಿಯನ್ನು ಕೆಳಗೆ ಬೀಳಿಸಿದ್ದಾನೆ. ಬಳಿಕ ಕಾರನ್ನು ಆತನ ಮೇಲೆ ಹತ್ತಿಸಿ ಕೊಂದು, ಕಾರು ಬಿಟ್ಟು ಚಾಲಕ ಪರಾರಿಯಾಗಿದ್ದಾನೆ. ಕಳೆದ ಶುಕ್ರವಾರ ಪೂರ್ವ ಚಂಪಾರಣ್ ಜಿಲ್ಲೆಯಲ್ಲಿ ಸಂಜೆ ಈ ಘಟನೆ ನಡೆದಿದೆ.

ವೃದ್ಧನನ್ನು ಬಂಗಾರ ಗ್ರಾಮದ ನಿವಾಸಿ 70 ವರ್ಷದ ಶಂಕರ ಚೌಧರಿ ಎಂದು ಗುರುತಿಸಲಾಗಿದೆ. ಅಪಘಾತದ ಸಮಯದಲ್ಲಿ, ವೃದ್ಧರು ತಮ್ಮ ಸೈಕಲ್ಲಳಲ್ಲಿ NH–28ರ ಕೊತ್ವಾ ಬಳಿಯ ಬಂಗಾರ ರಸ್ತೆಯನ್ನು ದಾಟುತ್ತಿದ್ದರು. ಮುದುಕ ಕಾರನ್ನು ನಿಲ್ಲಿಸುವಂತೆ ಮನವಿ ಮಾಡಿದರೂ ಚಾಲಕ ಕಾರನ್ನು ಚಲಾಯಿಸುತ್ತಲೇ ಇದ್ದ ಎಂದು ಕೆಲವು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಕಾರನ್ನು ವಶಪಡಿಸಿಕೊಳ್ಳಲಾಗಿದ್ದು, ಅದರ ಮಾಲೀಕರ ಹೆಸರನ್ನು ಜಿಲ್ಲಾ ಸಾರಿಗೆ ಕಚೇರಿಯಲ್ಲಿ ಪೊಲೀಸರು ಪರಿಶೀಲಿಸುತ್ತಿದ್ದಾರೆ ಎಂದು ಪಿಪ್ರಕೋತಿ ಪೊಲೀಸ್ ಠಾಣೆ ಎಸ್‌ಎಚ್‌ಒ ಅನುಜ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

ಮೂಲಗಳ ಪ್ರಕಾರ, ಕಾರು ಮೋತಿಹಾರಿ ಮೂಲದ ವೈದ್ಯರಿಗೆ ಸೇರಿದ್ದು. ಪೊಲೀಸರು ಅಪಘಾತ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಚಾಲಕನನ್ನು ಗುರುತಿಸಲು ಸಮೀಪದ ಸಿಸಿಟಿವಿ ದೃಶ್ಯಾವಳಿಗಳನ್ನು ಸಹ ಸ್ಕ್ಯಾನ್ ಮಾಡಲಾಗುತ್ತಿದೆ. ಘಟನೆ ನಂತರ ಸ್ಥಳೀಯರು ರಸ್ತೆ ತಡೆ ನಡೆಸಿ ಕಠಿಣ ಕ್ರಮಕ್ಕೆ ಆಗ್ರಹಿಸಿದ್ದಾರೆ.



ಮೈಸೂರಿನ ಸರಸ್ವತಿಪುರಂನಲ್ಲಿರುವ ಬಣಜಿಗ (ಬಲಿಜ) ವಿದ್ಯಾರ್ಥಿನಿಲಯದಲ್ಲಿ ಬಲಿಜ ಸಂಕಲ್ಪ ಯಾತ್ರೆಯ ಬಗ್ಗೆ ಚರ್ಚಿಸಲು ಆಯೋಜಿಸಿದ್ದ ಕಾರ್ಯಕ್ರಮವನ್ನು ಕರ್ನಾಟಕ ಪ್ರದೇಶ ಬಲಿಜ ಸಂಘದ ಅಧ್ಯಕ್ಷ ಪೆರಿಕಲ್ ಎಂ. ಸುಂದರ್ ಉದ್ಘಾಟಿಸಿದರು. ಪ್ರಧಾನ ಕಾರ್ಯದರ್ಶಿ ಸಿ. ಕೆ. ಜಗದೀಶ್, ಅರಗು ಮತ್ತು ಬಣ್ಣದ ಕಾರ್ಖಾನೆಯ ಮಾಜಿ ಅಧ್ಯಕ್ಷ ಎಚ್‌ಎ ವೆಂಕಟೇಶ್, ಎಚ್. ಆರ್. ಗೋಪಾಲಕೃಷ್ಣ, ಡಿ. ನಾಗರಾಜು, ಡಾ. ಟಿ ರಮೇಶ್, ಬಿ.ಕೆ .ಸುರೇಶ್ ಮತ್ತಿತರರು ಹಾಜರಿದ್ದರು.

ಅಮೆರಿಕದಲ್ಲಿ ಚೈನೀಸ್ ನ್ಯೂ ಇಯರ್ ಪಾರ್ಟಿ ವೇಳೆ ಶೂಟೌಟ್; 10ಕ್ಕೂ ಹೆಚ್ಚು ಮಂದಿ ಸಾವು

ಲಾಸ್ ಎಂಜಲೀಸ್, ಜ.22– ಅಮೆರಿಕದಲ್ಲಿ ನಡೆಯುತ್ತಿದ್ದ ಚೈನೀಸ್ ನ್ಯೂ ಇಯರ್ ಪಾರ್ಟಿ ವೇಳೆ ಶೂಟೌಟ್ ನಡೆದಿದ್ದು, ಈ ವೇಳೆ 10ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದಾರೆ ಎಂದು ತಿಳಿದು ಬಂದಿದೆ.

ಶನಿವಾರ ರಾತ್ರಿ ಕ್ಯಾಲಿಫೋರ್ನಿಯಾದ ಮಾಂಟೆರಿ ಪಾರ್ಕ್‌ನಲ್ಲಿ ಈ ಶೂಟೌಟ್ ನಡೆದಿದೆ. ಚೀನೀ ಚಾಂದ್ರಮಾನ ಪದ್ಧತಿಯ ಪ್ರಕಾರ ಅರಂಭವಾಗುವ ಹೊಸವರ್ಷವನ್ನು ಸಂಭ್ರಮಿಸಲು ಈ ವೇಳೆ ಅಲ್ಲಿ ಸಾವಿರಾರು ಮಂದಿ ನೆರೆದಿದ್ದರು. ಇದನ್ನೇ ಗುರಿಯಾಗಿಸಿಕೊಂಡು ಆಗಂತುಕ ದಾಳಿ ನಡೆಸಿದ್ದಾನೆ. ಲಾಸ್ ಏಂಜಲೀಸ್ ನಗರದ ಸಮೀಪ ಇರುವ ಮಾಂಟೆರೆ ಪಾರ್ಕ್‌ನಲ್ಲಿ ಶನಿವಾರ ರಾತ್ರಿ ಅಪರಿಚಿತ ದುಷ್ಕರ್ಮಿ ನಡೆಸಿದ ಗುಂಡಿನ ದಾಳಿಯಲ್ಲಿ ಕನಿಷ್ಠ 10 ಮಂದಿ ಸಾವನ್ನಪ್ಪಿರಬಹುದು ಎಂದು ಶಂಕಿಸಲಾಗಿದೆ. ಪೊಲೀಸರು ಸ್ಥಳಕ್ಕೆ ಧಾವಿಸಿದ್ದು ಸತ್ತವರ ಮತ್ತು ಗಾಯಗೊಂಡವರ ನಿಖರ ವಿವರಗಳು ಇನ್ನಷ್ಟೇ ತಿಳಿಯಬೇಕಿದೆ. ಗುಂಡಿನ ದಾಳಿ ನಡೆದಿರುವುದನ್ನು 'ಲಾಸ್ ಏಂಜಲೀಸ್ ಟೈಮ್ಸ್' ವರದಿಯು ದೃಢಪಡಿಸಿದೆ.

ಕ್ಯಾಲಿಫೋರ್ನಿಯಾದ ಸ್ಥಳೀಯ ಕಾಲಮಾನ ಶನಿವಾರ ರಾತ್ರಿ 10 ಗಂಟೆಯ ವೇಳೆಗೆ ಈ ದುರ್ಘಟನೆ ನಡೆದಿದೆ. ಚೀನೀ ಚಾಂದ್ರಮಾನ ಪದ್ಧತಿಯ ಪ್ರಕಾರ ಅರಂಭವಾಗುವ ಹೊಸವರ್ಷವನ್ನು ಸಂಭ್ರಮಿಸಲು ಈ ವೇಳೆ ಅಲ್ಲಿ ಸಾವಿರಾರು ಮಂದಿ ನೆರೆದಿದ್ದರು. ಲಾಸ್ ಏಂಜಲೀಸ್ ಕೌಂಟಿಯಲ್ಲಿರುವ ಮಾಂಟೆರೆ ಪಾರ್ಕ್ ಲಾಸ್ ಏಂಜಲೀಸ್ ನಗರದಿಂದ 11 ಕಿ.ಮೀ. ದೂರದಲ್ಲಿದೆ. ಇದೇ ಸಂದರ್ಭದಲ್ಲಿ ಆಗಂತುಕ ಗುಂಡಿನ ದಾಳಿ ನಡೆಸಿದ್ದಾನೆ.

